ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 15 ಗುರುವಾರ 2025

ಸಂಪುಟ: 46 | ಸಂಚಿಕೆ: 29 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಬಿ–ಖಾತಾ ಅವಧಿ 3 ತಿಂಗಳು ವಿಸ್ತರಣೆ

ನಗರಾಭಿವೃದ್ಧಿ–ನಗರ ಯೋಜನೆ ಸಚಿವ ಬಿ.ಎಸ್.ಸುರೇಶ ಘೋಷಣೆ

ಇದುವರೆಗೆ 10 ಲಕ್ಷ ಅರ್ಜಿ ಸಲ್ಲಿಕೆ; ಎರಡು ಲಕ್ಷ ಬಿ–ಖಾತಾ ವಿತರಣೆ



ಬೆಂಗಳೂರು: ರಾಜ್ಯದ ಮಹಾನಗರಪಾಲಿಕೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಅನಧಿಕೃತ ಕಟ್ಟಡ ಮತ್ತು ನಿವೇಶನಗಳಿಗೆ ಬಿ–ಖಾತಾ ನೀಡುವ ಅವಧಿಯನ್ನು ಮುಂದಿನ ಮೂರು ತಿಂಗಳವರೆಗೆ ವಿಸ್ತರಿಸಲಾಗಿದೆ ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬಿ.ಎಸ್.ಸುರೇಶ್ ತಿಳಿಸಿದ್ದಾರೆ.

ಈ ಬಗ್ಗೆ ಬೆಂಗಳೂರಿನಲ್ಲಿ ಪ್ರತಿಕ್ರಿಯೆ ನೀಡಿರುವ ಅವರು, ಮಹಾನಗರಪಾಲಿಕೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಅಂದರೆ, ಯಾವುದೇ ಪರವಾನಗಿ ಇಲ್ಲದೆ, ಭೂಪರಿವರ್ತನೆ ಮಾಡಿಸಿಕೊಳ್ಳದೇ, ನಕ್ಷೆ ಮಂಜೂರಾತಿ ಮಾಡಿಕೊಳ್ಳದೇ ಕಂದಾಯ ನಿವೇಶನಗಳಲ್ಲಿ ಕಟ್ಟಡಗಳನ್ನು ಕಟ್ಟಿಕೊಂಡಿದ್ದರೆ ಅಂತಹವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಬಿ–ಖಾತಾ ನೀಡಿ ಸಕ್ರಮಗೊಳಿಸುವ ಮಹತ್ವದ ನಿರ್ಧಾರ ಕೈಗೊಂಡಿತ್ತು. ಇದರನ್ವಯ ನಾಗರಿಕರಿಗೆ ಒಂದು ಬಾರಿಯ ಅವಕಾಶವನ್ನು ನೀಡಲಾಗಿತ್ತು. ನಾಗರಿಕರು ನಿಗದಿತ ಶುಲ್ಕಗಳನ್ನು ಪಾವತಿ ಮಾಡಿ ತಮ್ಮ ಕಟ್ಟಡಗಳಿಗೆ ಬಿ–ಖಾತಾ ಪಡೆದುಕೊಳ್ಳಬಹುದಾಗಿದೆ. ಈ ಅವಕಾಶವನ್ನು ಮೇ ತಿಂಗಳ 10ರ ವೇಳೆಗೆ ■ 6ನೇ ಪುಟಕ್ಕೆ

ಜಿಪಿಎ, ಕರಾರುದಾರರಿಗೂ ಬಿ–ಖಾತಾ ಕಲ್ಪಿಸಲು ಚಿಂತನೆ

“ ಇನ್ನು ನಿವೇಶನ ಅಥವಾ ಕಟ್ಟಡಗಳನ್ನು ಖರೀದಿಸಲು ಮುಂದಾಗಿ ಜಿಪಿಎ ಅಥವಾ ಅಗ್ರಿಮೆಂಟ್ ಮಾಡಿಕೊಂಡಿರುವ ನಾಗರಿಕರಿಗೂ ಬಿ–ಖಾತಾ ವಿತರಣೆಗೆ ಗಂಭೀರ ಚಿಂತನೆ ನಡೆಸಲಾಗಿದೆ. ಈ ಸಂಬಂಧ ಸದ್ಯದಲ್ಲೇ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತದೆ. ಇದರಿಂದ ಜಿಪಿಎ ಅಥವಾ ಕರಾರುದಾರರಿಗೂ ಅನುಕೂಲವಾಗಲಿದೆ. –ಬಿ.ಎಸ್.ಸುರೇಶ್



ಎಲ್ಲಾ ಅರ್ಹ ನಾಗರಿಕರು ಮತ್ತು ಅನಧಿಕೃತ ನಿರ್ಮಾಣಗಳನ್ನು ಹೊಂದಿರುವವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಬಿ–ಖಾತಾ ವಿತರಣೆಗೆ ಒಂದು ಬಾರಿಯ ಅವಕಾಶವನ್ನು ಕಲ್ಪಿಸಲಾಗಿದೆ. ಈ ಅವಧಿಯನ್ನು ಮುಂದಿನ ಮೂರು ತಿಂಗಳವರೆಗೆ ವಿಸ್ತರಣೆ ಮಾಡುವ ಮಹತ್ವದ ನಿರ್ಧಾರವನ್ನು ಕೈಗೊಳ್ಳಲಾಗಿದೆ.
–ಬಿ.ಎಸ್.ಸುರೇಶ್, ನಗರಾಭಿವೃದ್ಧಿ, ನಗರ ಯೋಜನೆ ಸಚಿವ.

ಮುಡಾ ಈಗ ಎಂಡಿಎ

ರಾಜಕಾರಣಿಗಳ ಕಾರುಬಾರಿಗೆ ಬ್ರೇಕ್

ಬೆಂಗಳೂರು, ಮೇ 14–ಹಾಲಿ ಇರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಯುಗಾಂತ್ಯಗೊಳ್ಳುತ್ತಿದ್ದು, 'ಮೈಸೂರು ಅಭಿವೃದ್ಧಿ ಪ್ರಾಧಿಕಾರ' (ಎಂಡಿಎ) ಅಸ್ತಿತ್ವಕ್ಕೆ ಬರಲಿದೆ. ಈ ಸಂಬಂಧ ಇಂದು (ಮೇ 14) ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಈ ಅಧಿಸೂಚನೆಯಲ್ಲಿ ಮೈಸೂರು ಸ್ಥಳೀಯ ಯೋಜನಾ ಪ್ರದೇಶಕ್ಕಾಗಿ ಸರ್ಕಾರವು ಮೈಸೂರು ಅಭಿವೃದ್ಧಿ ಪ್ರಾಧಿಕಾರ ಎಂದು ಕರೆಯಲ್ಪಡುವ ಒಂದು ಪ್ರಾಧಿಕಾರವನ್ನು ಅಧಿಸೂಚನೆ ಮೂಲಕ ರಚಿಸತಕ್ಕದ್ದು ಎಂದು ತಿಳಿಸಲಾಗಿದೆ.



ಪ್ರಾಧಿಕಾರವು ಓರ್ವ ಅಧ್ಯಕ್ಷ, ಸದಸ್ಯರಾಗಿ ಲೆಕ್ಕಪತ್ರಗಳಲ್ಲಿ ಮತ್ತು ಲೆಕ್ಕ ಪರಿಶೋಧನೆಯಲ್ಲಿ ವಿದ್ಯಾರ್ಹತೆಗಳುಳ್ಳ, ಹಣಕಾಸು ಸದಸ್ಯರೆಂದು ಕರೆಯಲ್ಪಡುವ ವ್ಯಕ್ತಿ, ಚೀಫ್ ಇಂಜಿನಿಯರ್ ದರ್ಜೆಗೆ ಕಡಿಮೆ ಇಲ್ಲದ ಕರ್ನಾಟಕ ಎಂಜಿನಿಯರಿಂಗ್ ಸೇವೆಯಲ್ಲಿ ಅಧಿಕಾರಿಯಾಗಿರುವ ಒಬ್ಬ ಇಂಜಿನಿಯರ್ ಅಥವಾ ರಾಜ್ಯ ಸರ್ಕಾರದ ಒಡೆತನದಲ್ಲಿನ ಅಥವಾ ನಿಯಂತ್ರಣದಲ್ಲಿನ ಯಾವುದೇ ಉದ್ದಿಮೆಯಲ್ಲಿನ ಅಧಿಕಾರಿಯಾಗಿರುವ ಒಬ್ಬ ವ್ಯಕ್ತಿ, ನಗರ ಮತ್ತು ಗ್ರಾಮಾಂತರ ಯೋಜನಾ ವಿಷಯದಲ್ಲಿ ಪದವಿ ಪಡೆದಿರುವ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅಪರ ನಿರ್ದೇಶಕರ ದರ್ಜೆಗೆ ಕಡಿಮೆ ಇಲ್ಲದ ಅಧಿಕಾರಿಯಾಗಿರುವ ನಗರ ಯೋಜಕ, ವಾಸ್ತುಶಿಲ್ಪದಲ್ಲಿ ಅನುಭವವಿರುವ ಒಬ್ಬ ವ್ಯಕ್ತಿ, ಮೈಸೂರು ಮಹಾನಗರಪಾಲಿಕೆ ಆಯುಕ್ತರು (ಪದನಿಮಿತ್ತ), ಸರ್ಕಾರದ ಉಪ ಕಾರ್ಯದರ್ಶಿ ■ 6ನೇ ಪುಟಕ್ಕೆ

ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ವೆಂಕಟೇಶ್ ಬೆಂಗಾವಲು ವಾಹನ ಉರುಳಿ

ಎಸ್ಐ, ಚಾಲಕನಿಗೆ ತೀವ್ರ ಗಾಯ

ಬಿಳಿಗಿರಿರಂಗನ ಬೆಟ್ಟದಲ್ಲಿ ದುರಂತ

ಚಾಮರಾಜನಗರ,ಮೇ14– ಚಾಮರಾಜನಗರದ ಜಿಲ್ಲಾ ಉಸ್ತುವಾರಿ ಸಚಿವ ವೆಂಕಟೇಶ್‌ರ ಬೆಂಗಾವಲು ಸಿಬ್ಬಂದಿ ಸಂಚರಿಸುತ್ತಿದ್ದ ವಾಹನ ಉರುಳಿ ಬಿದ್ದು ಸಬ್‌ಇನ್ಸ್‌ಪೆಕ್ಟರ್ ಸೇರಿ ಇಬ್ಬರು ಗಾಯಗೊಂಡಿರುವ ಘಟನೆ ಬುಧವಾರ ಸಂಜೆ ಬಿಳಿಗಿರಿರಂಗನಬೆಟ್ಟದಲ್ಲಿ ನಡೆದಿದೆ. ಸಬ್‌ಇನ್ಸ್‌ಪೆಕ್ಟರ್ ಆಕಾಶ್ ಹಾಗೂ ಚಾಲಕ ಪ್ರತಾಪ್ ಗಾಯಗೊಂಡಿದ್ದಾರೆ. ಉಸ್ತುವಾರಿ ಸಚಿವರು ಬುಧವಾರ ಮಧ್ಯಾಹ್ನ ■ 6ನೇ ಪುಟಕ್ಕೆ



ಮಡಿಕೇರಿಯಲ್ಲಿ ಸಿದ್ದರಾಮಯ್ಯನವರ ಕಾರಿನ ಮೇಲೆ ಮೊಟ್ಟೆ ಎಸೆತ ಪ್ರಕರಣದ ಪ್ರಮುಖ ಆರೋಪಿ ಶಂಭು ಭೀಕರ ಹತ್ಯೆ

ಸಕಲೇಶಪುರ ಅರಣ್ಯ ಪ್ರದೇಶದಲ್ಲಿ ಕೊಳೆತ ಸ್ಥಿತಿಯಲ್ಲಿ ಶವ ಪತ್ತೆ

ಹಾಸನ, ಮೇ 14– ಬಿಜೆಪಿ ಅಧಿಕಾರದ ಅವಧಿಯಲ್ಲಿ ವಿಪಕ್ಷ ನಾಯಕರಾಗಿದ್ದ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಡಿಕೇರಿಗೆ ಭೇಟಿ ನೀಡಿದ್ದ ವೇಳೆ ಇವರ ಕಾರಿನ ಮೇಲೆ ಮೊಟ್ಟೆ ಎಸೆದಿದ್ದ ಪ್ರಕರಣದ ಪ್ರಮುಖ ಆರೋಪಿ ಸಂಪತ್ ಅಲಿಯಾಸ್ ಶಂಭುವನ್ನು ಭೀಕರವಾಗಿ ಕೊಚ್ಚಿ ಕೊಲೆ ಮಾಡಿ, ಮೃತದೇಹವನ್ನು ಸಕಲೇಶಪುರ ತಾಲೂಕಿನ ಕಲ್ಲಹಳ್ಳಿ ಬಳಿಯ ಪ್ರಪಾತಕ್ಕೆ ಎಸೆಯಲಾಗಿದೆ.

ಕೊಲೆಯಾಗಿರುವ ಸಂಪತ್ ಗುತ್ತಿಗೆದಾರನಾಗಿದ್ದು, ಕೊಡಗು ಜಿಲ್ಲೆ ಸೋಮವಾರಪೇಟೆ ತಾಲೂಕು ಕಕ್ಕೆಹೊಳೆ ಜಂಕ್ಷನ್ ನಿವಾಸಿ. ಈತ ಏಪ್ರಿಲ್ 9ರಂದು ತನ್ನ ಗೆಳೆಯ ಜಾನ್ ಎಂಬುವರ ಕಾರು ತೆಗೆದುಕೊಂಡು ಕುಶಾಲನಗರದಿಂದ ಹಾಸನದತ್ತ ತೆರಳಿದ್ದರು. ನಂತರ ಇವರ ಮೊಬೈಲ್ ಸ್ವಿಚ್ ಆಫ್ ಆಗಿದ್ದು, ಈ ಹಿನ್ನೆಲೆಯಲ್ಲಿ ಕುಟುಂಬದವರು ಕುಶಾಲನಗರ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಿದ್ದರು ಎನ್ನಲಾಗಿದೆ.



ಸಂಪತ್ ಅಲಿಯಾಸ್ ಶಂಭು

ಮರುದಿನ ಏಪ್ರಿಲ್ 10ರಂದು ಹಾಸನ ಜಿಲ್ಲೆಯ ಕಲ್ಲಹಳ್ಳಿ ಗ್ರಾಮದ ಬಳಿ ಸಂಪತ್ ತೆಗೆದುಕೊಂಡು ಹೋಗಿದ್ದ ಕಾರು ಪತ್ತೆಯಾಗಿದ್ದು, ಕಾರಿನಲ್ಲಿ ರಕ್ತದ ಕಲೆ ಗುರುತುಗಳು ಕಂಡುಬಂದಿವೆ. ಈ ಹಿನ್ನೆಲೆಯಲ್ಲಿ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ■ 6ನೇ ಪುಟಕ್ಕೆ

ಆಪರೇಷನ್ ಸಿಂಧೂರ್ ಬೆಂಬಲಿಸಲು ನಾಳೆ ತಿರಂಗ ಯಾತ್ರೆ

ಪಕ್ಷಾತೀತವಾಗಿ ನಡೆಯುವ ಯಾತ್ರೆಯಲ್ಲಿ ಸಾವಿರಾರು ಮಂದಿ ಭಾಗಿ ಸಾಧ್ಯತೆ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸಂಸದ ಯದುವೀರ್ ಒಡೆಯರ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

"ಈಗ ಭಾರತ ಕದನ ವಿರಾಮ ಘೋಷಣೆ ಮಾಡಿರಬಹುದು. ಆದರೆ ಭಯೋತ್ಪಾದಕರ ಪೋಷಣೆ ನಿಲ್ಲಿಸುವ ತನಕ ಪಾಕಿಸ್ತಾನದ ಜೊತೆ ಮಾತುಕತೆ ಸಾಧ್ಯವಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಈಗಾಗಲೇ ಹೇಳಿದ್ದಾರೆ. ಭಾರತೀಯ ಸೈನಿಕರು ಯಾವ ಪಕ್ಷದ ಪರವಾಗಿ ಈ ಕಾರ್ಯಾಚರಣೆ ಮಾಡಿಲ್ಲ. ಭಾರತದ ಪರವಾಗಿ ಪಕ್ಷಾತೀತವಾಗಿ ಕಾರ್ಯಾಚರಣೆ ಮಾಡಿ ಉಗ್ರರನ್ನು ಸದೆಬಡಿದಿದ್ದಾರೆ.
–ಯದುವೀರ್ ಒಡೆಯರ್, ಸಂಸದ

ಮೈಸೂರು, ಮೇ14(ಬಿಎಲ್‌ಯು)– ಪಾಕಿಸ್ತಾನ ವಿರುದ್ಧ ಭಾರತೀಯ ಯೋಧರು ನಡೆಸಿದ 'ಆಪರೇಷನ್ ಸಿಂಧೂರ್' ಬೆಂಬಲಿಸಿ ಮೇ 16 ರಂದು ಮೈಸೂರಿನಲ್ಲಿ 'ತಿರಂಗ ಯಾತ್ರೆ' ನಡೆಸುವುದಾಗಿ ಮೈಸೂರು–ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವುದೇ ಪಕ್ಷದ ಚಿಹ್ನೆ ಇಲ್ಲದೆ ಪಕ್ಷಾತೀತವಾಗಿ ತಿರಂಗಾ ಯಾತ್ರೆ ನಡೆಸಲಾಗುತ್ತಿದೆ ಎಂದು ಹೇಳಿದರು.

ನಾವೆಲ್ಲರೂ ನಿರ್ಭೀತಿಯಿಂದ ಬದುಕಲು ದೇಶದ ಗಡಿ ಕಾಯುತ್ತಿರುವ ಯೋಧರೇ ಕಾರಣ. ನಮ್ಮ ಯೋಧರಿಗೆ ಗೌರವ ಸಲ್ಲಿಸಿ, ಬೆಂಬಲ ನೀಡಬೇಕಿರುವುದು ನಮ್ಮೆಲ್ಲರ ಕರ್ತವ್ಯ ಎಂದು ಹೇಳಿದರು.

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನು ಉಗ್ರರು ಭೀಕರವಾಗಿ ಹತ್ಯೆ ಮಾಡಿದ್ದಾರೆ. ಹಿಂದೂ ಧರ್ಮಿಯರನ್ನು ಗುರುತಿಸಿ ಗುಂಡು ಹಾರಿಸಿ ಕೊಂದಿದ್ದಾರೆ. ಭಯೋತ್ಪಾದಕರ ಈ ಕೃತ್ಯಕ್ಕೆ ಜಾಗತಿಕವಾಗಿ ವ್ಯಾಪಕ ಖಂಡನೆ ವ್ಯಕ್ತವಾಗಿದೆ. ಭಯೋತ್ಪಾದಕರನ್ನು ಪೋಷಣೆ ಮಾಡುತ್ತಿರುವ ಪಾಕಿಸ್ತಾನಕ್ಕೂ ವಿಶ್ವದ ಹಲವು ರಾಷ್ಟ್ರಗಳು ತಪರಾಕಿ ಹಾಕಿವೆ ಎಂದು ಯದುವೀರ್ ತಿಳಿಸಿದರು.

ಪಹಲ್ಗಾಮ್‌ನಲ್ಲಿ ಮೃತಪಟ್ಟವರ ಜೀವ ತರಲು ಸಾಧ್ಯವಿಲ್ಲ. ಆದರೆ ಅವರನ್ನು ಹತ್ಯೆ ಮಾಡಿದವರಿಗೆ ಬುದ್ಧಿ ಕಲಿಸುವ ಮೂಲಕ ಅವರ ಆತ್ಮಕ್ಕೆ ಶಾಂತಿ ನೀಡಿದ್ದೇವೆ. ಪಾಕಿಸ್ತಾನದಲ್ಲಿರುವ ಉಗ್ರರನ್ನು ನಿಖರ ಹಾಗೂ ನಿರ್ದಿಷ್ಟವಾಗಿ ಹೊಡೆದುರುಳಿಸಲಾಗಿದೆ. ಈ ಮೂಲಕ ಭಾರತದ ಶಕ್ತಿ ಏನೆಂದು ವಿಶ್ವಕ್ಕೆ ನಮ್ಮ ಯೋಧರು ತೋರಿಸಿದ್ದಾರೆ. ನಮ್ಮ ಗುರಿ ಭಯೋತ್ಪಾದನೆಯೇ ಹೊರತು, ಪಾಕಿಸ್ತಾನವಲ್ಲ ಎಂಬ ಸಂದೇಶ ಕೂಡ ಸಾರಿದ್ದೇವೆ ಎಂದರು.

ಆಪರೇಷನ್ ಸಿಂಧೂರ್ ಬಗ್ಗೆ ಚರ್ಚಿಸಲು ಸರ್ವಪಕ್ಷ ಸಭೆ ಇಲ್ಲವೇ ಸಂಸತ್ತಿನ ವಿಶೇಷ ಅಧಿವೇಶನ ಕರೆಯುವುದಕ್ಕೆ ಶಿಷ್ಟಾಚಾರವಿರುತ್ತದೆ. ಈ ಹಿನ್ನೆಲೆಯಲ್ಲಿ ನರೇಂದ್ರ ಮೋದಿಯವರು ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತಾರೆ ಎಂದು ಯದುವೀರ್ ತಿಳಿಸಿದರು.

ತರುವಾಯ ಮಾತನಾಡಿದ ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ರಾಷ್ಟ್ರ ರಕ್ಷಣೆಗಾಗಿ ನಾಗರಿಕರು ಎಂಬ ಘೋಷವಾಕ್ಯದೊಂದಿಗೆ ಮೇ 16ರಂದು ತಿರಂಗ ಯಾತ್ರೆ ನಡೆಸಲಾಗುತ್ತಿದೆ. ಅಂದು ಬೆಳಗ್ಗೆ 10 ಗಂಟೆಗೆ ನಗರದ ಮೆಟ್ರೋಪೋಲ್ ಬಳಿಯ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಿಂದ ಶಿವರಾಂಪೇಟೆವರೆಗೆ ಮೆರವಣಿಗೆ ಹೊರಟು ಪ್ರಮುಖ ರಸ್ತೆಗಳಲ್ಲಿ ಸಾಗಿ ಮತ್ತೆ ಮೆಟ್ರೋಪೋಲ್ ವೃತ್ತಕ್ಕೆ ಮೆರವಣಿಗೆ ವಾಪಸ್ಸಾಗಲಿದೆ. ಈ ಮೆರವಣಿಗೆಯಲ್ಲಿ ಸಾವಿರಾರು ಮಂದಿ ಭಾಗವಹಿಸುತ್ತಾರೆ ಎಂದು ಹೇಳಿದರು. ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಪ್ರಕೋಷ್ಠ ರಾಜ್ಯ ಸಂಚಾಲಕ ಫಣೀಶ್, ಅಲ್ಪಸಂಖ್ಯಾತರ ಘಟಕದ ರಾಜ್ಯಾಧ್ಯಕ್ಷ ಡಾ.ಅನಿಲ್ ಥಾಮಸ್, ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಉಪಾಧ್ಯಕ್ಷ ಜೋಗಿಮಂಜು, ಮಾಜಿ ಮೇಯರ್‌ಗಳಾದ ಸಂದೇಶ್‌ಸ್ವಾಮಿ, ಶಿವಕುಮಾರ್, ಮಾಧ್ಯಮ ವಕ್ತಾರ ಮಹೇಶ್‌ರಾಜ್ ಅರಸ್ ಇನ್ನಿತರರು ವೇದಿಕೆಯಲ್ಲಿದ್ದರು.

ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಪ್ರಕ್ರಿಯೆ ತ್ವರಿತಗೊಳಿಸಲು ಸಿಎಂಗೆ ಮನವಿ

ಮೈಸೂರು, ಮೇ14(ಬಿಎಲ್‌ಯು)– ಮೈಸೂರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಮಾಡುವ ಸಂಬಂಧ ಪ್ರಕ್ರಿಯೆ ಚುರುಕುಗೊಳಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಲಾಗಿದೆ ಎಂದು ಸಂಸದ ಯದುವೀರ್ ಒಡೆಯರ್ ತಿಳಿಸಿದರು.

ಮೈಸೂರಿನಲ್ಲಿ ಕ್ರಿಕೆಟ್ ಸ್ಟೇಡಿಯಂ ಅವಶ್ಯವಿದೆ ಎಂದು ಕೆಎಸ್‌ಸಿಎ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಅಂದು ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ ಭೂಮಿ ಗುರುತಿಸಿತ್ತು. ಈಗ ಭೂಮಿ ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ಆರಂಭವಾಗಿದ್ದು, ಇದನ್ನು ಚುರುಕುಗೊಳಿಸುವಂತೆ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮನವಿ ಮಾಡಿದ್ದೇನೆ ಎಂದರು. ಸ್ಥಳೀಯವಾಗಿ ಬಹಳಷ್ಟು ಸಮಸ್ಯೆಗಳಿದ್ದು, ಅದನ್ನು ಪರಿಹಾರ ಮಾಡಲು ಜನಪ್ರತಿನಿಧಿಗಳ ಸಹಕಾರ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಪಾಲಿಕೆ ಚುನಾವಣೆ ನಡೆಸಬೇಕಿದೆ. ಇದನ್ನು ಮನಗಂಡು ರಾಜ್ಯ ಸರ್ಕಾರ ಕೂಡಲೇ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬೇಕು ಎಂದು ಯದುವೀರ್ ಆಗ್ರಹಿಸಿದರು.

ಮಾತಾ ವಿಜಯಕುಮಾರಿ ವಿ.ರಾವ್ ಪ್ರಶಸ್ತಿ ಪ್ರದಾನ

ನಿತ್ಯ ತಾಯಿಗೆ ಗೌರವ ನೀಡಿದರೆ ಪ್ರತಿನಿತ್ಯ ತಾಯಂದಿರ ದಿನವಾಗುತ್ತೆ


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್‌ನಿಂದ ಅಮ್ಮನ ದಿನಾಚರಣೆ ಅಂಗವಾಗಿ ಮಹಿಳಾ ಸಾಧಕಿಯರಿಗೆ ಮಾತಾ ವಿಜಯಕುಮಾರಿ ವಿ.ರಾವ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು,ಮೇ14(ಜಿಎ)–ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್ ವತಿಯಿಂದ ವಿಶ್ವ ಅಮ್ಮನ ದಿನಾಚರಣೆ ಅಂಗವಾಗಿ ಬುಧವಾರ ಮಹಿಳಾ ಸಾಧಕಿಯರಿಗೆ ಮಾತಾ ವಿಜಯಕುಮಾರಿ ವಿ.ರಾವ್ ಪ್ರಶಸ್ತಿ ಪ್ರದಾನ ಮಾಡಲಾಯಿತು.


ಕಾರ್ಯಕ್ರಮದಲ್ಲಿ ಮಾತಾ ವಿಜಯಕುಮಾರಿ ವಿ.ರಾವ್ ಅವರ ಭಾವಚಿತ್ರಕ್ಕೆ ಅತಿಥಿಗಳಾಗಿ ಭಾಗವಹಿಸಿದ್ದ ಹಿರಿಯ ಸಮಾಜ ಸೇವಕರಾದ ಡಾ.ಕೆ.ರಘುರಾಂ ವಾಜಪೇಯಿ ಮತ್ತಿತರ ಗಣ್ಯರು ಪುಷ್ಪಾರ್ಚನೆ ಮಾಡಿದರು.

ಸಂಸ್ಕೃತ ವಿದುಷಿ ಡಾ.ಕೆ.ಲೀಲಾಪ್ರಕಾಶ್ ಅವರು ಇಬ್ಬರು ಮಹಿಳಾ ಸಾಧಕಿಯರಾದ ಎಸ್.ಅನು (ಸಮಾಜ ಸೇವೆ), ಹರ್ಷಿತ ಎಸ್.ಅಯ್ಯರ್ (ಶಿಕ್ಷಣ) ಅವರಿಗೆ ನಗದು, ಮಾತಾ ವಿಜಯಕುಮಾರಿ ವಿ.ರಾವ್ ಪ್ರಶಸ್ತಿ ಫಲಕ ನೀಡಿ ಅಭಿನಂದಿಸಿದರು.

ನಂತರ ಮಾತನಾಡಿದ ಅವರು, ತಾಯಿ ಮೇಲೆ ಪ್ರೀತಿ ಇದೆ ಎಂದು ಹೇಳಿಕೊಳ್ಳುವುದು ಬಹಳ ಸುಲಭ. ಆದರೆ ನಿಜವಾಗಿ ತಾಯಿಗೆ ನಿತ್ಯ ಗೌರವವನ್ನು, ಆದರವನ್ನು ನೀಡಿ ಅವರನ್ನು ಖುಷಿಯಿಂದ ನೋಡಿಕೊಂಡರೆ ಪ್ರತಿನಿತ್ಯ ತಾಯಂದಿರ ದಿನವಾಗುತ್ತದೆ. ವಿಶ್ವದಲ್ಲಿ ಕೇವಲ ಒಂದು ದಿನ ಮಾತ್ರ ತಾಯಂದಿರ ದಿನವನ್ನು ಆಚರಿಸುತ್ತಾರೆ. ಆದರೆ ಭಾರತದಲ್ಲಿ ಪ್ರತಿದಿನ ತಾಯಂದಿರಿಗೆ ಗೌರವ ನೀಡುವ ಮೂಲಕ ಆಚರಿಸಲಾಗುತ್ತಿದೆ. ವಿದೇಶದಲ್ಲಿ ಇಂತಹ ಸತ್ಕಾರ ತಾಯಿಗೆ ಸಿಗುವುದಿಲ್ಲ. ಆದರೆ ನಮ್ಮ ದೇಶದಲ್ಲಿ ಹೆಣ್ಣಿಗೆ ಗೌರವವನ್ನು ನೀಡಿ ಶಕ್ತಿಯ ರೂಪದಲ್ಲಿ ಆರಾಧಿಸುತ್ತಾರೆ ಎಂದರು.

ಇವತ್ತಿನ ಕಾಲಮಾನದಲ್ಲಿ ಸಾಕಷ್ಟು ಬದಲಾವಣೆಗಳು ಆಗುತ್ತಿರುವುದನ್ನು ಗಮನಿಸಿದ್ದೇವೆ. ಇಂದಿನ ಯುವ ಜನಾಂಗ ತಾವು ಪಡೆಯುತ್ತಿರುವಂತಹ ಶಿಕ್ಷಣ, ಜ್ಞಾನಾರ್ಜನೆ, ಭಾಷಾ ಮಾಧ್ಯಮಗಳ ಪ್ರಭಾವಕ್ಕೊಳಗಾಗಿ ನಮ್ಮ ಸಂಸ್ಕೃತಿಯನ್ನು ಕಡೆಗಣಿಸುವಂತಾಗಿದೆ. ಗುರು ಹಿರಿಯರಿಗೆ ಅದರಲ್ಲೂ ತಮ್ಮನ್ನು ಪೋಷಿಸಿದ ಮಾತಾಪಿತೃಗಳಿಗೆ ಗೌರವ ಕೊಡುವುದನ್ನು ಮರೆಯುವಂತಾಗಿದೆ. ಅದಕ್ಕೆ ವಿರುದ್ಧವಾಗಿ ಇಂದು ತಮ್ಮ ತಾಯಿಯ ನೆನಪಿನಲ್ಲಿ ವಿ.ನಾಗೇಂದ್ರ ಬಾಬು ಅವರು ಮಾಡುತ್ತಿರುವ ಕಾರ್ಯ ಮೆಚ್ಚುವಂತದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್ ಕುಮಾರ್, ಕಾಳಿದಾಸ ರಸ್ತೆ ಶ್ರೀ ಲಕ್ಷ್ಮಿ ನರಸಿಂಹಸ್ವಾಮಿ ದೇವಸ್ಥಾನದ ಸಿಇಒ ಕೆ.ಆರ್.ಯೋಗಾನರಸಿಂಹನ್, ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ವಿ.ನಾಗೇಂದ್ರಬಾಬು, ಸಂಚಾಲಕ ಚಕ್ರಪಾಣಿ ಇನ್ನಿತರರು ಉಪಸ್ಥಿತರಿದ್ದರು.

ಮೇ 18ರವರೆಗೆ ಪುಸ್ತಕ ದಾಸ್ತಾನು ಪರಿಶೀಲನೆ ಅವಧಿ ವಿಸ್ತರಣೆ



ಮೈಸೂರು, ಮೇ 14–ಮೈಸೂರು ನಗರ ಕೇಂದ್ರ ಗ್ರಂಥಾಲಯ ಕಚೇರಿಯ ಅಧೀನ ಕುವೆಂಪು ಸಂಚಾರಿ ಗ್ರಂಥಾಲಯದ 2024–25ನೇ ಸಾಲಿನ ಪುಸ್ತಕ ದಾಸ್ತಾನು ಪರಿಶೀಲನೆ ಪ್ರಗತಿಯಲ್ಲಿ ಇರುವುದರಿಂದ, ಮೇ 18ರವರೆಗೆ ಪುಸ್ತಕ ದಾಸ್ತಾನು ಪರಿಶೀಲನೆಯನ್ನು ವಿಸ್ತರಿಸಲಾಗಿದೆ. ಆದ್ದರಿಂದ ಸಾರ್ವಜನಿಕರಿಗೆ ಗ್ರಂಥಾಲಯದ ಸೇವೆಯನ್ನು ಒದಗಿಸಲು ಸಾಧ್ಯವಾಗುವುದಿಲ್ಲದ ಕಾರಣ ಸಾರ್ವಜನಿಕ ಓದುಗರು ಸಹಕರಿಸಬೇಕೆಂದು ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕ ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಸೇವಾ ಶುಲ್ಕ ಹೆಚ್ಚಳ: ಭಕ್ತರ ಬೇಸರ


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಜೆಡಿಎಸ್ ನಗರ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯದರ್ಶನ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಮೇ 14(ಎಂಟಿವೈ)– ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದಲ್ಲಿ ಸೇವಾ ಶುಲ್ಕ ಹೆಚ್ಚಳ ಮಾಡುವ ಮೂಲಕ ಭಕ್ತರಿಂದ ಹಣ ಸುಲಿಗೆ ಮಾಡಲಾಗುತ್ತಿದೆ ಎಂದು ಜೆಡಿಎಸ್ ನಗರ ಕಾರ್ಯಾಧ್ಯಕ್ಷ ಎಸ್. ಪ್ರಕಾಶ್ ಪ್ರಿಯದರ್ಶನ್ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಚಾಮುಂಡಿಬೆಟ್ಟದ ದೇವಾಲಯದಲ್ಲಿ 220 ರೂ. ಶುಲ್ಕ ಪಾವತಿಸಿದರೆ ಏಕವಾರ ಪಂಚಾಮೃತ ಅಭಿಷೇಕ ಹಾಗೂ ಏಕವಾರ ಅಭಿಷೇಕ ಮಾಡಿಸಬಹುದಾಗಿತ್ತು. ಆದರೆ, ಇದೀಗ ಪಂಚಾಮೃತ ಅಭಿಷೇಕ ಸೇವೆಯನ್ನು ರದ್ದು ಮಾಡಲಾಗಿದೆ. ಅಲ್ಲದೆ, 550 ಶುಲ್ಕ ಪಾವತಿಸಿ ಅಭಿಷೇಕ ಸೇವೆ ಮಾಡಿಸಲು ಅವಕಾಶ ನೀಡಲಾಗಿದೆ. ಕುಟುಂಬ ಸದಸ್ಯರ ಹುಟ್ಟುಹಬ್ಬ ಹಾಗೂ ವಿವಿಧ ಕಾರಣಗಳಿಂದ ಬೆಟ್ಟಕ್ಕೆ ಬಂದು ಅಭಿಷೇಕ ಮಾಡಿಸುತ್ತಿದ್ದ ಭಕ್ತರಿಗೆ ಹೊಸ ದರದಿಂದ ಹೊರೆಯಾಗಿದೆ. ಕಡಿಮೆ ಶುಲ್ಕದ ಸೇವೆಗೆ ಟಿಕೆಟ್ ಪಡೆಯುತ್ತಿದ್ದ ಭಕ್ತರು ಇದೀಗ ದುಬಾರಿ ಶುಲ್ಕದ ಸೇವೆ ಮಾಡಿಸಬೇಕಾದ ಅನಿವಾರ್ಯತೆ ಎದುರಾಗಿದೆ. ಭಕ್ತರ ಜೇಬಿಗೆ ಕತ್ತರಿ ಬಿದ್ದಿದೆ. ಈಗಾಗಲೇ ಸರ್ಕಾರ ಮದ್ಯದ ಬೆಲೆ, ಬಸ್ ದರ, ವಿದ್ಯುತ್ ದರ ಸೇರಿದಂತೆ ವಿವಿಧ ದರವನ್ನು ಹೆಚ್ಚಳ ಮಾಡಿದೆ. ದರ ಹೆಚ್ಚಳದಿಂದ ಜನ ತತ್ತರಿಸಿದ್ದಾರೆ. ಈಗ ಧಾರ್ಮಿಕ ಆಚರಣೆಗಳ ಮೇಲೂ ಸರ್ಕಾರ ಕಣ್ಣಿಟ್ಟು ಸೇವಾ ಶುಲ್ಕ ಹೆಚ್ಚಳ ಮಾಡಿ ಗ್ಯಾರಂಟಿ ಯೋಜನೆಗೆ ಹಣ ಸಂಗ್ರಹ ಮಾಡಿಕೊಳ್ಳಲು ಮುಂದಾಗಿರುವ ಶಂಕೆ ವ್ಯಕ್ತವಾಗಿದೆ ಎಂದು ಆರೋಪಿಸಿದರು.

ಕೂಡಲೇ ಸೇವಾ ಶುಲ್ಕದ ದರ ಕಡಿಮೆ ಮಾಡಬೇಕು. ಬೆಟ್ಟಕ್ಕೆ ಬರುವ ಪ್ರವಾಸಿಗರು, ಭಕ್ತರಿಗೆ ಕುಡಿಯುವ ನೀರು, ಶೌಚಾಲಯ, ಸರದಿ ಸಾಲಿನಲ್ಲಿ ನಿಲ್ಲಲು ನೆರಳಿನ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಜೆಡಿಎಸ್ ವತಿಯಿಂದ ಪ್ರತಿಭಟನೆ ನಡೆಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಮುಖಂಡರಾದ ರಾಜಶೇಖರ್, ಸುಹಾಸ್, ಚಂದ್ರು, ಮಧುವನ ಚಂದ್ರು, ಫಾಲ್ಕನ್ ಬೋರೇಗೌಡ, ಪಿ. ಕುಮಾರ್ ಇದ್ದರು.

ಹಿಂದೂಸ್ತಾನ್ ಕಾಲೇಜಲ್ಲಿ ನಾಳೆ ಕ್ಯಾಂಪಸ್ ಪ್ಲೇಸ್‌ಮೆಂಟ್ ಡ್ರೈವ್

ಮೈಸೂರು,ಮೇ 14(ಎಂಟಿವೈ)– ಮೈಸೂರಿನ ಜೆ.ಪಿ.ನಗರದಲ್ಲಿರುವ ಹಿಂದೂಸ್ತಾನ್ ಕಾಲೇಜಿನಲ್ಲಿ ಮೇ 16ರಂದು ಕ್ಯಾಂಪಸ್ ಪ್ಲೇಸ್‌ಮೆಂಟ್ ಡ್ರೈವ್ ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ಲೇಸ್‌ಮೆಂಟ್ ಸೆಲ್‌ನ ಮುಖ್ಯಸ್ಥರಾದ ಎಸ್.ವಿನಂತಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿರುವ ಹಿಂದೂಸ್ತಾನ್ ಕಾಲೇಜಿನಲ್ಲಿ ಟ್ರೈನಿಂಗ್ ಅಂಡ್ ಪ್ಲೇಸ್‌ಮೆಂಟ್ ಸೆಲ್ ವತಿಯಿಂದ ರಾಜ್ಯ ಮಟ್ಟದ ಪೂಲ್ ಕ್ಯಾಂಪಸ್ ಪ್ಲೇಸ್‌ಮೆಂಟ್ ಡ್ರೈವ್ ಆಯೋಜಿಸಲಾಗಿದ್ದು, ಮೇ 16ರಂದು ಬೆಳಗ್ಗೆ 9.30ರಿಂದ ಸಂಜೆ 5.30ರವರೆಗೆ ನಡೆಯಲಿರುವ ಈ ಪೂಲ್ ಕ್ಯಾಂಪಸ್ ಪ್ಲೇಸ್‌ಮೆಂಟ್ ಡ್ರೈವ್ ನಲ್ಲಿ ಥ್ಯಾಂಕ್ ಬುಕ್, ಕ್ರಿಯಾ ನೆಕ್ಸ್‌ವೆಲ್ತ್, ಆರ್ ಪ್ರೋಸೆಸ್, ಜಸ್ಟ್ ಡಯಲ್, ಟೀಮ್ ಲೀಸ್, ಪ್ರೋಬ್ ಸೆಲ್ಯೂಷನ್, ಟೆಕ್ನಿ ಟಾಸ್ಕ್, ಮುತ್ತೂಟ್ ಫೈನಾನ್ಸ್, ಇಂಡಿಯನ್ ಕ್ಯಾಪಿಟಲ್, ಸ್ಟೈಪ್ ಟೆಕ್ ಸೇರಿದಂತೆ ಹಲವು ಸಂಸ್ಥೆಗಳು ಪಾಲ್ಗೊಳ್ಳಲಿವೆ ಎಂದರು.

ಪ್ರಸ್ತುತ ಶೈಕ್ಷಣಿಕ ವರ್ಷದ ಅಂತಿಮ ಚಾತುರ್ಮಾಸದಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಸ್ನಾತಕ, ಸ್ನಾತಕೋತ್ತರ ಹಾಗೂ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಹಾಗೂ 2024. 2023, 2022ನೇ ಸಾಲಿನಲ್ಲಿ ಸ್ನಾತಕ, ಸ್ನಾತಕೋತ್ತರ ಹಾಗೂ ಇಂಜಿನಿಯರಿಂಗ್‌ನಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಭಾಗವಹಿಸಲು ಅರ್ಹರಾಗಿದ್ದಾರೆ ಎಂದು ತಿಳಿಸಿದರು.

ಭಾಗವಹಿಸಲು ಇಚ್ಛಿಸುವ ಅರ್ಹ ವಿದ್ಯಾರ್ಥಿಗಳು ತಮ್ಮ ಸ್ವ–ವಿವರದ (ರೆಸ್ಯೂಂ) ಕನಿಷ್ಠ 10 ಪ್ರತಿಯನ್ನು ಹಾಗೂ ಇತರ ದಾಖಲಾತಿಗಳಾದ ವಿಳಾಸ ದೃಢೀಕರಣ ಪತ್ರ (ಆಧಾರ್ ಕಾರ್ಡ್) ಮತ್ತು ಕನಿಷ್ಠ 10 ಪಾಸ್‌ಪೋರ್ಟ್ ಅಳತೆಯ ಭಾವ ಚಿತ್ರಗಳನ್ನು ತರಬೇಕು. ರಾಜ್ಯದ ಎಲ್ಲಾ ಭಾಗಗಳ ವಿದ್ಯಾರ್ಥಿಗಳು ಉಚಿತವಾಗಿ ಭಾಗವಹಿಸಲು ಅವಕಾಶವಿದೆ.

ನೋಂದಣಿ ಉಚಿತವಾಗಿದ್ದು, ಆಸಕ್ತ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯಬೇಕು. ವಿವಿಧ ಕಾಲೇಜುಗಳ ಆಡಳಿತ ಮಂಡಳಿ ಸದಸ್ಯರು, ಪ್ರಾಂಶುಪಾಲರು ಹಾಗೂ ಅಧ್ಯಾಪಕರು ತಮ್ಮ ತಮ್ಮ ವಿದ್ಯಾರ್ಥಿಗಳನ್ನು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಮಾರ್ಗದರ್ಶನ, ಪ್ರೋತ್ಸಾಹ ನೀಡಬೇಕು ಎಂದು ಮನವಿ ಮಾಡಿದರಲ್ಲದೆ, ಹೆಚ್ಚಿನ ಮಾಹಿತಿಗಾಗಿ ಮೊ: 9886491588, 9731145682 ಅನ್ನು ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಸಿ.ಜೆ.ಪ್ರಿಯಾ, ಬಿಸಿಎ ವಿಭಾಗದ ಮುಖ್ಯಸ್ಥೆ ಸವಿತಾ, ವಾಣಿಜ್ಯ ವಿಭಾಗದ ಮುಖ್ಯಸ್ಥ ಬಿ.ಈಶ್ವರ್ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು, ಮೇ 14– ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ ಮೈಸೂರು ವಿಭಾಗವು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ 2025–26ನೇ ಸಾಲಿನ ಡಿಪ್ಲೊಮಾ ನರ್ಸರಿ ಟೀಚರ್ ಟ್ರೈನಿಂಗ್ ತರಬೇತಿಗಾಗಿ ಅರ್ಜಿ ಆಹ್ವಾನಿಸಿದೆ. 18ರಿಂದ 55ರ ವಯೋಮಾನದ ಎಸ್‌ಎಸ್‌ಎಲ್‌ಸಿ ನಂತರದ ವಿದ್ಯಾರ್ಹತೆ ಹೊಂದಿರುವವರು ತರಬೇತಿ ತರಗತಿಯಲ್ಲಿ ಮಾಂಟೆಸರಿ ಶಿಕ್ಷಣ ವ್ಯವಸ್ಥೆ, ಪೂರ್ವ ಪ್ರಾಥಮಿಕ ತರಬೇತಿ ಆಯಾಮಗಳು, ಮಕ್ಕಳ ಮಾನಸಿಕ ಬೆಳವಣಿಗೆ, ಆರೋಗ್ಯ ಮಾಹಿತಿ, ಕಂಪ್ಯೂಟರ್ ತರಬೇತಿಗಳನ್ನು ಕಲಿಯಬಹುದು.

ಅರ್ಜಿಗಳನ್ನು ಎಸ್‌ಎಸ್‌ಐಟಿ ಸಲ್ಯೂಷನ್ಸ್, ರಾಮಕೃಷ್ಣನಗರ ಇಲ್ಲಿ ಪಡೆಯಬಹುದು. ಮಾಹಿತಿಗೆ 8310306882, 9686855470 ಸಂಪರ್ಕಿಸಬಹುದು. ಅರ್ಜಿ ಸಲ್ಲಿಸಲು ಮೇ 25 ಕೊನೆ ದಿನಾಂಕ.

ಮೇ 16, 17ರಂದು 'ಪ್ರಜ್ಞಾ ರಂಗೋತ್ಸವ' ನಾಟಕ ಪ್ರದರ್ಶನ

ಮೈಸೂರು, ಮೇ 14(ಎಂಟಿವೈ)– ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಮೇ 16 ಮತ್ತು 17ರಂದು ಸಂಜೆ 6.30ಕ್ಕೆ 'ಪ್ರಜ್ಞಾ ರಂಗೋತ್ಸವ' ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ಪ್ರಜ್ಞಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಅಧ್ಯಕ್ಷ ಸೋಸಲೆ ಸಿದ್ದರಾಜು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಕಾರದೊಂದಿಗೆ ಪ್ರಜ್ಞಾ ರಂಗೋತ್ಸವ ಏರ್ಪಡಿಸಲಾಗಿದೆ. ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಮೇ 16ರಂದು ಸಂಜೆ 6ಕ್ಕೆ 'ಬೆಲ್ಲದ ದೋಣಿ' ನಾಟಕ ಪ್ರದರ್ಶನವಿದೆ. ಹನೂರು ಚೆನ್ನಪ್ಪ ರಚಿಸಿರುವ ಈ ನಾಟಕಕ್ಕೆ ವಿನ್ಯಾಸ ಮತ್ತು ನಿರ್ದೇಶನವನ್ನು ರೂಬಿನ್ ಸಂಜಯ್ ಮಾಡಿದ್ದಾರೆ. ಸಂಗೀತ ದೇವಾನಂದ ವರಪ್ರಸಾದ್ ಮತ್ತು ಸಿದ್ದೇಶ್ ಬದನವಾಳು, ನಿರ್ವಹಣೆ ಸಿ.ಎಂ.ನರಸಿಂಹಮೂರ್ತಿ, ಬೆಳಕು ತ್ಯಾಗರಾಜು ದೇವರಹಳ್ಳಿ, ಸಾಂಗತ್ಯ ಸುಬ್ರಹ್ಮಣ್ಯ, ಪ್ರಸಾಧನ ಗುರುರಾಜ್ ಅವರದ್ದಾಗಿದೆ ಎಂದರು.

ಮೇ 17ರಂದು ಸಂಜೆ 6.30ಕ್ಕೆ ದೇವನೂರು ಮಹಾದೇವ ಅವರ 'ಎದೆಗೆ ಬಿದ್ದ ಅಕ್ಷರ' ನಾಟಕ ಡಾ.ಸಿ.ಬಸವಲಿಂಗಯ್ಯ ನಿರ್ದೇಶನದಲ್ಲಿ ಮೂಡಿಬರಲಿದೆ. ಈ ನಾಟಕವನ್ನು ಎಸ್.ನಟರಾಜ ಬೂದಾಳ್ ಹಾಗೂ ಸಂತೋಷ್ ನಾಯಕ್ ಆರ್. ರಂಗರೂಪಕ್ಕೆ ತಂದಿದ್ದಾರೆ. ರಂಗಸಜ್ಜಿಕೆ ಪ್ರಶಾಂತ್ ಹೆಬ್ಬಸೂರು, ಧ್ವನಿ ವಿನ್ಯಾಸ ಸುಬ್ರಹ್ಮಣ್ಯ, ಬೆಳಕು ಮಧುಮಳವಳ್ಳಿ, ನಿರ್ವಹಣೆ ಕೀರ್ತಿಗೌಡ, ರಂಗಶಿಬಿರದ ಸಹಾಯಕರಾಗಿ ಕಾರ್ತಿಕ್ ಸೇವೆ ಸಲ್ಲಿಸಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರಜ್ಞಾ ಶೈಕ್ಷಣಿಕ–ಸಾಂಸ್ಕೃತಿಕ ಟ್ರಸ್ಟ್ ಸದಸ್ಯರಾದ ಪ.ರವಿಕುಮಾರ್, ಡಾ.ಎಸ್.ಆರ್.ತಿರುಮಲಯ್ಯ, ಡಾ.ಕೆ.ಎಸ್.ಕುಮಾರಸ್ವಾಮಿ ಇದ್ದರು.

ಎಂಐಟಿ ಕಾಲೇಜಲ್ಲಿ ಅಧ್ಯಾಪಕರ ವಿಕಸನ ಕಾರ್ಯಕ್ರಮ



ಮೈಸೂರು,ಮೇ14–ನಂಜನಗೂಡಿನ ತಾಂಡವಪುರ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ರಿಸರ್ಚ್ ಅಂಡ್ ಇನ್ನೋವೇಶನ್ ಸೆಂಟರ್ ಇನ್ ಅಸೋಸಿಯೇಷನ್ ವಿಥ್ IQAC ವತಿಯಿಂದ ಸಂಶೋಧನಾ ಪತ್ರಿಕೆಯನ್ನು ಮಂಡಿಸುವಲ್ಲಿ ಬಳಸಬಹುದಾದ ಪರಿಣಾಮಕಾರಿ ತಂತ್ರಗಳು ವಿಷಯ ಕುರಿತು ಕಾರ್ಯಾಗಾರ ಏರ್ಪಡಿಸಲಾಗಿತ್ತು.

ಸಂಪನ್ಮೂಲ ವ್ಯಕ್ತಿಗಳಾಗಿ ಮೈಸೂರು ವಿವಿ ಸಿಎಸ್‌ಸಿ ವಿಭಾಗದ ಪ್ರಾಧ್ಯಾಪಕ ಡಾ.ಗುರು, ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಹಿರಿಯ ಪ್ರಾಧ್ಯಾಪಕರಾದ ಡಾ.ಮನೋಹರ್ ಪೈ, ಡಾ.ರಾಧಿಕಾ ಮತ್ತು ಮೈಸೂರು ವಿವಿ ಪ್ರಾಧ್ಯಾಪಕ ಡಾ.ಉಮೇಶ್ ಆಗಮಿಸಿದ್ದರು. ಡಾ.ಗುರು ಸಂಶೋಧನೆಯಲ್ಲಿ ರಿಸರ್ಚ್ ಅಂಡ್ ಡಾಕ್ಯುಮೆಂಟ್ ಸಂಶೋಧನೆಯಲ್ಲಿ ಅತಿ ಮುಖ್ಯವಾದ ಭಾಗವೆಂದು ತಿಳಿಸಿಕೊಟ್ಟರು. ಡಾ.ಉಮೇಶ್, ರಿಸರ್ಚ್ ಫಂಡಿಂಗ್ ಏಜೆನ್ಸಿ ಎಂಬ ವಿಷಯದ ಕುರಿತು ತಿಳಿಸಿದರು. ಡಾ.ಮನೋಹರ್ ಪೈ, ವೇ ಆಫ್ ಕಂಡಕ್ಟಿಂಗ್ ಎಫೆಕ್ಟಿವ್ ಲಿಟರೇಚರ್ ರಿವ್ಯೂ ಕುರಿತು ವಿಸ್ತೃತವಾಗಿ ತಿಳಿಸಿಕೊಟ್ಟರು. ಕಾರ್ಯಾಗಾರದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ.ವೈ.ಟಿ. ಕೃಷ್ಣಗೌಡ, ಮಹಾರಾಜ ಎಜುಕೇಶನ್ ಟ್ರಸ್ಟ್ ಜಂಟಿ ಕಾರ್ಯದರ್ಶಿ ಡಾ.ಚೇತನ್, ಕಾಲೇಜಿನ ಎಲ್ಲಾ ವಿಭಾಗದ ಮುಖ್ಯಸ್ಥರು ಮತ್ತು ಅಧ್ಯಾಪಕರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.05.2025 ಗುರುವಾರ, ಮಳೆ ನಕ್ಷತ್ರ: ಕೃತ್ತಿಕ 11.05.2025 ರಿಂದ 24.05.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

- **ಆರ್ಟ್ ಆಫ್ ಲಿವಿಂಗ್ :** ವ್ಯಸನಮುಕ್ತ, ಕ್ವಿಟ್ ಟೊಬ್ಯಾಕೋ ಕಾರ್ಯಕ್ರಮ, ಸ್ಥಳ: ಆರ್ಟ್ ಆಫ್ ಲಿವಿಂಗ್ ಆಶ್ರಮ, ಬೆಳಗ್ಗೆ 7ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಶಿಬಿರ ಮತ್ತು ಶಾಲಾಕ್ಯ ತಂತ್ರ ಸ್ನಾತಕೋತ್ತರ ವಿಭಾಗದಿಂದ ಕಣ್ಣಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕಣ್ಣಿನ ದೃಷ್ಟಿಗೆ ಸಂಬಂಧಿಸಿದ ವಿಶೇಷ ಬೇಸಿಗೆ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘ ಮತ್ತು ವಯೋ ವಿಕಾಸ್ ಸಂಸ್ಥೆ, ಬೆಂಗಳೂರು :** 70 ವರ್ಷ ಮೇಲ್ಪಟ್ಟ ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಆಯುಷ್ಮಾನ್ ಭಾರತ್ ಆರೋಗ್ಯ ಕಾರ್ಡ್ ವಿತರಣಾ ಕಾರ್ಯಕ್ರಮ, ಸ್ಥಳ : ಸಂಘದ ಆವರಣ, ಜಲಪುರಿ, ಬೆಳಗ್ಗೆ 9ರಿಂದ.
- **ಎಟಿಎಂಇ ಕಾಲೇಜ್ ಆಫ್ ಇಂಜಿನಿಯರಿಂಗ್:** ಟೆಕ್ ಆವಿಷ್ಕಾರ್ 2.0, ಮುಖ್ಯ ಅತಿಥಿಗಳು : ಪ್ರಿನ್ಸಿಪಲ್ ಇಂಜಿನಿಯರ್ ಬಿ.ಆರ್.ಅಶ್ವಿನ್‌ಕುಮಾರ್, ಗೌರವ ಅತಿಥಿಗಳು: ರಂಜನ್ ಮನೀಶ್, ಡಾ.ಚೆಂಗಪ್ಪ ಮುಂಜಾಂದಿರಾ, ಅಧ್ಯಕ್ಷತೆ : ಎಟಿಎಂಇ ಅಧ್ಯಕ್ಷ ಎಲ್.ಅರುಣ್‌ಕುಮಾರ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** ಡಾ. ಬಿ.ಆರ್. ಅಂಬೇಡ್ಕರ್ ಅವರ 134ನೇ ಜಯಂತ್ಯುತ್ಸವ, ಉದ್ಘಾಟನೆ : ಚಲನಚಿತ್ರ ನಟ ಪ್ರಕಾಶ್ ರಾಜ್, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ. ಎನ್.ಕೆ. ಲೋಲಾಕ್ಷಿ, ಉಪಸ್ಥಿತರು : ಜನವಾದಿ ಮಹಿಳಾ ಸಂಘಟನೆ ರಾಜ್ಯಾಧ್ಯಕ್ಷೆ ಮೀನಾಕ್ಷಿ ಬಾಳಿ, ಪ್ರೊ. ಎ. ನಾರಾಯಣ, ಪ್ರೊ. ವಿಜಯಕುಮಾರಿ ಎಸ್. ಕರಿಕಲ್, ಪ್ರೊ. ಎಂ. ನಂಜಯ್ಯ ಹೊಂಗನೂರು, ಪ್ರೊ. ಎಸ್.ಡಿ. ಶಶಿಕಲಾ, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಬೆಳಗ್ಗೆ 10.30ಕ್ಕೆ.
- **ಸರ್ಕಾರಿ ಪ್ರಥಮ ದರ್ಜೆ ಕಾಲೇಜು :** ಸಾಂಸ್ಕೃತಿಕ ಮತ್ತು ವಿವಿಧ ವೇದಿಕೆಗಳ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಸಮಾರೋಪ ಭಾಷಣ : ಸಂಸ್ಕೃತಿ ಚಿಂತಕ ಡಾ. ಜಿ.ಎಸ್. ಜಯದೇವ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎನ್. ಮಾಯಾದೇವಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.
- **ಸಂತ ಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ:** ಕನಕ ಸಂಸ್ಕೃತಿ ಸಂಚಲನ ಶೀರ್ಷಿಕೆಯಡಿ ನಡೆ–ನುಡಿ ಉತ್ಸವ, ಸ್ಥಳ: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯದ ಸಭಾಂಗಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ ನೇಗಿಲಯೋಗಿ ವಿದ್ಯಾವರ್ಧಕ ಸ್ಪರ್ಧಾ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು :** ವೃತ್ತಿ ಮಾರ್ಗದರ್ಶನ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಅರಿವು ಕಾರ್ಯಕ್ರಮ, ಅಧ್ಯಕ್ಷತೆ: ಪ್ರಿನ್ಸಿಪಾಲ್ ಪ್ರೊ. ಪುಟ್ಟರಾಜು, ಉದ್ಘಾಟನೆ: ಪಾಲಿಕೆ ಮುಖ್ಯ ಲೆಕ್ಕಾಧಿಕಾರಿ ಶ್ರೀಮತಿ ಹೆಚ್.ವಿ. ಶ್ವೇತಾ, ಮುಖ್ಯ ಅತಿಥಿಗಳು : ಡಾ.ಎಂ.ಬಿ.ಸುರೇಶ್, ಡಿ.ರವಿಕುಮಾರ್, ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.
- **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಟ್ರೆಂಡ್ಸ್ ಹೌಸಿಂಗ್ ಎಲ್‌ಎಲ್‌ಪಿ ಮ್ಯಾನೇಜಿಂಗ್ ಡೈರೆಕ್ಟರ್ ಸಂದೀಪ್ ಸುಬ್ರಮಣ್ಯ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಸಿಎಂಸಿ ಅಧ್ಯಕ್ಷ ಟಿ. ನಾಗರಾಜು, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ, ಮಧ್ಯಾಹ್ನ 3.30ಕ್ಕೆ.
- **ರಂಗಾಂತರಂಗ ಮೈಸೂರು :** ಕಲರವ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ, ಉಪಸ್ಥಿತರು : ಬಸವರಾಜ್ ದೇವನೂರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಬಿ.ಆರ್. ರಂಗಸ್ವಾಮಿ, ಜಯರಾಂ, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ರಂಗಾಂತರಂಗ ಸಂಸ್ಥಾಪಕ ಕೆ.ಎಂ. ಕೀರ್ತಿರಾಜ್, ಸ್ಥಳ: ಕಿರು ರಂಗ ಮಂದಿರ, ಸಂಜೆ 4ಕ್ಕೆ.
- **ಕರ್ನಾಟಕ ಸುಗಮ ಸಂಗೀತ ಪರಿಷತ್, ಮೈಸೂರು ಘಟಕ, ಬ್ಲೂ ಮೈಂಡ್ ಸೆಲ್ಯೂಷನ್ಸ್ :** 'ರಾಗ ರಾಗಿಣಿ' ಸುಗಮ ಸಂಗೀತ – ಸಿತಾರ್ ವಾದನ ಮತ್ತು ದಾಸವಾಣಿ ಕಾರ್ಯಕ್ರಮ, ಉದ್ಘಾಟನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಮುಖ್ಯ ಅತಿಥಿಗಳು: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಾವಿದರಾದ ಎಂ.ಎಲ್. ಭಾರತಿ, ಸಮಾಜ ಸೇವಕ ಡಾ.ರಘುರಾಮ್ ವಾಜಪೇಯಿ, ಅಧ್ಯಕ್ಷತೆ : ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ನಾಗರಾಜು ವಿ.ಬೈರಿ, ಸಿತಾರ್ ವಾದಕರಾದ ಸಿ.ಎಸ್.ವೇದಶ್ರೀ ಸಿತಾರ್ ವಾದ್ಯ, ಉಕ್ಕುಂದ ರಾಜೇಶ್ ಪಡಿಯಾರ್, ಹಂಸಿನಿ ಗಾಯನ ಕಾರ್ಯಕ್ರಮ, ಪುರುಷೋತ್ತಮ್ ಕೀ–ಬೋರ್ಡ್, ವಿಶ್ವನಾಥ್ ಮ್ಯಾಂಡೋಲಿನ್, ರಮೇಶ್ ಧನ್ನೂರು, ಸುಜೇಂದ್ರ ತಬಲ, ವಿನಯ್ ರಂಗದೋಳ್ ರಿದಂ ಪ್ಯಾಡ್, ಉದ್ಯಮಿ ಮಹೇಶ್ ಕಾಮತ್ ಹಾಗೂ ಗಾಯಕಿ ರಶ್ಮಿ ಚಿಕ್ಕಮಗಳೂರು ಅವರಿಗೆ ಸನ್ಮಾನ.ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು :** ಸಾಂಸ್ಕೃತಿಕ, ಎನ್‌ಎಸ್‌ಎಸ್ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ವಿಶೇಷ ಆಹ್ವಾನಿತರು : ಹಿನ್ನೆಲೆ ಗಾಯಕಿ ಕು. ಅಮೂಲ್ಯ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ವಿ. ಷಣ್ಮುಗಂ, ಸ್ಥಳ: ಕೊಠಡಿ ಸಂಖ್ಯೆ 21, ಕಾಲೇಜು ಆವರಣ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ : ಪ್ರೊಫೆಸರ್ ಸಿ.ನಾಗಣ್ಣ, ನಿರ್ಮಾಣ–ಜಾಂಪಣ್ಣ ಆಶೀಹಾಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಕೆ.ಬಿ. ಸುನೀತಾ ಆಚಾರ್ಯ, ಪಿ.ಎಸ್. ರಂಜನಿ, ವ್ಯಾಖ್ಯಾನ : ಡಾ. ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಸಂಗೀತ ಕಟ್ಟಿ, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಕನ್ನಡ ಚಿತ್ರಗೀತೆಗಳು, 9.00 ವಿಶೇಷ ಹಿಂದಿ ವಾರ್ತೆ, 9.10 ವಿಶೇಷ ಇಂಗ್ಲೀಷ್ ವಾರ್ತೆ, 9.20 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಮೋಹನ ಕ್ಲ್ಯಾರಿಯೋನೆಟ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಲಕ್ಷ್ಮೀ ನಾಗರಾಜ್, 2.40 ಕನ್ನಡ ಚಿತ್ರಗೀತೆಗಳು, 3.00 ವಿಶೇಷ ಹಿಂದಿ ವಾರ್ತೆಗಳು, 3.10 ವಿಶೇಷ ಇಂಗ್ಲೀಷ್ ವಾರ್ತೆಗಳು, 3.20 ಕನ್ನಡ ಚಿತ್ರಗೀತೆಗಳು, 4.00 ಹಳ್ಳಿಹಾಡು –ಜಾನಪದ ವಿದ್ವಾಂಸ ಡಾ. ಪಿ. ಕೆ. ರಾಜಶೇಖರ್ ಮತ್ತು ಸಂಗಡಿಗರು, ಪ್ರಸ್ತುತಿ: ಡಾ. ಮೈಸೂರು ಉಮೇಶ್, 4.30 ವಿಜ್ಞಾನ ಭಾರತಿ, 6.50 ಕೃಷಿರಂಗ–ಕಿಸಾನ್‌ವಾಣಿ– ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಂ ಕಂಪನಿ ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ಗ್ರಾಮೀಣ ಮಾರುಕಟ್ಟೆ ಕುರಿತು ಮಂಡ್ಯದ ವಿಕಸನ ಗ್ರಾಮೀಣ ಹಾಗೂ ನಗರಾಭಿವೃದ್ಧಿ ಸಂಸ್ಥೆಯ ಮುಖ್ಯ ಸಂಯೋಜಕರಾದ ಎಂ.ಸಿ. ಕೆಂಪಯ್ಯ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ವಿಶೇಷ ಹಿಂದಿ ವಾರ್ತೆಗಳು, 8.10 ವಿಶೇಷ ಇಂಗ್ಲೀಷ್ ವಾರ್ತೆಗಳು, 8.20 ಹಿಂದಿ ಚಿತ್ರಗೀತೆಗಳು, 9.15 ವಿಶೇಷ ಸಂವಾದ ಕಾರ್ಯಕ್ರಮ, 10.00 ಸುದ್ದಿ ಆಧಾರಿತ ವಿಶೇಷ ಕಾರ್ಯಕ್ರಮ, ಸುರ್ಖಿಯೋಮೆ ಇದರ ಧ್ವನಿ ಮುದ್ರಣ

'ಆಪರೇಷನ್ ಸಿಂಧೂರ' ಯಶಸ್ವಿ

ಭಾರತೀಯ ಯೋಧರಿಗೆ ಮೈಸೂರಿನ 700ಕ್ಕೂ ಹೆಚ್ಚು ವೈದ್ಯರ ಬೆಂಬಲ



ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಬುಧವಾರ ಸಂಸದ ಯದುವೀರ ಒಡೆಯರ್ ನೇತೃತ್ವದಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ವೈದ್ಯರು ಆಪರೇಷನ್ ಸಿಂಧೂರ್ ಯಶಸ್ವಿಗೊಳಿಸಿದ ಭಾರತೀಯ ಸೇನೆಗೆ ಗೌರವ ಸಲ್ಲಿಸಿದರು.

ಮೈಸೂರು, ಮೇ 14(ಆರ್‌ಕೆ)– ಆಪರೇಷನ್ ಸಿಂಧೂರ್ ಯಶಸ್ವಿಗೊಳಿಸಿ ಪಾಕಿಸ್ತಾನಿ ಉಗ್ರರ ನೆಲೆಗಳನ್ನು ಧ್ವಂಸಗೊಳಿಸಿರುವ ಭಾರತೀಯ ಸೈನಿಕರಿಗೆ ಮೈಸೂರಿನ 700ಕ್ಕೂ ಹೆಚ್ಚು ವೈದ್ಯರು ಇಂದು ಗೌರವ ಸಲ್ಲಿಸಿ, ಬೆಂಬಲ ಸೂಚಿಸಿದರು.

ಶಾಂತವೇರಿ ಗೋಪಾಲಗೌಡ ಸ್ಮಾರಕ ಆಸ್ಪತ್ರೆ ನರರೋಗ ತಜ್ಞರೂ ಆದ ಬಿಜೆಪಿ ಮುಖಂಡ ಡಾ. ಸುಶ್ರುತ ಗೌಡ ಅವರ ನೇತೃತ್ವದಲ್ಲಿ ಬುಧವಾರ ಬೆಳಗ್ಗೆ 8 ಗಂಟೆಗೆ ಮೈಸೂರು ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಜಮಾಯಿಸಿದ ವೈದ್ಯ ಸಮುದಾಯ, ವೈದ್ಯಕೀಯ, ಆಯುರ್ವೇದ ಕಾಲೇಜು, ನರ್ಸಿಂಗ್ ಕಾಲೇಜುಗಳ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಆರಂಭದಲ್ಲಿ 'ಆಪರೇಷನ್ ಸಿಂಧೂರ್'ದಲ್ಲಿ ಉಗ್ರರ ವಿರುದ್ಧ ಸೆಣಸಾಡಿ ಹುತಾತ್ಮರಾದ ವೀರ ಸೇನಾನಿಗಳಿಗೆ ಎರಡು ನಿಮಿಷ ಮೌನ ಆಚರಿಸಿ, ನಮನ ಸಮರ್ಪಿಸಿದರು.

ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಇದೇ ವೇಳೆ ಪಾಕಿಸ್ತಾನದಂತಹ ಶತ್ರು ರಾಷ್ಟ್ರಗಳು ದಾಳಿ ಮಾಡಿದಾಗ ಕೆಚ್ಚೆದೆಯಿಂದ ಸೆಣಸಿ, ಶತ್ರುಗಳನ್ನು ನಾಶ ಮಾಡಿದ ಭಾರತದ ಸೈನಿಕರೊಂದಿಗೆ ನಾವಿದ್ದೇವೆ, ಅವರ ಬೆಂಬಲಕ್ಕೆ ಸದಾ ನಿಲ್ಲುತ್ತೇವೆ ಎಂಬ ಪ್ರತಿಜ್ಞಾ ವಿಧಿಯನ್ನು ನೆರೆದಿದ್ದ ವೈದ್ಯ ಸಮುದಾಯಕ್ಕೆ ಬೋಧಿಸಿದರು.

ಈ ವೇಳೆ ಮಾತನಾಡಿದ ಡಾ. ಸುಶ್ರುತ ಗೌಡ, ವೈದ್ಯ ಸಮುದಾಯವು ನಮ್ಮ ಹೆಮ್ಮೆಯ ವೀರ ಯೋಧರಿಗೆ ಗೌರವ ಸಲ್ಲಿಸಲಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಶತ್ರು ರಾಷ್ಟ್ರಗಳು ನಡೆಸಿದ ದಾಳಿಗೆ ಪ್ರತಿದಾಳಿ ನಡೆಸಿ ಭಾರತೀಯ ಸೈನ್ಯದ ಸಾಮರ್ಥ್ಯವನ್ನು ದೃಢಪಡಿಸಿರುವುದಲ್ಲದೇ ವಿಶ್ವದ ಯಾವುದೇ ದೇಶ ಆಕ್ರಮಣ ಮಾಡಲೆತ್ನಿಸಿದರೆ ಪರಿಣಾಮ ಏನಾಗುತ್ತದೆ ಎಂಬ ಸಂದೇಶ ರವಾನಿಸಿದ್ದಾರೆ ಎಂದರು.

ಕೋವಿಡ್–19 ಎದುರಾದಾಗ ಸಜ್ಜಾಗಿದ್ದರೂ ಪರಿಣಾಮಕಾರಿಯಾಗಿ ನಿಭಾಯಿಸಿದ ಕೇಂದ್ರ ಸರ್ಕಾರ, ಯುದ್ಧ ಸಂದರ್ಭದಲ್ಲೂ ಸಮರ್ಥವಾಗಿ ಎದುರಿಸಲು ಸಜ್ಜಾಗಿದೆ ಎಂಬುದನ್ನು ಸಾಬೀತುಪಡಿಸಿರುವ ಭಾರತೀಯ ಸೇನೆಗೆ ವೈದ್ಯ ಸಮುದಾಯ ಜೊತೆಯಲ್ಲಿದ್ದು, ಬೆಂಬಲಕ್ಕೆ ನಿಲ್ಲುತ್ತದೆ ಎಂದು ಅವರು ನುಡಿದರು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ವೈದ್ಯರೂ ಸಹ ಸೈನಿಕರೇ. ಎಂತಹುದೇ ತುರ್ತು ಸಂದರ್ಭ ಎದುರಾದರೂ ಮುಂದಿನ ಸಾಲಲ್ಲಿ ನಿಂತು ಹೋರಾಟಕ್ಕೆ ಬೆಂಬಲ ನೀಡುತ್ತೇವೆಂಬ ಸಂದೇಶ ರವಾನಿಸುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದರು.

ಕಾವೇರಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಅಧ್ಯಕ್ಷ ಡಾ. ಜಿ.ಆರ್.ಚಂದ್ರಶೇಖರ್, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಸರ್ಕಾರಿ ಆಯುರ್ವೇದ ಕಾಲೇಜಿನ ಡಾ. ಲಕ್ಷ್ಮೀನಾರಾಯಣ ಶೆಣೈ, ಛಾಯಾದೇವಿ ಶಿಕ್ಷಣ ಟ್ರಸ್ಟ್‌ನ ಡಾ. ಆಂಟನಿ ಪಾಲ್‌ರಾಜ್, ಐಎಂಎ ಅಧ್ಯಕ್ಷ ಡಾ. ಚಂದ್ರಭಾನ್ ಸಿಂಗ್, ಡಾ. ರಮೇಶ್, ಯೋಗೇಶ್, ನಿಖಿಲ್, ಉದಿತ್ ಕೀರ್ತಿ ಸೇರಿದಂತೆ ಹಲವರು ಈ ಸಂದರ್ಭ ಪಾಲ್ಗೊಂಡಿದ್ದರು.

ಜಿ.ದೀಕ್ಷಾ ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಮೇ 14(ಪಿಎಂ)– ಮೈಸೂರು ಬೆಳವಾಡಿಯ ಎಕ್ಸೆಲ್ ಪಬ್ಲಿಕ್ ಸ್ಕೂಲ್‌ನ ವಿದ್ಯಾರ್ಥಿನಿ ಜಿ.ದೀಕ್ಷಾ ಮಂಗಳವಾರ ಪ್ರಕಟವಾದ ಸಿಬಿಎಸ್‌ಇ 10ನೇ ತರಗತಿಯ ಪರೀಕ್ಷೆಯಲ್ಲಿ ಶೇ.94.1ರಷ್ಟು ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.

ಇಂಗ್ಲಿಷ್‌ನಲ್ಲಿ 93, ಕನ್ನಡದಲ್ಲಿ 98, ಗಣಿತದಲ್ಲಿ 89, ವಿಜ್ಞಾನದಲ್ಲಿ 99, ಸಮಾಜ ವಿಜ್ಞಾನದಲ್ಲಿ 88 ಹಾಗೂ ಆರ್ಟಿಫಿಷಿಯಲ್ ಇಂಟೆಲಿಜನ್ಸ್ (ಎಐ)ನಲ್ಲಿ 98 ಅಂಕಗಳನ್ನು ಪಡೆದಿದ್ದು, ಇವರು ಕೂರ್ಗಳ್ಳಿಯ ಪಿ.ಗಿರೀಶ್ ಮತ್ತು ಎಸ್.ಕವಿತಾ ದಂಪತಿ ಪುತ್ರಿ.

ರಿಂಗ್ ರಸ್ತೆಯ ಫ್ಲೈ ಓವರ್, ಅಂಡರ್‌ಪಾಸ್ ಕಾಮಗಾರಿ ಪರಿಶೀಲಿಸಿದ ಸಂಸದ ಯದುವೀರ್



ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬುಧವಾರ ಮೈಸೂರಿನ ರಿಂಗ್ ರಸ್ತೆಯಲ್ಲಿ ನಡೆಯುತ್ತಿರುವ ಫ್ಲೈ ಓವರ್ ಹಾಗೂ ಅಂಡರ್‌ಪಾಸ್ ಕಾಮಗಾರಿ ಪರಿಶೀಲನೆ ನಡೆಸಿದರು. ಶಾಸಕ ಟಿ.ಎಸ್.ಶ್ರೀವತ್ಸ, ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು, ಮೇ 14(ಎಂಕೆ)– ಮೈಸೂರಿನ ರಿಂಗ್ ರಸ್ತೆಯಲ್ಲಿ ನಡೆಯುತ್ತಿರುವ ಫ್ಲೈ ಓವರ್ ಹಾಗೂ ಅಂಡರ್‌ಪಾಸ್ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿದ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕಾಮಗಾರಿ ಚುರುಕುಗೊಳಿಸಿ ಜುಲೈ ಅಂತ್ಯಕ್ಕೆ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಳೆಯ ನಡುವೆಯೇ ಶಾಸಕ ಟಿ.ಎಸ್.ಶ್ರೀವತ್ಸ ಜೊತೆಗೂಡಿ ಬುಧವಾರ ರಿಂಗ್ ರಸ್ತೆಯ ಫ್ಲೈ ಓವರ್ ಹಾಗೂ ಅಂಡರ್‌ಪಾಸ್ ಕಾಮಗಾರಿಗಳ ಸ್ಥಳಗಳಿಗೆ ಭೇಟಿ ನೀಡಿದ ಅವರು, ಪರಿಶೀಲನೆ ನಡೆಸಿ ಅಧಿಕಾರಿಗಳಿಂದ ಕಾಮಗಾರಿ ಕುರಿತು ಹೆಚ್ಚಿನ ಮಾಹಿತಿ ಪಡೆದರು. ಬಳಿಕ ಮಾತನಾಡಿ, ಈ ಕಾಮಗಾರಿಗಳ ಸಂಪೂರ್ಣ ಯೋಜನಾ ವರದಿ 2010ರಲ್ಲೇ ಸಿದ್ಧವಾಗಿತ್ತು. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 2023ರಲ್ಲಿ ಇದಕ್ಕೆ ಅನುಮೋದನೆ ನೀಡಿತು. ಆದರೆ ಸ್ಥಳೀಯ ಸಮಸ್ಯೆಗಳಿಂದ ಕಳೆದ ಹತ್ತು ತಿಂಗಳಿಂದ ಕಾಮಗಾರಿ ಆರಂಭವಾಗಿರಲಿಲ್ಲ. ಈಗ ನಿರ್ಮಾಣ ಕಾರ್ಯ ಚುರುಕು ಪಡೆದುಕೊಂಡಿದೆ. ರಿಂಗ್ ರಸ್ತೆ ಕಾಮಗಾರಿ ಸಂಪೂರ್ಣ ಮುಗಿದಿದೆ ಎಂದು ತಿಳಿಸಿದರು.

ಎರಡು ಅಂಡರ್‌ಪಾಸ್ ಕಾಮಗಾರಿ ಮುಂದಿನ ಜುಲೈ ತಿಂಗಳ ಮೊದಲ ವಾರದ ವೇಳೆಗೆ ಪೂರ್ಣಗೊಳ್ಳಲಿದೆ. ಉಳಿದ ಎರಡು ಅಂಡರ್‌ಪಾಸ್ ಕಾಮಗಾರಿ ಅತಿ ಶೀಘ್ರದಲ್ಲಿಯೇ ಚುರುಕು ಪಡೆದುಕೊಳ್ಳಲಿದೆ. ಮೈಸೂರಿನ ರಿಂಗ್ ರಸ್ತೆಯಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ಹೆಚ್ಚು ಆದ್ಯತೆ ನೀಡಲಾಗಿದೆ. ಪ್ರಯಾಣಿಕರಿಗೆ, ಜನರಿಗೆ ಯಾವುದೇ ರೀತಿಯಲ್ಲೂ ತೊಂದರೆ ಆಗದಂತೆ ನೋಡಿಕೊಳ್ಳಲಾಗುವುದು ಎಂದು ಹೇಳಿದರು. ಈ ವೇಳೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿಗಳು, ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳು, ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

ಮಹಾಬೋಧಿ ಶಾಲೆಗೆ ಸಿಬಿಎಸ್‌ಇಯಲ್ಲಿ ಶೇ.100 ಫಲಿತಾಂಶ

ಮೈಸೂರು, ಮೇ 14– 10ನೇ ತರಗತಿ ಸಿಬಿಎಸ್‌ಇ ಪರೀಕ್ಷೆಯಲ್ಲಿ ಮೈಸೂರಿನ ಸರಸ್ವತಿಪುರಂನಲ್ಲಿರುವ ಮಹಾಬೋಧಿ ಶಾಲೆಯು ಶೇ.100 ಫಲಿತಾಂಶ ಗಳಿಸಿದೆ. ಪರೀಕ್ಷೆ ಬರೆದ 38 ವಿದ್ಯಾರ್ಥಿಗಳ ಪೈಕಿ 13 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದರೆ, 18 ವಿದ್ಯಾರ್ಥಿಗಳು ಪ್ರಥಮ ದರ್ಜೆ ಹಾಗೂ 7 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ ಎಂದು ಶಾಲೆಯ ಸಿಇಒ ಜಿಕ್ಮೆತ್ ವಾಂಗ್ದುಸ್ ಜ್ಯೋತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಂ.ಎನ್.ಗೌರಮ್ಮ ನಿಧನ



ಮೈಸೂರು,ಮೇ 14– ಕಂದಾಯನಗರದ ನಿವಾಸಿ, ಜಿಲ್ಲೆಯ ಸರಗೂರು ತಾಲೂಕು ಬಾಡಗ ಗ್ರಾಮದ ಬಿಹೆಚ್‌ಎನ್ ಚತುರ್ಮುಖ ಗ್ಲೋಬಲ್ ಸ್ಕೂಲ್ ಸಂಸ್ಥೆಯ ಸಂಸ್ಥಾಪಕ ಟ್ರಸ್ಟಿ ಬಿ.ಹೆಚ್.ನಂಜಪ್ಪ ಅವರ ಪತ್ನಿ ಎಂ.ಎನ್.ಗೌರಮ್ಮ(75) ಬುಧವಾರ ನಿಧನರಾದರು.

ಮೃತರು ಪತಿ ಬಿ.ಹೆಚ್.ನಂಜಪ್ಪ, ಹೆಚ್.ಡಿ.ಕೋಟೆ ತಾಲೂಕು ಬಿಜೆಪಿ ರೈತ ಮೋರ್ಚಾ ಮಾಜಿ ಅಧ್ಯಕ್ಷ ಬಿ.ಎನ್.ನಂಜುಂಡಸ್ವಾಮಿ ಸೇರಿದಂತೆ ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಸ್ವಗ್ರಾಮದ ಶಾಂತಿನಿವಾಸ ಬಳಿಯ ತೋಟದಲ್ಲಿ ಗುರುವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಕ್ಕರೆ ಅದೇ ಸ್ವರ್ಗ

ನಾಯಿಯೊಂದು ಬೆಕ್ಕನ್ನು ಅಗಾಧವಾಗಿ ಪ್ರೀತಿಸಲು ಆರಂಭಿಸಿತು. ತನ್ನ ಪ್ರೀತಿಯ ವಿಷಯವನ್ನು ಮನೆಯವರ ಬಳಿ ಹೇಳಿಕೊಂಡಿತು. ನಾಯಿಯ ಮನೆಯವರು ಈ ಸಂಬಂಧವನ್ನು ನಿರಾಕರಿಸಿದರು. ಏಕೆಂದರೆ ಹುಡುಗಿಗೆ ಮೀಸೆ ಇದೆ ಅಂತ!

ಮೈಸೂರು ಮಿತ್ರ

ಗುರುವಾರ, 15 ಮೇ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಬದುಕು ಅನ್ನೋದು ನದಿಯ ಹಾಗೆ ಕೊನೆಯಿಲ್ಲದ ಪಯಣ. ಯಾವುದೂ ನಮ್ಮ ಜೊತೆ ಉಳಿಯುವುದಿಲ್ಲ. ಉಳಿಯುವುದು ಒಂದೇ ಹೃದಯಕ್ಕೆ ತಟ್ಟಿದ ನೆನಪು ಮಾತ್ರ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುಳಿತು ತಿಂದರೆ ಕುಡಿಕೆ ಹೊನ್ನು ಸಾಲದು

ನಿಮ್ಮ ಪತ್ರಗಳು

■ ಜಗನ್ಮೋಹನ ಅರಮನೆಯಲ್ಲಿ ಫ್ಯಾನ್ ದುರಸ್ತಿಗೊಳಿಸಲಿ !!

ಮಾನ್ಯರೇ,

ಮೈಸೂರಿನ ಹೃದಯ ಭಾಗದಲ್ಲಿರುವ ಜಗನ್ಮೋಹನ ಅರಮನೆಯಲ್ಲಿ ವಾರಕ್ಕೆ 2–3 ಕಾರ್ಯಕ್ರಮಗಳು ನಡೆಯುತ್ತಲೇ ಇರುತ್ತವೆ. ಇಲ್ಲಿನ ಸಮಸ್ಯೆ ಏನೆಂದರೆ



ಮೊದಲ ಎರಡು–ಮೂರು ಸಾಲಿನಲ್ಲಿ ಇರುವ ಫ್ಯಾನ್‌ಗಳು ಯಾವಾಗಲೂ ಬಂದ್ ಆಗಿರುತ್ತವೆ. ಸಾಮಾನ್ಯವಾಗಿ ಈ ಸಾಲಿನಲ್ಲಿ ಗಣ್ಯಾತಿಗಣ್ಯರು ಆಸೀನರಾಗುತ್ತಾರೆ. ಈಗ ಬೇಸಿಗೆ ಸಮಯವಾದ್ದರಿಂದ ಫ್ಯಾನ್ ಇಲ್ಲದೇ ಗಂಟೆ ಗಟ್ಟಲೇ ಕೂರುವ ಪರಿಸ್ಥಿತಿ ಉಂಟಾಗಿದೆ. ಉಳಿದ ಫ್ಯಾನ್‌ಗಳು ಸರಿಯಾಗಿ ಕೆಲಸ ಮಾಡುತ್ತಿವೆ. ಕೊನೇ ಪಕ್ಷ ಏರ್ ಕೂಲರ್ ಆದರೂ ಈ ಸಾಲಿನ ಸಭಿಕರಿಗೆ ಅಳವಡಿಸಿದರೆ ಹೆಚ್ಚು ಪ್ರಯೋಜನವಾಗುತ್ತದೆ. ಇದರ ಜೊತೆಗೆ ಆಗಿಂದ್ದಾಗ್ಗೆ ಕಾರ್ಯಕ್ರಮ ಇರಲಿ ಅಥವಾ ಇಲ್ಲದಿರಲಿ ಈ ಸಭಾಂಗಣ ಸ್ವಚ್ಛಗೊಳಿಸಬೇಕು. ಏಕೆಂದರೆ ನೆಲದ ಮೇಲೆ ಧೂಳು ಅಂಟಿಕೊಂಡಿರುತ್ತದೆ ಹಾಗೂ ಇಡೀ ಸಭಾಂಗಣಕ್ಕೆ ಕುಶನ್ ಇರುವ ಆಸನಗಳನ್ನು ಅಳವಡಿಸಬೇಕು. ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಆಯೋಜಕರು ಅಥವಾ ವ್ಯವಸ್ಥಾಪಕರು ಈ ಕೂಡಲೇ ಎಚ್ಚೆತ್ತುಕೊಂಡು ಮೇಲಿನ ಸಮಸ್ಯೆ ಬಗೆಹರಿಸಲಿ.

–ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು

■ ನೀರು ಪಡೆಯಲು ಕಾಯಿನ್ ಬದಲಾಗಿ ಫೋನ್ ಪೇ ಅಥವಾ ಗೂಗಲ್ ಪೇ' ವ್ಯವಸ್ಥೆ ಮಾಡಲಿ



ಮಾನ್ಯರೆ,

ಮೈಸೂರು ನಗರಪಾಲಿಕೆ ವತಿಯಿಂದ ಮೈಸೂರು ನಗರ ವ್ಯಾಪ್ತಿಯ ಎಲ್ಲಾ ಬಡಾವಣೆಗಳಲ್ಲಿ ಹತ್ತಾರು ಕಡೆಗಳಲ್ಲಿ ಶುದ್ಧ ಕುಡಿಯುವ ನೀರಿನ (ಆರ್.ಓ.ವಾಟರ್ ಪ್ಲಾಂಟ್) ಘಟಕಗಳನ್ನು ತೆರೆದಿರುವುದು ಸರಿಯಷ್ಟೆ, ಇಲ್ಲಿ 5 ರೂಪಾಯಿಯ ಹೊಸ ಕಾಯಿನ್ ಹಾಕಿದಾಗ ಮಾತ್ರ ಈ ಬೂತ್‌ನಿಂದ ಸಾರ್ವಜನಿಕರು ನೀರು ಪಡೆಯಬಹುದಾಗಿದೆ. ಬಹುತೇಕ ಸಾರ್ವಜನಿಕರು 5 ರೂಪಾಯಿ ಕಾಯಿನ್‌ಗಾಗಿ ರಸ್ತೆಯಲ್ಲಿ ಓಡಾಡುವ ಜನರನ್ನು, ಇಲ್ಲ ಅಕ್ಕ–ಪಕ್ಕದ ಅಂಗಡಿಗೆ ಹೋಗಿ ಹೊಸ 5 ರೂಪಾಯಿ ಕಾಯಿನ್ ಅನ್ನು ತೆಗೆದುಕೊಳ್ಳುವ ಪರಿಸ್ಥಿತಿ ಇದೆ. ಸಾಮಾನ್ಯವಾಗಿ, ಎಲ್ಲರ ಮನೆಯಲ್ಲೂ ನೀರಿನ ಘಟಕಗಳಿಂದ ಮನೆ ಹಿರಿಯ ನಾಗರಿಕರೇ ನೀರು ತೆಗೆದುಕೊಂಡು ಬರುವ ಪರಿಸ್ಥಿತಿ ಇದೆ. ಹೊಸ 5 ರೂಪಾಯಿ ಕಾಯಿನ್‌ಗಾಗಿ ಬೇರೆಯವರನ್ನು ಕೇಳುವುದು ಅವರಿಗೆ ಒಂದು ರೀತಿಯಲ್ಲಿ ಮುಜುಗರವೂ ಆಗಬಹುದು. ತಂತ್ರಜ್ಞಾನ ಇಷ್ಟು ಮುಂದುವರಿದಿದ್ದರೂ ನಮ್ಮ ನಗರ ಪಾಲಿಕೆಯವರು ಇನ್ನೂ ಓಬಿರಾಯನ ಕಾಲದಲ್ಲೇ ಇದ್ದಾರೆ. ಈ ಕಾಯಿನ್ ವ್ಯವಸ್ಥೆಯ ಬದಲಾಗಿ 'ಫೋನ್ ಪೇ ಅಥವಾ ಗೂಗಲ್ ಪೇ' ವ್ಯವಸ್ಥೆ ಮಾಡಿದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ನಗರ ಪಾಲಿಕೆಯ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಆಪರೇಷನ್ ಸಿಂಧೂರ ಯಶಸ್ವಿಯಾಗಿದೆಯೇ?

ಮಾನ್ಯರೆ,

ಆಪರೇಷನ್ ಸಿಂಧೂರ ಎಂಬುದು ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ ಭಾರತೀಯ ಸೇನೆಯು ಪಾಕಿಸ್ಥಾನ ಹಾಗೂ ಪಾಕ್ ಆಕ್ರಮಿಸಿದ ಕಾಶ್ಮೀರದಲ್ಲಿ ನಡೆಸಿದ ಕಾರ್ಯಾಚರಣೆಯಾಗಿದೆ.

ಪಹಲ್ಗಾಮ್‌ನ ಬೈಸರಾನ್‌ನಲ್ಲಿ ನಡೆದ ಭಯೋತ್ಪಾದಕರ ದಾಳಿಯಲ್ಲಿ 26 ಪ್ರವಾಸಿಗರು ಸಾವನ್ನಪ್ಪಿದ್ದರು. ಆ ಹಂತಕರು ಎಲ್ಲಿ ಅಡಗಿದ್ದಾರೆ? ಅಪರಾಧಿಗಳು ಇನ್ನೂ ಸಿಕ್ಕಿಲ್ಲ. ಭಾರತಕ್ಕೆ ಬೇಕಾದ ಮೋಸ್ಟ್ ವಾಂಟೆಡ್ ಉಗ್ರರಾದ ಹಪೀಜ್, ಮಸೂದ್ ಅಜರ್, ದಾವುದ್ ಇಬ್ರಾಹಿಂ, ಚೋಟಾ ಶಕೀಲ್ ಯಾರೊಬ್ಬರೂ ಸೆರೆ ಸಿಕ್ಕಿಲ್ಲ. ಹತ್ಯೆಯಾಗಿಲ್ಲ. ಪಾಕಿಸ್ಥಾನದವರು ನಮಗೆ ಹಸ್ತಾಂತರಿಸಲಿಲ್ಲ. ಪಾಕ್ ಆಕ್ರಮಿತ ಕಾಶ್ಮೀರ ಭಾರತಕ್ಕೆ ಸೇರ್ಪಡೆಯಾಗಲಿಲ್ಲ. ಐಎಂಎಫ್ ಪಾಕಿಸ್ಥಾನಕ್ಕೆ ಸಾಲ ನೀಡುವುದನ್ನು ತಡೆಯಲಾಗಲಿಲ್ಲ. ಮೂರು ಹಂತದ ಭದ್ರತೆ ಇದ್ದರೂ ಪಹಲ್ಗಾಮ್ ದಾಳಿ ಹೇಗೆ ಸಂಭವಿಸಿತು? ಈ ಲೋಪದ ಬಗ್ಗೆ ಇನ್ನೂ ತನಿಖೆಯಾಗಲಿಲ್ಲ. ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಸಿಗುವ ಮುನ್ನವೇ ಕದನ ವಿರಾಮ ಭಾರತಕ್ಕೆ ಬೇಕಿತ್ತಾ? ಅದು ಅಮೇರಿಕಾ ಅಧ್ಯಕ್ಷರು ಘೋಷಣೆ ಮಾಡುವ ಅವಶ್ಯಕತೆ ಏನಿತ್ತು? ಈ ಎಲ್ಲಾ ಪ್ರಶ್ನೆಗಳಿಗೆ ನಮ್ಮನ್ನ ಆಳುವವರು ಉತ್ತರ ಕೊಡಬೇಕು.

–ಕೃಷ್ಣ ಹೆಗಡೆ, ರಾಜರಾಜೇಶ್ವರಿ ನಗರ, ಮೈಸೂರು.

■ ಟೋಲ್‌ನಿಂದ ಮುಕ್ತಿ ಎಂದು?

ಮಾನ್ಯರೆ,


ದೇಶದಲ್ಲಿ 30 ಸಾವಿರ ಕಿ. ಮೀ ದೂರದಷ್ಟು ದ್ವಿಪಥ ಹೆದ್ದಾರಿಗಳಿವೆ. ಇವುಗಳನ್ನು 10 ಲಕ್ಷ ಕೋಟಿ ವೆಚ್ಚದಲ್ಲಿ ಚತುಷ್ಪಥವಾಗಿ, ನಿರ್ಮಾಣ, ನಿರ್ವಹಣೆ, ವರ್ಗಾವಣೆ, ಮಾದರಿಯಡಿ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ. 15 ವರ್ಷಗಳವರೆಗೆ ಸಚಿವಾಲಯವೇ ಟೋಲ್ ಸಂಗ್ರಹಿಸಲಿದೆ ಎಂದು ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿಯವರು ಹೇಳಿರುವುದು ವರದಿಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಬಹುತೇಕ ರಸ್ತೆಗಳನ್ನು ಅಲ್ಪ ಸ್ವಲ್ಪ ವಿಸ್ತರಿಸಿ, ಹೆದ್ದಾರಿ ಹಣೆಪಟ್ಟಿ ನೀಡಿ ಎಲ್ಲಾ ರಸ್ತೆಗಳಿಂದಲೂ ಟೋಲ್ ಸಂಗ್ರಹಿಸಲಾಗುತ್ತಿದೆ. 20–30 ವರ್ಷಗಳ ಹಿಂದೆ ಟೋಲ್ ಸಂಗ್ರಹ ಅದರ ನಿರ್ಮಾಣ ವೆಚ್ಚವನ್ನು ಅಧರಿಸಿ 4–5 ವರ್ಷ ಎಂದು ನಿಗದಿಯಾಗಿರುತ್ತಿತ್ತು. ಅಲ್ಲದೆ ಈಗಿನಂತೆ ಪ್ರತಿ ವರ್ಷ ಟೋಲ್ ಶುಲ್ಕ ಏರಿಕೆ ಮಾಡುವ ಪದ್ಧತಿಯೂ ಇರಲಿಲ್ಲ. ಆದರೆ ಈಗಿನ ಕೇಂದ್ರ ಸರ್ಕಾರ ಪ್ರತಿ ವರ್ಷ ಏರಿಕೆ ಮಾಡುತ್ತಾ, ಟೋಲ್ ಸಂಗ್ರಹವನ್ನು ಇಂತಿಷ್ಟು ವರ್ಷ ಎಂದು ನಿಗದಿ ಮಾಡದೆ, ಜನರನ್ನು ಹಗಲುದರೋಡೆ ಮಾಡುತ್ತಿದೆ. ಈ ಬಗ್ಗೆ ಸರ್ಕಾರ ತನ್ನ ಧೋರಣೆಯನ್ನು ಬದಲಿಸಿ ಪ್ರಯಾಣಿಕ ಸ್ನೇಹಿಯಾಗಲಿ. ಈಗಾಗಲೇ, ಟೋಲ್, ವಾಹನ ರಸ್ತೆ ತೆರಿಗೆ, ವಾಹನದ ಖರೀದಿ ಮೇಲಿನ ದುಬಾರಿ, ಜಿಎಸ್‌ಟಿ, ಪೆಟ್ರೋಲ್, ಡೀಸೆಲ್ ಮೇಲಿನ ದುಬಾರಿ ತೆರಿಗೆಗಳಿಂದ ಜನರು ಬಸವಳಿದಿದ್ದಾರೆ. ಸಂಸದರು ಜನರ ಮೇಲಿನ ಹೊರೆಯ ಬಗ್ಗೆ ಕಾಳಜಿ ವಹಿಸಬೇಕು.

–ಮುಳ್ಳೂರು ಪ್ರಕಾಶ್, ಮೈಸೂರು.

ಕೂಡಿ ಬಾಳುವ ಕಾಲ ಹೋಯ್ತು... ಈಗ ಏನಿದ್ದರೂ ಒಡೆದ ಬಾಳು...!



ಮಿರ್ಲೆ ಚಂದ್ರಶೇಖರ
ಮೊ: 9916129654



> ಸಮಸ್ಯೆಗಳು, ನೈತಿಕತೆ ಹಾಗೂ ಸಂಸ್ಕೃತಿಯ ತಿಳುವಳಿಕೆಗಳಿಲ್ಲದ ದುರ್ಬಲ ಕುಟುಂಬಗಳನ್ನು ಸದೃಢಗೊಳಿಸಿ, ನ್ಯಾಯ–ನೀತಿ, ನೈತಿಕತೆ, ಸಮಾಜದಲ್ಲಿ ಹೊಂದಾಣಿಕೆ, ಆರ್ಥಿಕ ಸದೃಢತೆ ಮುಂತಾದ ಶಿಸ್ತುಪಾಲನಾ ಅಂಶಗಳನ್ನು ಅಳವಡಿಸಿಕೊಂಡು ಕುಟುಂಬ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಉದ್ದೇಶದಿಂದಲೇ ಹುಟ್ಟಿಕೊಂಡಿದ್ದು 'ಅಂತರರಾಷ್ಟ್ರೀಯ ಕುಟುಂಬ ದಿನ'.

ಸಾಮಾಜಿಕ ವ್ಯವಸ್ಥೆಯಲ್ಲಿ ಕುಟುಂಬ ಎಂದರೆ ವಿಭಿನ್ನ ಅರ್ಥಗಳನ್ನು ನೀಡುವ ಒಂದು ವಿಶಿಷ್ಟವಾದ ಪದ. ನಮಗೆ ಕುಟುಂಬವೆಂದರೆ ಅಜ್ಜಿ–ತಾತ, ತಾಯಿ–ತಂದೆ ಮತ್ತು ಒಡಹುಟ್ಟಿದವರು ಜೊತೆಯಲ್ಲಿ ವಾಸಿಸುವುದು. ಸಾಕುಪ್ರಾಣಿಗಳನ್ನೂ ಸೇರಿಸಿ ನನ್ನ ಕುಟುಂಬವೆಂದು ಹೇಳುವವರು ಇದ್ದಾರೆ, ಅಜ್ಜಿ–ತಾತ, ದೊಡ್ಡಪ್ಪ–ಚಿಕ್ಕಪ್ಪಂದಿರ ಸಂಸಾರವನ್ನು ಸೇರಿಸಿಕೊಂಡು ಅವಿಭಕ್ತ ಕುಟುಂಬವಾಗಿ ಅದಕ್ಕೆ ಅನ್ವರ್ಥವಾಗಿ ಬದುಕು ನಡೆಸುವ ಗುಂಪು ಸಹ ಕುಟುಂಬವೇ. ಭಾರತೀಯರಾದ ನಾವು ವಿಶ್ವವೇ ಒಂದು ಕುಟುಂಬ ಎನ್ನುತ್ತೇವೆ. ಯೋಚಿಸಬೇಕಾಗಿರುವುದು ಇವತ್ತಿನ ಕುಟುಂಬವನ್ನು ಯಾವ ರೀತಿ ವಿಶ್ಲೇಷಿಸಿ ಅದನ್ನು ಹೇಗೆ ಕರೆಯಬೇಕು ಎಂಬುದನ್ನು!. ಈಗ ಕೂಡು ಕುಟುಂಬಗಳು ಇಲ್ಲವಾಗಿವೆ, ತಂದೆ–ತಾಯಿ ಮತ್ತು ಒಂದು ಅಥವಾ ಎರಡು ಮಕ್ಕಳು ಮಾತ್ರ ಇರುವ ಮನೆಗಳು ಕುಟುಂಬಗಳಾಗಿವೆ. ಮಕ್ಕಳು ದೊಡ್ಡವರಾದ ಕಾಲಕ್ಕೆ ಅವರುಗಳು ಬದುಕು ಕಟ್ಟಿಕೊಳ್ಳಲು ದೂರದ ಊರುಗಳಲ್ಲಿ ನೆಲೆಸುತ್ತಾರೆ. ಅಂತ್ಯ ಕಾಲದಲ್ಲಿರುವ ಹೆತ್ತವರು ಆಶ್ರಮಗಳಲ್ಲಿ. ಒಟ್ಟಿನಲ್ಲಿ ಹಲವು ಸಂಸಾರಗಳು ಒಟ್ಟಿಗೇ ಇದ್ದ ಅವಿಭಕ್ತ ಕುಟುಂಬಗಳ ಮನೆಗಳು ದೊಡ್ಡದೊಡ್ಡ ಬಂಗಲೆಗಳಾಗಿ ಬದಲಾವಣೆಗೊಂಡು ಒಬ್ಬಿಬ್ಬರು ವಾಸಿಸುವ ಮನೆಗಳೇ ಕುಟುಂಬಗಳಾಗಿರುವುದು ದುರ್ದೈವ. ಏಕೋಪಾಧ್ಯಾಯ ಶಾಲೆಗಳಂತೆ ಏಕಸದಸ್ಯ ಕುಟುಂಬಗಳೇ ಇರುವುದು ಸಾಮಾಜಿಕ ಪಿಡುಗಾಗಿದೆ!.

ಹಿಂದೆ ಕುಟುಂಬದಲ್ಲಿ ಕಡಿಮೆ ಎಂದರೆ ನಾಲ್ಕು ಮಕ್ಕಳಾದರೂ ಇರುತ್ತಿದ್ದವು. ಹನ್ನೆರಡು ಮಕ್ಕಳವರೆಗೂ ಇರುವ ಕುಟುಂಬಗಳ ಸಂಖ್ಯೆ ಬಹಳ ಇದ್ದವು. ಅವುಗಳಲ್ಲಿ ಅರ್ಧ ಪರಸ್ಥಳಕ್ಕೆ ಕೆಲಸಕ್ಕೆಂದು ಹೋದರೆ ಒಂದಷ್ಟು ಮಂದಿ ಹುಟ್ಟಿದ ಊರಿನಲ್ಲಿ ಪೋಷಕರೊಂದಿಗೆ ಇರುತ್ತಿದ್ದರು. ಆ ಕಾರಣಕ್ಕೆ ಕುಟುಂಬಗಳು ಮಕ್ಕಳು–ಮರಿಗಳಿಂದ ತುಂಬಿ ತುಳುಕುತ್ತಿತ್ತು. ಮನೆ ಸದಾ ಲವಲವಿಕೆಯಿಂದ ಇರುತ್ತಿತ್ತು, ಹಿರಿಯರ ನಿಯಂತ್ರಣ ಹಾಗೂ ಮಾರ್ಗದರ್ಶನ ಇದ್ದುದರಿಂದ ಅಂದಿನ ಸಂಸಾರಗಳಲ್ಲಿ ಒಡಕುಗಳು ಇಲ್ಲದೆ ವಿಚ್ಛೇದನಗಳಿಗೆ ಅವಕಾಶ ಇರಲಿಲ್ಲ.

ಇಂದಿನ ವ್ಯವಸ್ಥೆ ವಿಭಿನ್ನ, ತುಂಬಿದ ಕುಟುಂಬಗಳನ್ನು ಕಾಣಲಾಗುತ್ತಿಲ್ಲ. ಮನೆ ನೋಡಿದರೆ ಭವ್ಯಬಂಗಲೆ, ಒಳಗೆ ವಾಸಿಸುವವರ ಸಂಖ್ಯೆ ನಾಲ್ಕನ್ನು ದಾಟುವುದಿಲ್ಲ. ನೆಂಟರುಗಳು ಬಂದು–ಹೋಗುವ ಪರಿಪಾಟವು ಪೂರ್ಣವಾಗಿ ನಿಂತು ಹೋಗಿದೆ, ಆದರೂ ಮೂರು ನಾಲ್ಕು ಬೆಡ್ ರೂಂಗಳಿರುವ ಮನೆಗಳು. ಇರುವ ಒಂದಿಬ್ಬರು ಮಕ್ಕಳು ವಿದೇಶಕ್ಕೋ ಅಥವಾ ದೂರದ ಊರುಗಳಲ್ಲಿ ಕೆಲಸ ಮಾಡುತ್ತಿದ್ದರೆ ಹಳ್ಳಿಗಳಾದಿಯಾಗಿ ನಗರಗಳಲ್ಲೂ ಬಹುತೇಕ ಮನೆಗಳು ಜನಗಳಿಲ್ಲದೆ ವಯಸ್ಸಾದ ತಂದೆ–ತಾಯಿ ಅಥವಾ ಇಬ್ಬರಲ್ಲಿ ಒಬ್ಬರು ನೆಲೆಸಿರುವ ವೃದ್ಧಾಶ್ರಮಗಳಾಗಿವೆ.

ದುರಂತವೆಂದರೆ ಇಂದಿನ ಮಕ್ಕಳು ಒಂದೇ ಊರಿನಲ್ಲಿ ಕೆಲಸ ಮಾಡುತ್ತಿದ್ದರೂ ಮದುವೆ ಆಗುತ್ತಿದ್ದಂತೆ ಬೇರೆ ಬಡಾವಣೆಗಳಲ್ಲಿ ಮನೆ ಮಾಡಿಕೊಂಡು ವಾಸವಿದ್ದಾರೆ, ಮನಸ್ಸು ಬಂದಾಗ ನೆಂಟರಂತೆ ಬಂದು ಹೆತ್ತವರನ್ನು ನೋಡಿ ಹೋಗುತ್ತಾರೆ. ಆಸ್ತಿ ಹಂಚಿಕೆಯಲ್ಲಿ ಅವರಿಚ್ಛೆಯಂತೆ ಭಾಗ ಆಗಿರದಿದ್ದರೆ ಯೋಗಕ್ಷೇಮ ವಿಚಾರಿಸುವುದಕ್ಕೂ ಬರುವುದಿಲ್ಲ.

ಹೀಗೆ ಕುಟುಂಬಗಳಲ್ಲಿ ಉದ್ಭವಿಸುವ ಸಮಸ್ಯೆಗಳು, ನೈತಿಕತೆ ಹಾಗೂ ಸಂಸ್ಕೃತಿಯ ತಿಳುವಳಿಕೆಗಳಿಲ್ಲದ ದುರ್ಬಲ ಕುಟುಂಬಗಳನ್ನು ಸದೃಢಗೊಳಿಸಿ, ನ್ಯಾಯನೀತಿ, ನೈತಿಕತೆ, ಸಮಾಜದಲ್ಲಿ ಹೊಂದಾಣಿಕೆ, ಆರ್ಥಿಕ ಸದೃಢತೆ ಮುಂತಾದ ಶಿಸ್ತುಪಾಲನಾ ಅಂಶಗಳನ್ನು ಅಳವಡಿಸಿಕೊಂಡು ಕುಟುಂಬ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಉದ್ದೇಶದಿಂದಲೇ ಹುಟ್ಟಿಕೊಂಡಿದ್ದು 'ಅಂತರರಾಷ್ಟ್ರೀಯ ಕುಟುಂಬ ದಿನ'.

(15, ಮೇ 2025, ಗುರುವಾರ ಆಚರಿಸುವ ಅಂತರರಾಷ್ಟ್ರೀಯ ಕುಟುಂಬ ದಿನದ ನಿಮಿತ್ತ ಲೇಖನ)

ನಾಗರಿಕ ಸಮಾಜದಲ್ಲಿ ಕುಟುಂಬಗಳು ಎದುರಿಸುತ್ತಿರುವ ಆರ್ಥಿಕ, ಸಾಮಾಜಿಕ ಮತ್ತು ಜನಸಂಖ್ಯಾ ಹೆಚ್ಚಳದ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುವ ಗುರಿಯೊಂದಿಗೆ ವಿಶ್ವಸಂಸ್ಥೆಯು 'ಅಂತರರಾಷ್ಟ್ರೀಯ ಕುಟುಂಬ ದಿನ'ವನ್ನು ಪ್ರಾರಂಭಿಸಿತು. ಮೇ 15 ಅನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು 'ಅಂತರರಾಷ್ಟ್ರೀಯ ಕುಟುಂಬಗಳ ದಿನ'ವನ್ನು ಅಂಗೀಕರಿಸಿದೆ. ಇದರ ಚಿಹ್ನೆಯು ಒಳಗೆ ಕೆಂಪು ಬಣ್ಣದ ಚಿತ್ರದೊಂದಿಗೆ ಗಾಢ ಹಸಿರು ವೃತ್ತವನ್ನು ಒಳಗೊಂಡಿದೆ. ಒಳಗಿನ ಚಿತ್ರವು ಹೃದಯ ಹಾಗೂ ಮನೆಯ ಸರಳ ರೇಖಾಚಿತ್ರಗಳನ್ನು ಒಳಗೊಂಡಿದೆ. ಕುಟುಂಬವು ಒಂದು ವೃತ್ತದಂತೆ, ಬಂಧನ ಅಥವಾ ಸಂಪರ್ಕವು ಎಂದಿಗೂ ಕೊನೆಗೊಳ್ಳುವುದಿಲ್ಲ. ಏಕೆಂದರೆ ಇದು ಕರುಳಬಳ್ಳಿಗಳ ಸಂಬಂಧ, ಕೆಲವೊಮ್ಮೆ ಮುರಿದು ಹೋದರೂ ಕಾಲಾನಂತರದಲ್ಲಿ ಮರೆವು ಎಲ್ಲವನ್ನೂ ಒಟ್ಟುಗೂಡಿಸಿಬಿಡುತ್ತದೆ. ನಡುವೆ ಹುಟ್ಟಿದ ದ್ವೇಷಕ್ಕೆ ಅಲ್ಪ ಆಯಸ್ಸು. ಆದ್ದರಿಂದ ಯಾವಾಗಲೂ ಹೃದಯಗಳು ಸಂಬಂಧಗಳಿಗಾಗಿ ಮಿಡಿಯುತ್ತವೆ.

2025ರ ಅಂತರರಾಷ್ಟ್ರೀಯ ಕುಟುಂಬ ದಿನದ ಥೀಮ್; ಕುಟುಂಬಗಳು ಹವಾಮಾನ ಕ್ರಿಯೆ ಮತ್ತು ಸುಸ್ಥಿರತೆಗೆ ಹೇಗೆ ಕೊಡುಗೆ ನೀಡಬಹುದು ಎಂಬುದರ ಮೇಲೆ ಗಮನವನ್ನು ಕೇಂದ್ರೀಕರಿಸಲಾಗಿದೆ. ಇದರಲ್ಲಿ ಕುಟುಂಬಗಳು ಪರಿಸರ ಸ್ನೇಹಿ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವುದು, ಇಂಗಾಲದ ದುಷ್ಪರಿಣಾಮಗಳನ್ನು ನಿಯಂತ್ರಿಸುವುದು ಮತ್ತು ಸಮುದಾಯಗಳನ್ನು ಹವಾಮಾನ ಧೀರರನ್ನಾಗಿಸುವುದನ್ನು ಒಳಗೊಂಡಿದೆ. ಸುಸ್ಥಿರ ಪ್ರಕೃತಿಗಾಗಿ ಕುಟುಂಬಗಳ ಸನ್ನದ್ಧತೆಯನ್ನು ಬೇಡುತ್ತದೆ.

ಕೌಟುಂಬಿಕ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುವುದು, ಕುಟುಂಬಗಳ ಮೇಲೆ ಪರಿಣಾಮ ಬೀರುವ ಸಾಮಾಜಿಕ, ಆರ್ಥಿಕ ಮತ್ತು ಜನಸಂಖ್ಯಾ ಪ್ರಕ್ರಿಯೆಗಳ ವಿಷಯವಾಗಿ ಜ್ಞಾನವನ್ನು ಹೆಚ್ಚಿಸುವುದು ಹಾಗೂ ಎಲ್ಲಾ ಬಗೆಯ ಕುಟುಂಬಗಳ ವೈವಿಧ್ಯತೆಯನ್ನು ಒಪ್ಪಿಕೊಳ್ಳುವುದು ಮತ್ತು ಭಾಗವಹಿಸುವುದನ್ನು ಉತ್ತೇಜಿಸುವುದು ದಿನದ ಆಚರಣೆಯಲ್ಲಿ ಒಳಗೊಂಡಿದೆ.

ಕುಟುಂಬಗಳಲ್ಲಿ ಬಾಂಧವ್ಯದ ಮಹತ್ವವನ್ನು ನೆನಪಿಸುವುದು ಮತ್ತು ಜನರು ತಮ್ಮ ಪ್ರೀತಿಪಾತ್ರರ ಜೊತೆ ಗುಣಮಟ್ಟದ ಸಮಯವನ್ನು ನೆಮ್ಮದಿಯಾಗಿ ಕಳೆಯುವುದು, ಆ ನಿಟ್ಟಿನಲ್ಲಿ ಎಲ್ಲರನ್ನೂ ಪ್ರೋತ್ಸಾಹಿಸುವುದು. ಜಾಗತಿಕ ಕುಟುಂಬ ದಿನದಿಂದ ಮೊಳಗುವ ಘೋಷಣೆ ಎಂದರೆ; 'ಒಂದು ಜಗತ್ತು, ಒಂದು ಕುಟುಂಬ, ತಲೆಮಾರುಗಳಾದ್ಯಂತ ಸೇತುವೆಗಳನ್ನು ನಿರ್ಮಿಸುವುದು'.

ನಮ್ಮ ದೇಶದ 'ಉಪನಿಷದ್' ಇನ್ನಿತರೆ ಮಹಾನ್ ಹಿಂದೂ ಗ್ರಂಥಗಳಲ್ಲಿ ಕಂಡುಬರುವ 'ವಸುಧೈವ ಕುಟುಂಬಕಂ' ಅಂದರೆ 'ಜಗತ್ತೇ ಒಂದು ಕುಟುಂಬ'. ಇವನು ನಮ್ಮ ಸಂಬಂಧಿ, ಆತನು ಅಪರಿಚಿತ ಎಂಬ ಸಣ್ಣತನವನ್ನು ತೋರದೆ ಇಡೀ ಜಗತ್ತೇ ಒಂದು ಕುಟುಂಬ, ಉದಾತ್ತ ಮನೋಭಾವವನ್ನು ಹೊಂದಿರಿ ಹಾಗೂ ಮನಸ್ಸು ವಿಶಾಲವಾಗಿರಲಿ ಎಂಬ ಅರಿವನ್ನು ಬಹಳ ಹಿಂದೆಯೇ ನಮ್ಮ ಸಂಸ್ಕೃತಿಯು ಹೇಳಿಕೊಟ್ಟಿದೆ. ಪಾಶ್ಚಾತ್ಯ ದೇಶಗಳಲ್ಲಿ ಸದೃಢ ಕುಟುಂಬಗಳ ಕೊರತೆಯ ಕಾರಣ ವಿಶ್ವಸಂಸ್ಥೆಯು 1993ರಲ್ಲಿ ಅಂತರರಾಷ್ಟ್ರೀಯ ಕುಟುಂಬಗಳ ದಿನವನ್ನು ಆಚರಿಸಲು ಘೋಷಿಸಿತು. ಇದನ್ನು ಮೊದಲು 15 ಮೇ 1994ರಂದು ಆಚರಿಸಲಾಯಿತು.

ಪ್ರತೀ ವರ್ಷ ಜನವರಿ ಒಂದರಂದು ಆಚರಿಸುವ ಜಾಗತಿಕ ಕುಟುಂಬ ದಿನದೊಂದಿಗೆ ಮೇ 15 ರಂದು ಆಚರಿಸುವ ಅಂತರರಾಷ್ಟ್ರೀಯ ಕುಟುಂಬ ದಿನವು ನಿಕಟ ಸಂಬಂಧವನ್ನು ಹೊಂದಿದೆ. ಮೂಲದ ವಿಷಯದಲ್ಲಿ ಪ್ರತ್ಯೇಕವಾಗಿರಬಹುದು ಆದರೆ ಎರಡೂ ಸಂದರ್ಭಗಳು ಸಾಮಾನ್ಯ ಆದರ್ಶಗಳು ಮತ್ತು ಪರಿಕಲ್ಪನೆಗಳನ್ನು ಸಮಾಜಕ್ಕೆ ಹಂಚಿಕೊಳ್ಳುತ್ತವೆ. ಈ ದಿನದಂದು ನನ್ನ ಕುಟುಂಬ ನನ್ನ ಬಲ ಎಂಬ ಆಶಯದಲ್ಲಿ ಸಾಧ್ಯವಾದಷ್ಟು ಸಂಸಾರದಲ್ಲಿನ ಎಲ್ಲಾ ಸದಸ್ಯರು ಒಂದೇ ಸೂರಿನಡಿ ನೆಲೆಸುವಂತಾಗಿ, ಒಟ್ಟಿಗೆ ಕುಳಿತು ಹರಟೆ ಹೊಡೆಯುತ್ತಾ ಆನಂದವಾಗಿ ಸಹಭೋಜನ ಸವಿಯುವಂತಾಗಲಿ.

ಇನ್ನು ಮುಂದೆ ಸರ್ಕಾರದಿಂದಲೇ 108 ಆಂಬುಲೆನ್ಸ್ ಸೇವೆ

ಬೆಂಗಳೂರು,ಮೇ14(ಕೆಎಂಶಿ)–ಸರ್ಕಾರವೇ ಇನ್ನು ಮುಂದೆ 108 ಆಂಬುಲೆನ್ಸ್ ಸೇವೆ ಒದಗಿಸಲಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪ್ರಕಟಿಸಿದ್ದಾರೆ.

ತಜ್ಞ ವೈದ್ಯರು, ವೈದ್ಯರು ಹಾಗೂ ಸ್ಟಾಫ್‌ನರ್ಸ್‌ಗಳ ವೇತನ ಪರಿಷ್ಕರಣೆ ಮಾಡುವುದಾಗಿಯೂ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಏಜೆನ್ಸಿ ಮೂಲಕ ಕಾರ್ಯನಿರ್ವಹಿಸುತ್ತಿದ್ದ 108 ಸೇವೆಯನ್ನು ಹಿಂದಕ್ಕೆ ಪಡೆದು ಇಲಾಖೆಯೇ ನಡೆಸಲಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಈ ಸೇವೆಯನ್ನು ಇಲಾಖೆಯಡಿ ನಡೆಸಿ ಯಶಸ್ವಿಯಾಗಿದ್ದು, ಅದನ್ನು ರಾಜ್ಯಾದ್ಯಂತ 3 ತಿಂಗಳಲ್ಲಿ ವಿಸ್ತರಿಸುವುದಾಗಿ ತಿಳಿಸಿದರು. 108 ಸಂಪೂರ್ಣ ಸೇವೆ ಹಾಗೂ ನಿರ್ವಹಣೆ ಸರ್ಕಾರವೇ ಮಾಡಲಿದೆ ಎಂದರು. ಇದರ ನಿರ್ವಹಣೆಯನ್ನು ಇದುವರೆಗೂ ಏಜೆನ್ಸಿಗಳಿಗೆ ವಹಿಸಿ ಕೊಡಲಾಗಿತ್ತು. ಗುತ್ತಿಗೆ ಪಡೆದ ಸಂಸ್ಥೆಯ ಮೇಲೆ ಆರೋಪಗಳು ಬಂದ ಹಿನ್ನೆಲೆಯಲ್ಲಿ ಸರ್ಕಾರ ಇಂಥ ತೀರ್ಮಾನ ಕೈಗೊಂಡಿದೆ. ರಾಷ್ಟ್ರೀಯ ಆರೋಗ್ಯ ಮಿಷನ್ ಯೋಜನೆ ಅಡಿ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರು, ತಜ್ಞ ವೈದ್ಯರು, ಎಸ್‌ಎನ್‌ಸಿಯು ಮತ್ತು ಐಸಿಯುನಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಟಾಫ್‌ನರ್ಸ್‌ಗಳ ವೇತನ ಪರಿಷ್ಕರಿಸಿ ಹೆಚ್ಚಳ ಮಾಡಲಾಗಿದೆ. ಇದರಿಂದ ವೈದ್ಯರ ವೇತನ 50ರಿಂದ 60 ಸಾವಿರಕ್ಕೂ ತಜ್ಞ ವೈದ್ಯರಿಗೆ 1 ಲಕ್ಷದ 10 ಸಾವಿರರಿಂದ 1 ಲಕ್ಷದ 40 ಸಾವಿರದವರೆಗೆ ಹೆಚ್ಚಳ ಮಾಡಲಾಗಿದೆ.

ಸ್ಟಾಫ್ ನರ್ಸ್‌ಗಳ ವೇತನವನ್ನು 18 ಸಾವಿರದಿಂದ 22 ಸಾವಿರಕ್ಕೆ ಹೆಚ್ಚಳ ಮಾಡಲಾಗುವುದು. ಈ ವೇತನವು ಹೊಸದಾಗಿ ನೇಮಕ ಮಾಡಿಕೊಳ್ಳುವ ಸಿಬ್ಬಂದಿಗೆ ದೊರೆಯಲಿದೆ. ಹೊಸ ವೇತನ ಪಡೆಯ ಬೇಕೆಂದರೆ ಹಳಬರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ ಮತ್ತೆ ಹೊಸದಾಗಿ ಸೇವೆಗೆ ಮರು ಸೇರ್ಪಡೆ ಗೊಂಡರೆ ಪರಿಷ್ಕರಣೆ ವೇತನ ದೊರೆಯಲಿದೆ ಎಂದರು.


ಇಂದು ವಿದ್ಯುತ್ ವ್ಯತ್ಯಯ

ಮೈಸೂರು, ಮೇ 14– ಮೇ 15ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5:30 ರವರೆಗೆ ಕುವೆಂಪುನಗರ ಕೆ.ಹೆಚ್.ಬಿ 1, 2, 3, 4ನೇ ಹಂತ, ಅರವಿಂದನಗರ, ಕೆಎಸ್‌ಆರ್‌ಟಿಸಿ ಡಿಪೋ ಸುತ್ತಮುತ್ತ, ಕಾಲಭೈರವೇಶ್ವರ ಛತ್ರ ಸುತ್ತಮುತ್ತ, ಐಶ್ವರ್ಯ ಲೇಔಟ್, ಕುವೆಂಪುನಗರ ಎನ್. ಮತ್ತು ಎಂ. ಬ್ಲಾಕ್, ನೃಪತುಂಗ ರಸ್ತೆ, ಭಾಗಶಃ ಆದಿಚುಂಚನಗಿರಿ ರಸ್ತೆ, ಆರ್‌ಎಂಪಿ ಕ್ವಾಟ್ರಸ್ ಹಾಗೂ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಪ್ರಯಾಣಿಕರಿಗೆ ಹೊಸ ತಲೆ ನೋವು!

ವೀಕೆಂಡ್‌ಗಳಲ್ಲಿ ಟೋಲ್ ಪ್ಲಾಜಾದಲ್ಲಿ ಗಂಟೆಗಟ್ಟಲೆ ಕಾಯುವ ದುಸ್ಥಿತಿ

ಮೈಸೂರು, ಮೇ14(ಬಿಎಲ್‌ಯು)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ, ಶ್ರೀರಂಗಪಟ್ಟಣ ಬಳಿಯ ಗಣಂಗೂರು ಹಾಗೂ ಬಿಡದಿಯ ಶೇಷಗಿರಿಹಳ್ಳಿಯ ಟೋಲ್ ಪ್ಲಾಜಾಗಳನ್ನು ವಾರಾಂತ್ಯದ ದಿನಗಳಲ್ಲಿ ದಾಟುವುದು ಹರಸಾಹಸವೇ ಸರಿ. ಟೋಲ್ ದಾಟಲು ವಾಹನ ಚಾಲಕರು ಹಾಗೂ ಪ್ರಯಾಣಿಕರು ಗಂಟೆಗಟ್ಟಲೆ ಕಾಯಬೇಕಾದ ದುಸ್ಥಿತಿ ಎದುರಾಗಿದೆ.



ಸಾಫ್ಟ್‌ವೇರ್ ಕಂಪನಿಗಳಿಗೆ ಶನಿವಾರ ಮತ್ತು ಭಾನುವಾರ ಎರಡೂ ದಿನ ರಜೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಮೈಸೂರು ಮತ್ತು ಸುತ್ತಮುತ್ತಲ ಪ್ರವಾಸಿ ತಾಣಗಳ ವೀಕ್ಷಣೆಗಾಗಿ ಟೆಕ್ಕಿಗಳು ಪ್ಲಾನ್ ಮಾಡುತ್ತಾರೆ. ಹಾಗಾಗಿ ಶುಕ್ರವಾರ ರಾತ್ರಿ ಮತ್ತು ಶನಿವಾರ ಬೆಳಿಗ್ಗೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಭಾರಿ ಪ್ರಮಾಣದಲ್ಲಿ ವಾಹನ ಸಂಚಾರವಿರುತ್ತದೆ.

ಈ ವೇಳೆ ಒಟ್ಟಿಗೆ ಎಲ್ಲಾ ವಾಹನಗಳು ಬರುವ ಕಾರಣ ಬಿಡದಿ ಹಾಗೂ ಶ್ರೀರಂಗಪಟ್ಟಣದ ಗಣಂಗೂರು ಟೋಲ್ ಪ್ಲಾಜಾ ಬಳಿ ಭಾರಿ ವಾಹನ ದಟ್ಟಣೆಯಿಂದ ಜನ ತತ್ತರಿಸಿ ಹೋಗಿದ್ದಾರೆ.

ಭಾರತದ ಸಿಲಿಕಾನ್ ವ್ಯಾಲಿ ಎಂದೇ ಕರೆಯಲ್ಪಡುವ ಬೆಂಗಳೂರಿನಲ್ಲಿ ನೂರಾರು ಸಾಫ್ಟ್‌ವೇರ್ ಕಂಪನಿಗಳಿದ್ದು, ಲಕ್ಷಾಂತರ ಸಾಫ್ಟ್‌ವೇರ್ ಇಂಜಿನಿಯರ್‌ಗಳಿದ್ದಾರೆ. ಸಾವಿರಾರು ಮಂದಿ ವೀಕೆಂಡ್‌ನಲ್ಲಿ ಜಾಲಿ ಟ್ರಿಪ್‌ಗೆ ಪ್ಲಾನ್ ಮಾಡಿಯೇ ಇರುತ್ತಾರೆ.

ಹಾಗಾಗಿ ಕೆಲವರು ಮೈಸೂರಿನಲ್ಲೇ ವಾಸ್ತವ್ಯ ಹೂಡಿ, ಕೆಲವು ಪ್ರವಾಸಿ ತಾಣ ವೀಕ್ಷಿಸಿದರೆ, ಮತ್ತೆ ಕೆಲವರು ಬಂಡಿಪುರ, ಊಟಿಗೂ ಹೋಗುತ್ತಾರೆ. ಇನ್ನು ಕೆಲವರು ಮೈಸೂರು–ಕೊಡಗು, ಸಕಲೇಶಪುರ ಇನ್ನಿತರೆಡೆ ರೆಸಾರ್ಟ್ ಮತ್ತು ಹೋಂಸ್ಟೇಗಳಲ್ಲಿ ವಾಸ್ತವ್ಯ ಹೂಡುತ್ತಾರೆ.

ಸಾವಿರಾರು ಪ್ರವಾಸಿಗರು ಮೈಸೂರಿನ ಸುತ್ತಮುತ್ತ ಪ್ರವಾಸಿ ತಾಣ ವೀಕ್ಷಿಸಿ, ಒಟ್ಟಿಗೆ ಭಾನುವಾರ ಬೆಂಗಳೂರಿಗೆ ಹೊರಡುತ್ತಾರೆ. ಶ್ರೀರಂಗಪಟ್ಟಣದ ಗಣಂಗೂರು ಟೋಲ್ ಪ್ಲಾಜಾ ಬಳಿ ಬಂದಾಗ ವಾಹನ ದಟ್ಟಣೆ ಹೆಚ್ಚಾಗುತ್ತದೆ. ಟೋಲ್ ಪ್ಲಾಜಾದಲ್ಲಿ ಸುಮಾರು 7 ಟೋಲ್ ಪ್ರವೇಶ ಗೇಟ್‌ಗಳಿದ್ದು, 4 ಮಾತ್ರವೇ ತೆರೆದಿರುತ್ತವೆ. ಉಳಿದ ಟೋಲ್ ಮುಚ್ಚಿರುವ ಕಾರಣ ವಾಹನ ದಟ್ಟಣೆ ಉಂಟಾಗುತ್ತಿದೆ. ಇದರಿಂದ ಟೋಲ್ ದಾಟಿ ಹೋಗಲು ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಉಂಟಾಗಲಿದೆ ಎಂದು ಪ್ರಯಾಣಿಕರು ದೂರಿದ್ದಾರೆ. ಕೆಲವರು ಫೋಟೋ ಸಹಿತ ತಮ್ಮ ಎಕ್ಸ್ ಖಾತೆಯಲ್ಲಿ ಗೋಳು ತೋಡಿಕೊಂಡಿದ್ದಾರೆ.

ಕೆಲವರ ಫಾಸ್ಟ್ ಟ್ಯಾಗ್ ಅಕೌಂಟ್‌ನಲ್ಲಿ ಹಣ ಇರುವುದಿಲ್ಲ. ಈ ವೇಳೆ ಎರಡು ಪಟ್ಟು ಟೋಲ್ ಪಾವತಿಸಬೇಕಾಗುತ್ತದೆ ಎಂದು ಟೋಲ್ ಸಿಬ್ಬಂದಿ ತಿಳಿಸುತ್ತಾರೆ. ಈ ವೇಳೆ ಮಾತಿನ ಚಕಮಕಿ ನಡೆದು, ವಾಹನಗಳು ಮುಂದೆ ಸಾಗುವುದು ಮತ್ತಷ್ಟು ವಿಳಂಬವಾಗುತ್ತದೆ.

ಶ್ರೀರಂಗಪಟ್ಟಣದ ಗಣಂಗೂರು ಟೋಲ್ ದಾಟಿ ಬೆಂಗಳೂರಿನತ್ತ ಸಾಗಿದರೆ, ಬಿಡದಿಯ ಶೇಷಗಿರಿಹಳ್ಳಿ ಟೋಲ್‌ನಲ್ಲಿ ಪರಿಸ್ಥಿತಿ ಇನ್ನೂ ಅಧ್ವಾನ ಅಲ್ಲಿ ಕೂಡ ಟ್ರಾಫಿಕ್ ಜಾಮ್ ಉಂಟಾಗಿ ಟೋಲ್ ದಾಟಿ ಹೋಗಲು ಹರಸಾಹಸಪಡಬೇಕಾದ ಪರಿಸ್ಥಿತಿ ಉಂಟಾಗುತ್ತಿದೆ.

ಟೋಲ್ ಪ್ಲಾಜಾದಲ್ಲಿರುವ ಎಲ್ಲಾ ಗೇಟ್‌ಗಳನ್ನು ತೆರೆದರೆ ಪ್ರಾಯಶಃ ಈ ಸಮಸ್ಯೆಗೆ ಪರಿಹಾರ ಸಿಗುತ್ತದೆ. ಇಲ್ಲವೆಂದರೆ ಪ್ರತಿ ವೀಕೆಂಡ್‌ನಲ್ಲಿ ಈ ಗೋಳು ತಪ್ಪಿದ್ದಲ್ಲ. ವೀಕೆಂಡ್‌ನಲ್ಲಿ ಹೆಚ್ಚುವರಿಯಾಗಿ 6 ಗೇಟ್ ತೆರೆದರೆ ಅಲ್ಲಿ ಕಾರ್ಯನಿರ್ವಹಿಸುವ ನೌಕರರು ಮಾರನೇ ದಿನದಿಂದ ವಾರ ಕಾಲ ಅವರಿಗೆ ಕೆಲಸವಿಲ್ಲ. ಸುಖಾಸುಮ್ಮನೆ ಅವರಿಗೆ ಏಕೆ ಸಂಬಳ ಕೊಡಬೇಕು ಎಂಬ ಕಾರಣಕ್ಕೆ ಟೋಲ್ ಗುತ್ತಿಗೆ ಪಡೆದ ಕಂಪನಿಯ ಲೆಕ್ಕಾಚಾರ. ಇದರಿಂದ ನಾಲ್ಕು ಗೇಟ್‌ಗಳಿಂದಲೇ ನಿರ್ವಹಣೆ ಮಾಡಲಾಗುತ್ತಿದೆ.

ಇಷ್ಟೆಲ್ಲಾ ಅವಾಂತರದ ನಡುವೆ ಜನ ತೊಂದರೆಪಡುತ್ತಿದ್ದರೂ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ದುಬಾರಿ ಶುಲ್ಕ ವಸೂಲಿ ಮಾಡಲಾಗುತ್ತಿದೆ. ಆದರೆ ವಾಹನ ಸವಾರರಿಗೆ ರಸ್ತೆ ಹೊರತುಪಡಿಸಿ ಯಾವುದೇ ಸೌಲಭ್ಯ ಕಲ್ಪಿಸಿಲ್ಲ. ದೆಹಲಿ ಮತ್ತು ಆಗ್ರಾ ನಡುವಿನ ಯಮುನಾ ಎಕ್ಸ್‌ಪ್ರೆಸ್ ವೇ 2012, ಆಗಸ್ಟ್ 12ಕ್ಕೆ ಲೋಕಾರ್ಪಣೆಗೊಂಡಿತು. 302 ಕಿಲೋಮೀಟರ್ ಉದ್ದದ ಯಮುನಾ ಎಕ್ಸ್‌ಪ್ರೆಸ್ ವೇಯನ್ನು ಕಾಂಕ್ರಿಟ್‌ನಿಂದ ನಿರ್ಮಾಣ ಮಾಡಲಾಗಿದ್ದು, ಆ ದಿನದಲ್ಲೇ ಎಕ್ಸ್‌ಪ್ರೆಸ್ ವೇ ಮಧ್ಯೆ ಪೆಟ್ರೋಲ್ ಬಂಕ್, ರೆಸ್ಟೋರೆಂಟ್, ಶೌಚಾಲಯ, ಗಸ್ತು ವಾಹನ, ಆಂಬುಲೆನ್ಸ್, ವಾಹನಗಳ ರಿಪೇರಿ ಹೀಗೆ ಹಲವು ವ್ಯವಸ್ಥೆ ಕಲ್ಪಿಸಲಾಗಿದೆ. ಆದರೆ ಎರಡು ವರ್ಷದ ಹಿಂದೆ ಲೋಕಾರ್ಪಣೆಗೊಂಡ ಮೈಸೂರು–ಬೆಂಗಳೂರು ಎಕ್ಸ್ ಪ್ರೆಸ್ ವೇನಲ್ಲಿ ಕನಿಷ್ಠ ಸೌಲಭ್ಯಗಳನ್ನು ಈ ತನಕ ಕಲ್ಪಿಸಿಲ್ಲ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಗುರುವಾರ 15 ಮೇ 2025

ವಕ್ಫ್ ತಿದ್ದುಪಡಿ ಕಾಯ್ದೆ: ಸುಪ್ರೀಂಕೋರ್ಟ್‌ನಲ್ಲಿ ಇಂದು ಅರ್ಜಿಗಳ ವಿಚಾರಣೆ

ನವದೆಹಲಿ, ಮೇ 14– ವಕ್ಫ್ ತಿದ್ದುಪಡಿ ಕಾಯ್ದೆ 2025ರ ಸಾಂವಿಧಾನಿಕ ಮಾನ್ಯತೆ ಪ್ರಶ್ನಿಸಿ ಸಲ್ಲಿಕೆಯಾದ ಅರ್ಜಿಗಳ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ಗುರುವಾರ ನಡೆಯಲಿದೆ.



ಸುಪ್ರೀಂಕೋರ್ಟ್‌ನ ನೂತನ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾ. ಅಗಸ್ಟಿನ್ ಜಾರ್ಜ್ ಮಾಸಿ ವಿಚಾರಣೆ ನಡೆಸಲಿದ್ದಾರೆ.

ನಿವೃತ್ತ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರಿದ್ದ ಪೀಠವು ಈ ಮೊದಲು ಇದರ ವಿಚಾರಣೆ ನಡೆಸುತ್ತಿತ್ತು. ಮೇ 13ರಂದು ಅವರು ನಿವೃತ್ತಿಯಾದರು. ಸೂಕ್ತ ಚರ್ಚೆಯೊಂದಿಗೆ ಸಂಸತ್ತು ಮಸೂದೆಯನ್ನು ಅಂಗೀಕರಿಸಿದೆ. ಹೀಗಾಗಿ ಸರ್ಕಾರದ ಅಭಿಪ್ರಾಯ ಕೇಳದೆ ತಡೆನೀಡಲಾಗದು ಎಂದು ಸುಪ್ರೀಂಕೋರ್ಟ್ ಹೇಳಿದ ನಂತರ ಏ. 17ರಂದು ನಡೆದ ವಿಚಾರಣೆ ಸಂದರ್ಭದಲ್ಲಿ ವಕ್ಫ್ ಆಸ್ತಿಯನ್ನು ಡಿನೋಟಿಫೈ ಮಾಡುವುದಿಲ್ಲ ಎಂಬ ಕೇಂದ್ರದ ಭರವಸೆಯನ್ನು ಸುಪ್ರೀಂ ಕೋರ್ಟ್ ದಾಖಲಿಸಿಕೊಂಡಿತು. ಮೇ 5ರವರೆಗೆ ಕೇಂದ್ರ ವಕ್ಫ್ ಸಮಿತಿಗೆ ಸದಸ್ಯರ ನೇಮಕಾತಿ ಮಾಡುವುದಿಲ್ಲ ಎಂದು ಕೇಂದ್ರ ಹೇಳಿತ್ತು.

ಏ. 25ರಂದು ಕೇಂದ್ರ ಅಲ್ಪಸಂಖ್ಯಾತರ ಕಲ್ಯಾಣ ಸಚಿವಾಲಯವು 2025ರ ವಕ್ಫ್ ಖಾತೆ ಕುರಿತು 1,332 ಪುಟಗಳ ಪ್ರಾಥಮಿಕ ಅಫಿಡವಿಟ್ ಅನ್ನು ಸಲ್ಲಿಸಿತು. ಒಂದೊಮ್ಮೆ ಅರ್ಜಿಗಳನ್ನು ಪುರಸ್ಕರಿಸಿ ಕಾಯ್ದೆಗೆ ತಡೆ ನೀಡಿದ್ದೇ ಆದಲ್ಲಿ, ಸಾಂವಿಧಾನಿಕ ಪ್ರಕ್ರಿಯೆ ಮೂಲಕ ಕೇಂದ್ರ ಸರ್ಕಾರ ಅಂಗೀಕರಿಸಿದ ಕಾಯ್ದೆಯ ಕುರಿತು ನ್ಯಾಯಾಲಯ ಊಹೆಯನ್ನು ಆಧರಿಸಿದೆ ಎಂದರ್ಥ ಎಂದಿತ್ತು. ಜತೆಗೆ 2013ರಿಂದ ಇಲ್ಲಿಯವರೆಗೆ ವಕ್ಫ್ ಆಸ್ತಿಯು ಶೇ 116 ರಷ್ಟು ಹೆಚ್ಚಳವಾಗಿದೆ ಎಂದು ನ್ಯಾಯಾಲಯಕ್ಕೆ ಕೇಂದ್ರ ಮನವರಿಕೆ ಮಾಡಿಕೊಟ್ಟಿತ್ತು. ವಕ್ಫ್ ತಿದ್ದುಪಡಿ ಕಾಯ್ದೆ 2025ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಏ. 5ರಂದು ಅಂಕಿತ ಹಾಕಿದ್ದಾರೆ.

ಎಸ್.ವೇದಾಂತ್ ಉನ್ನತ ಶ್ರೇಣಿಯಲ್ಲಿ ತೇರ್ಗಡೆ

ಮೈಸೂರು, ಮೇ 14(ಪಿಎಂ)– ವಿಶ್ವೇಶ್ವರನಗರದ ಸೆಂಟ್ ಥಾಮಸ್ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿ ಎಸ್.ವೇದಾಂತ್ ಮಂಗಳವಾರ ಪ್ರಕಟವಾದ ಸಿಬಿಎಸ್‌ಇ 10ನೇ ತರಗತಿಯ ಪರೀಕ್ಷೆಯಲ್ಲಿ ಶೇ.92.6ರಷ್ಟು ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.



ಇಂಗ್ಲಿಷ್‌ನಲ್ಲಿ 91, ಹಿಂದಿ ಕೋರ್ಸ್ ಬಿನಲ್ಲಿ 92, ಗಣಿತದಲ್ಲಿ 86, ವಿಜ್ಞಾನದಲ್ಲಿ 97, ಸಮಾಜ ವಿಜ್ಞಾನದಲ್ಲಿ 97 ಹಾಗೂ ಇನ್ಫರ್ಮೇಷನ್ ಟೆಕ್ನಾಲಜಿಯಲ್ಲಿ 90 ಅಂಕಗಳನ್ನು ಪಡೆದಿದ್ದು, ಇವರು ಮೈಸೂರಿನ ರಾಮಾನುಜ ರಸ್ತೆಯ 14ನೇ ಕ್ರಾಸ್ ನಿವಾಸಿ, ಹಿರಿಯ ಪತ್ರಕರ್ತ ಬಿ.ಶ್ರೀಕಂಠಸ್ವಾಮಿ ಮತ್ತು ಶಿವಮ್ಮ (ಶಿಲ್ಪ) ದಂಪತಿ ಪುತ್ರ.

ದೇಶದ ಸೈನಿಕರೊಂದಿಗೆ ದೇಶವಾಸಿಗಳು ಧ್ಯೇಯವಾಕ್ಯದಡಿ

ಮೇ 17, ಬೀಡಿ ಕಾರ್ಮಿಕರ ಆಸ್ಪತ್ರೆಯಲ್ಲಿ ಬೃಹತ್ ರಕ್ತದಾನ ಶಿಬಿರ

- ಈ ಕಾರ್ಯಕ್ರಮದಲ್ಲಿ ಯಾವ ರಾಜಕೀಯ ಹಿತಾಸಕ್ತಿ ಇಲ್ಲ
- ಒಂದು ಸಾವಿರ ಯೂನಿಟ್ ರಕ್ತ ಸಂಗ್ರಹ
- ಶಾಸಕ ತನ್ವೀರ್ ಸೇಠ್ ಮಾಹಿತಿ



ಬೃಹತ್ ರಕ್ತದಾನ ಶಿಬಿರ ಪೋಸ್ಟರ್ ಅನ್ನು ಶಾಸಕ ತನ್ವೀರ್ ಸೇಠ್ ಬಿಡುಗಡೆ ಮಾಡಿದರು. ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಸಹಕಾರ ಮಹಾ ಮಂಡಲ ಅಧ್ಯಕ್ಷ ಚಂದ್ರಶೇಖರ್ ಮತ್ತಿತರರಿದ್ದರು.

ಮೈಸೂರು, ಮೇ 14(ಎಂಕೆ)– ನರಸಿಂಹರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಲ್ಯಾಣಗಿರಿ, ಅಜೀಜ್ ಸೇಠ್ ಜೋಡಿ ರಸ್ತೆಯಲ್ಲಿರುವ ಕೇಂದ್ರ ಬೀಡಿ ಕಾರ್ಮಿಕರ ಆಸ್ಪತ್ರೆಯಲ್ಲಿ ಮೇ 17 ರಂದು ಜಿಲ್ಲಾಡಳಿತ, ಆರೋಗ್ಯ ಇಲಾಖೆ, ಮೈಸೂರು ಮಹಾನಗರ ಪಾಲಿಕೆ, ಜೀವಧಾರ ಬ್ಲಡ್ ಬ್ಯಾಂಕ್ ಹಾಗೂ ಇತರೆ ಸಂಘ–ಸಂಸ್ಥೆಗಳ ಸಹಯೋಗದಲ್ಲಿ 'ದೇಶದ ಸೈನಿಕರೊಂದಿಗೆ ದೇಶವಾಸಿಗಳು' ಧ್ಯೇಯವಾಕ್ಯದೊಂದಿಗೆ ಬೃಹತ್ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಶಾಸಕ ತನ್ವೀರ್ ಸೇಠ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿ ನಡೆಸಿದ ಅವರು, ಜನ್ಮ ಕೊಟ್ಟ ತಾಯಿ, ಬಾಳು ಕೊಟ್ಟ ತಂದೆ, ಅನ್ನ ಕೊಟ್ಟ ರೈತ ಹಾಗೂ ಸದಾ ಕಾಲ ನಮ್ಮನ್ನು ರಕ್ಷಿಸೋ ಆ ಸೈನಿಕರನ್ನು ಎಂದೂ ಮರೆಯಬಾರದು. ಹಾಗಾಗಿ ಸೈನಿಕರ ತ್ಯಾಗದ ಸ್ಮರಣೆಗಾಗಿ ಬೃಹತ್ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಿಗ್ಗೆ 8 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ರಕ್ತದಾನ ಶಿಬಿರ ನಡೆಯಲಿದ್ದು, ಸ್ಥಳೀಯ ನಿವಾಸಿಗಳು, ರಕ್ತದಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ಜಮ್ಮು–ಕಾಶ್ಮೀರದ ಪಹಲ್ಗಾಮ್ ಬಳಿ ಉಗ್ರರು ನಡೆಸಿದ ದಾಳಿಯಲ್ಲಿ 26 ಮಂದಿ ಪ್ರವಾಸಿಗರು ತಮ್ಮ ಪ್ರಾಣ ಕಳೆದುಕೊಂಡಿದ್ದರು. ಅವರ ಕುಟುಂಬ ಸಾಂತ್ವನ ಹೇಳುವ ಜೊತೆಗೆ ಭಾರತ ಸರ್ಕಾರ ನಮ್ಮೆಲ್ಲರ ಹಾಗೂ ಗಡಿ ರಕ್ಷಣೆ ಸಂಬಂಧ ತೆಗೆದುಕೊಂಡ ತೀರ್ಮಾನಕ್ಕೂ ಬೆಂಬಲ ನೀಡಿದ್ದೇವೆ. ನಮ್ಮೆಲ್ಲರ ರಕ್ಷಣೆಗಾಗಿ ತಮ್ಮ ಪ್ರಾಣವನ್ನೇ ನೀಡುತ್ತಿರುವ ಸೈನಿಕರಲ್ಲಿ ಆತ್ಮವಿಶ್ವಾಸ ಹಾಗೂ ಅವರಿಗೆ ಬಲ ತುಂಬುವ ನಿಟ್ಟಿನಲ್ಲಿ ರಕ್ತದಾನ ಶಿಬಿರ ಆಯೋಜಿಸಿದ್ದೇವೆ ಎಂದು ತಿಳಿಸಿದರು. ವಿವಿಧ ಸಂಘ–ಸಂಸ್ಥೆಗಳು, ಖಾಸಗಿ ಆಸ್ಪತ್ರೆಗಳ ಸಹಭಾಗಿತ್ವದಲ್ಲಿ ಹಮ್ಮಿಕೊಂಡಿರುವ ಬೃಹತ್ ರಕ್ತದಾನ ಶಿಬಿರದಲ್ಲಿ 18 ರಿಂದ 48 ವರ್ಷ ವಯಸ್ಸಿನೊಳಗಿನವರು ಭಾಗವಹಿಸಬಹುದು. ಯುದ್ಧದ ನಂತರ ರಾಷ್ಟ್ರವ್ಯಾಪ್ತಿಯಲ್ಲಿ ನಡೆಯುತ್ತಿರುವ ಬೃಹತ್ ರಕ್ತದಾನ ಶಿಬಿರ ಇದಾಗಿದ್ದು, 1 ಸಾವಿರ ಯೂನಿಟ್(1 ಯೂನಿಟ್ 450 ಎಂಎಲ್ ಇರಲಿದೆ) ರಕ್ತ ಸಂಗ್ರಹ ಮಾಡುವ ಗುರಿ ಇದ್ದು, ಒಂದೂವರೆ ಸಾವಿರ ಯೂನಿಟ್ ರಕ್ತ ಸಂಗ್ರಹಣೆಗೆ ಸಿದ್ಧತೆ ಮಾಡಿಕೊಂಡಿದ್ದೇವೆ. ಪುರುಷ ಮತ್ತು ಮಹಿಳೆಯರಿಗಾಗಿ ತುರ್ತು ಚಿಕಿತ್ಸಾ ವಾರ್ಡ್‌ಗಳನ್ನು ತೆರೆಯಲಾಗಿದ್ದು, 50 ವೈದ್ಯಕೀಯ ಸಿಬ್ಬಂದಿಯನ್ನು ನಿಯೋಜಿಸಲಾಗುವುದು. ರಕ್ತದಾನಿಗಳು ಯಾವುದೇ ಆತಂಕವಿಲ್ಲದೆ ರಕ್ತದಾನ ಮಾಡಬಹುದಾಗಿದೆ ಎಂದರು.

ಯಾವ ರಾಜಕೀಯ ಹಿತಾಸಕ್ತಿ ಇಲ್ಲ: ಬೃಹತ್ ರಕ್ತದಾನ ಶಿಬಿರದಲ್ಲಿ ಯಾವುದೇ ರಾಜಕೀಯ ಹಿತಾಸಕ್ತಿ ಇಲ್ಲ. ಯಾರು ಬೇಕಾದರೂ, ಯಾವ ಪಕ್ಷದವರು ಬೇಕಾದರೂ ಬಂದು ರಕ್ತದಾನ ಮಾಡಬಹುದು. ಎಲ್ಲರ ರಕ್ತವೂ ಒಂದೇ. ಪಕ್ಷಾತೀತ, ಧರ್ಮಾತೀತ ಕಾರ್ಯಕ್ರಮ ಇದಾಗಿದ್ದು, ಕಾಲೇಜು ವಿದ್ಯಾರ್ಥಿಗಳು, ಯುವಕ–ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆಂಬ ನಿರೀಕ್ಷೆ ಇದೆ. ಹಾಗೆಯೇ ಪೊಲೀಸ್ ಸಿಬ್ಬಂದಿ, ಜೈಭೀಮ್ ಸೇರಿದಂತೆ ವಿವಿಧ ಸಂಘಟನೆ ಕಾರ್ಯಕರ್ತರು ರಕ್ತದಾನ ಮಾಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಆಸ್ಪತ್ರೆ ಕಾಯಕಲ್ಪಕ್ಕೆ ಪ್ರಯತ್ನ: ದೇಶದಲ್ಲಿಯೇ ಕಾರ್ಮಿಕರಿಗಾಗಿ ಇರುವ ಏಕೈಕ ಆಸ್ಪತ್ರೆ ಕೇಂದ್ರ ಬೀಡಿ ಕಾರ್ಮಿಕರ ಆಸ್ಪತ್ರೆಯಾಗಿದೆ. ನಾನು ಕಾರ್ಮಿಕ ಸಚಿವನಾಗಿದ್ದಾಗ ಆಸ್ಪತ್ರೆಗೆ ಕಾಯಕಲ್ಪ ನೀಡುವ ಪ್ರಯತ್ನ ಮಾಡಲಾಗಿತ್ತು ನಂತರ ಕೊರೊನಾ ಸಂದರ್ಭದಲ್ಲಿ ಆಕ್ಸಿಜನ್, ಹಾಸಿಗೆಗಳನ್ನು ಒದಗಿಸಿ ಚಿಕಿತ್ಸೆ ನೀಡಲಾಗಿತ್ತು. ಮುಂದಿನ ದಿನಗಳಲ್ಲಿ ಆಸ್ಪತ್ರೆಯ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ತಿಳಿಸಿದರು.


ವಿಪಕ್ಷಗಳೊಂದಿಗೆ ಚರ್ಚಿಸಿ ನಿರ್ಧರಿಸಬೇಕಿತ್ತು!: ಅಮೆರಿಕ ಅಧ್ಯಕ್ಷರ ಮಧ್ಯಸ್ಥಿಕೆಯಿಂದ ಕದನ ವಿರಾಮ ಘೋಷಣೆ ಮಾಡಿರುವ ಕುರಿತು ಪ್ರತಿಕ್ರಿಯಿಸಿದ ಶಾಸಕರು, ಪಾಕ್ ವಿರುದ್ಧ ನಡೆಯುತ್ತಿದ್ದ ಆಪರೇಷನ್ ಸಿಂಧೂರ ಕಾರ್ಯಾಚರಣೆಯನ್ನು ನಿಲ್ಲಿಸಿ, ಯುದ್ಧ ವಿರಾಮ ಘೋಷಣೆ ಮಾಡುವ ಮುನ್ನ ವಿಪಕ್ಷಗಳೊಂದಿಗೆ ಕೇಂದ್ರ ಸರ್ಕಾರ ಚರ್ಚಿಸಬೇಕಿತ್ತು. ಯುದ್ಧಕ್ಕೆ ದೇಶದ ಎಲ್ಲಾ ಪಕ್ಷಗಳು ಬೆಂಬಲ ನೀಡಿದ್ದರಿಂದ ಯುದ್ಧ ನಿಲ್ಲಿಸುವಾಗಲೂ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಬೇಕಿತ್ತು. ಯುದ್ಧದ ಸ್ಪಷ್ಟ ಮಾಹಿತಿಯನ್ನು ಸರಕಾರ ನೀಡಿಲ್ಲ. ದಾಳಿ ಪರಿಣಾಮ ಏನಾಯಿತು ಅದರ ಅಗತ್ಯತೆ, ಆದ ಯಶಸ್ಸು ಏನು, ಎಷ್ಟು ಮಂದಿ ಸತ್ತರು, ಎಷ್ಟು ವಿಮಾನ ನಾಶವಾಯಿತು ಎಂಬುದರ ಸ್ಪಷ್ಟ ಮಾಹಿತಿಯೇ ಇಲ್ಲವಾಗಿದೆ. ಒಳ್ಳೆಯದಾಗಿರುವುದಕ್ಕೆ ನಮಗೆ ಸಂತೋಷವಿದೆ. ಅದಕ್ಕೆ ನಮ್ಮ ಬೆಂಬಲಿವೆ. ಒಂದು ವೇಳೆ ತಪ್ಪಾಗಿದ್ದಲ್ಲಿ ಕೇಂದ್ರವೇ ಅದರ ಹೊಣೆ ಹೊರಬೇಕು ಎಂದು ಬೇಸರ ಹೊರಹಾಕಿದರು. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಸಹಕಾರ ಮಹಾಮಂಡಲ ಅಧ್ಯಕ್ಷ ಚಂದ್ರಶೇಖರ್, ಶಿಬಿರದ ನೋಡಲ್ ಅಧಿಕಾರಿ ಡಾ.ಜಯಂತ್, ಕಾಂಗ್ರೆಸ್ ಮುಖಂಡರಾದ ಸೈಯದ್ ಇಕ್ಬಾಲ್, ಮಂಜುನಾಥ್ ಮತ್ತಿತರರಿದ್ದರು.

ನಿಯಮಾನುಸಾರ ಹೈದರಾಲಿ ರಸ್ತೆಯಲ್ಲಿ ಮರಗಳ ತೆರವು...

ಹೈದರಾಲಿ ರಸ್ತೆಯಲ್ಲಿ ಸರ್ಕಾರದ ನಿಯಮಾವಳಿ, ನ್ಯಾಯಾಲಯದ ತೀರ್ಪಿನಂತೆ ರಸ್ತೆ ಅಭಿವೃದ್ಧಿ ಉದ್ದೇಶದಿಂದ ಮರಗಳನ್ನು ತೆರವುಗೊಳಿಸಲಾಗಿದೆ ಎಂದು ಶಾಸಕ ತನ್ವೀರ್ ಸೇಠ್ ತಿಳಿಸಿದರು. ಹೈದರಾಲಿ ರಸ್ತೆಯಲ್ಲಿ 40 ಮರಗಳ ಕಡಿದಿರುವ ಕುರಿತು ಪ್ರತಿಕ್ರಿಯಿಸಿದ ಅವರು, ನ್ಯಾಯಾಲಯದ ಮಾದರಿ ತೀರ್ಪಿನಂತೆ ಈ ರಸ್ತೆ ಕಾಮಗಾರಿಗೆ ಮರಗಳನ್ನು ತೆರವುಗೊಳಿಸಲಾಗಿದೆ. ಅದಕ್ಕೆ ಸಂಬಂಧಿಸಿದಂತೆ ಎಲ್ಲರ ಅಭಿಪ್ರಾಯವನ್ನು ಸಂಗ್ರಹಿಸಿ ನಿರ್ಧಾರ ಕೈಗೊಳ್ಳಲಾಗಿದೆ. ಇದಕ್ಕೆ ಪರ್ಯಾಯವಾಗಿ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಸಿಂಧೂ ಜಲ ಒಪ್ಪಂದ ಪರಿಶೀಲಿಸುವಂತೆ ಭಾರತಕ್ಕೆ ಪಾಕಿಸ್ತಾನ ದುಂಬಾಲು

ನವದೆಹಲಿ, ಮೇ 14– ಭಾರತದ ಒಂದೊಂದೇ ಏಟಿಗೆ ಬೆದರಿ ತೆಪ್ಪಗಾದ ಪಾಕಿಸ್ತಾನ, ಇದೀಗ ಸಿಂಧೂ ನದಿ ಜಲ ಒಪ್ಪಂದ ಸ್ಥಗಿತಗೊಳಿಸುವ ನಿರ್ಧಾರವನ್ನು ಪರಿಶೀಲಿಸುವಂತೆ ದುಂಬಾಲು ಬಿದ್ದಿದೆ.



ಈ ಸಂಬಂಧ ಪಾಕಿಸ್ತಾನದ ಜಲಸಂಪನ್ಮೂಲ ಸಚಿವಾಲಯದ ಕಾರ್ಯದರ್ಶಿ ಸೈಯದ್ ಅಲಿ ಮುರ್ತಾಜಾ, ಭಾರತದ ಜಲ ಶಕ್ತಿ ಸಚಿವಾಲಯದ ಕಾರ್ಯದರ್ಶಿಗೆ ಪತ್ರ ಬರೆದಿದ್ದು, ಭಾರತ ತನ್ನ ನಿರ್ಧಾರವನ್ನು ಮರು ಪರಿಶೀಲಿಸುವಂತೆ ಮನವಿ ಮಾಡಿದೆ. ಈ ವಿಷಯವನ್ನು ಚರ್ಚಿಸಲು ಪಾಕಿಸ್ತಾನ ಸಿದ್ಧವಾಗಿದೆ ಎಂದು ಹೇಳಿರುವುದಾಗಿ ಮೂಲಗಳು ತಿಳಿಸಿವೆ.

ಏಪ್ರಿಲ್ 22 ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಮೇಲೆ ಪಾಕ್ ಪ್ರಾಯೋಜಿತ ಉಗ್ರರು ದಾಳಿ ನಡೆಸಿದ ಬಳಿಕ ಏಪ್ರಿಲ್ 23 ರಂದು ಭದ್ರತಾ ಸಭೆಯ ಕ್ಯಾಬಿನೆಟ್ ಸಮಿತಿ ಸಭೆಯಲ್ಲಿ 1960ರಲ್ಲಿ ನಡೆದಿದ್ದ ಸಿಂಧೂ ಜಲ ಒಪ್ಪಂದವನ್ನು ಅಮಾನತುಗೊಳಿಸುವ ಮಹತ್ವದ ನಿರ್ಧಾರವನ್ನು ಕೈಗೊಳ್ಳಲಾಗಿತ್ತು.

ಸಿಂಧೂ ನದಿ ಒಪ್ಪಂದದನ್ವಯ ಭಾರತಕ್ಕೆ ಪೂರ್ವ ನದಿಗಳಾದ ಸಟ್ಲೆಜ್, ಬಿಯಾಸ್ ಮತ್ತು ರಾವಿ ನದಿಗಳ ನೀರನ್ನು ಬಳಸುವ ಹಕ್ಕಿದೆ. ಅದೇ ರೀತಿ ಪಾಕಿಸ್ತಾನಕ್ಕೆ ಪಶ್ಚಿಮ ನದಿಗಳಾದ ಸಿಂಧೂ, ಝೀಲಂ ಮತ್ತು ಚೆನಾಬ್ ನದಿಗಳ ನೀರನ್ನು ಬಳಸುವ ಹಕ್ಕಿದೆ.

ಆದರೆ ಈಗ ಭಾರತ ತನಗೆ ಇಷ್ಟ ಬಂದ ಸಮಯದಲ್ಲಿ ನೀರನ್ನು ಜಲಾಶಯದಿಂದ ಹರಿಸುತ್ತಿದೆ. ರಕ್ತ ಮತ್ತು ನೀರು ಜೊತೆಯಾಗಿ ಹರಿಯಲು ಸಾಧ್ಯವಿಲ್ಲ. ಭಯೋತ್ಪಾದಕತೆ ಮತ್ತು ಮಾತುಕತೆ ಎರಡು ಜೊತೆಯಾಗಿ ಸಾಗುವುದಿಲ್ಲ. ಉಗ್ರರ ವಿರುದ್ಧ ಪಾಕ್ ಕಠಿಣ ಕ್ರಮ ಕೈಗೊಳ್ಳುವವರೆಗೂ ಈ ಒಪ್ಪಂದ ಅಮಾನತಿನಲ್ಲಿ ಇರಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಈ ಹಿಂದೆ ಹೇಳಿಕೆ ನೀಡಿದ್ದರು. ಹೀಗಾಗಿ ಮುಂದಾಗುವ ಅನಾಹುತಗಳನ್ನು ಅಂದಾಜಿಸಿರುವ ಪಾಕಿಸ್ತಾನ ಸಿಂಧೂ ನದಿ ಜಲ ಒಪ್ಪಂದವನ್ನು ಪುನರ್ ಪರಿಶೀಲಿಸುವಂತೆ ಭಾರತಕ್ಕೆ ಮನವಿ ಮಾಡಿದೆ ಎನ್ನಲಾಗಿದೆ.

ಕರ್ನಲ್ ಸೋಫಿಯಾ ಖುರೇಷಿ ಬಗ್ಗೆ ಸುಳ್ಳು ಸುದ್ದಿ ಹರಡಿದ ಕಿಡಿಗೇಡಿ

ಬೆಳಗಾವಿ, ಮೇ 14– ಬೆಳಗಾವಿಯ ಸೋಫಿಯಾ ಪತಿ ಮನೆ ಮೇಲೆ ಆರ್‌ಎಸ್‌ಎಸ್ ಅಟ್ಯಾಕ್ ಮಾಡಿದೆ ಎಂದು ಸೋಶಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡಲಾಗಿದೆ ಆದರೆ ಇದು ಸಂಪೂರ್ಣ ಸುಳ್ಳು ಸುದ್ದಿ ಎಂದು ಎಸ್ಪಿ ಭೀಮಾಶಂಕರ್ ಗುಳೇದ್ ಸ್ಪಷ್ಟನೆ ನೀಡಿದ್ದಾರೆ. ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲೂಕಿನ ಕೊಣ್ಣೂರು ಗ್ರಾಮದಲ್ಲಿ ಕರ್ನಲ್ ಸೋಫಿಯಾ ಖುರೇಷಿ ಅವರ ಪತಿ ತಾಜುದ್ದೀನ್ ಮನೆ ಇದೆ. ಅನಿಸ್ ಉದ್ದೀನ್ ಎಂಬಾತನಿಂದ ಎಕ್ಸ್‌ನಲ್ಲಿ ಸೋಫಿಯಾ ಪತಿ ಮನೆ ಮೇಲೆ ಆರ್‌ಎಸ್‌ಎಸ್ ಅಟ್ಯಾಕ್ ಮಾಡಿದೆ ಎಂದು ಮನೆ ಧ್ವಂಸದ ಯಾವುದೋ ಹಳೇ ಫೋಟೋವನ್ನು ಪೋಸ್ಟ್ ಮಾಡಿದ್ದಾನೆ.

ಗೋಕಾಕ ಸಿಪಿಐ ಸುರೇಶ್ ಆರ್.ಬಿ. ಅವರು ಕೊಣ್ಣೂರ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬಳಿಕ ಸೋಫಿಯಾ ಪತಿ ಕರ್ನಲ್ ತಾಜುದ್ದೀನ್ ಬಾಗೇವಾಡಿ ಅವರ ಮನೆ ಮೇಲೆ ಯಾವುದೇ ಅಟ್ಯಾಕ್ ಆಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಆದರೂ, ಸುರಕ್ಷತಾ ಕ್ರಮವಾಗಿ ಸೋಫಿಯಾ ಅವರ ಮನೆಗೆ ಗೋಕಾಕ ಪೊಲೀಸರು ರಕ್ಷಣೆ ಒದಗಿಸಿದ್ದಾರೆ.

ಸಾರ್ವಜನಿಕರು ಅನಗತ್ಯವಾಗಿ ಕುಟುಂಬವನ್ನು ಭೇಟಿಯಾಗದಂತೆ ಪೊಲೀಸರು ಸೂಚನೆ ನೀಡಿದ್ದಾರೆ. ಇತ್ತ ಪೊಲೀಸರ ಗಮನಕ್ಕೆ ಬರುತ್ತಿದ್ದಂತೆ ಅನೀಸ್ ಉದ್ದೀನ್ ಸುಳ್ಳು ಸುದ್ದಿ ಪೋಸ್ಟ್ ಡಿಲೀಟ್ ಮಾಡಿದ್ದಾನೆ. ಸದ್ಯ ಪೊಲೀಸರು ಅನೀಸ್ ಉದ್ದೀನ್ ಪತ್ತೆಗೆ ಬಲೆ ಬೀಸಿದ್ದಾರೆ. ಜೊತೆಗೆ ಸುಳ್ಳು ಸುದ್ದಿ ಪೋಸ್ಟ್ ಕೂಡ ಡಿಲೀಟ್ ಮಾಡಲಾಗಿದೆ. ಸುಳ್ಳು ಸುದ್ದಿ ನಂಬದಂತೆ ಎಸ್‌ಪಿ ಭೀಮಾಶಂಕರ್ ಗುಳೇದ್ ಮನವಿ ಮಾಡಿದ್ದಾರೆ.

ಕರ್ನಲ್ ಸೋಫಿಯಾ ವಿರುದ್ಧ ವಿವಾದಾತ್ಮಕ ಹೇಳಿಕೆ

ಮಧ್ಯಪ್ರದೇಶ ಸಚಿವನ ವಿರುದ್ಧ ಎಫ್‌ಐಆರ್‌ಗೆ ಹೈಕೋರ್ಟ್ ಆದೇಶ

ಜಬಲ್ಪುರ, ಮೇ 14– ಕರ್ನಲ್ ಸೋಫಿಯಾ ಖುರೇಷಿ ಅವರನ್ನು ಗುರಿಯಾಗಿಸಿಕೊಂಡು ವಿವಾದಾತ್ಮಕ ಹೇಳಿಕೆ ನೀಡಿದ್ದಕ್ಕಾಗಿ ಮಧ್ಯಪ್ರದೇಶದ ಸಚಿವ ವಿಜಯ್ ಶಾ ವಿರುದ್ಧ ಎಫ್‌ಐಆರ್ ದಾಖಲಿಸಲು ಅಲ್ಲಿನ ಹೈಕೋರ್ಟ್ ಆದೇಶಿಸಿದೆ.



ವಿಜಯ್ ಶಾ

ಪಹಲ್ಗಾಮ್ ಭಯೋತ್ಪಾದಕ ದಾಳಿ ಬಳಿಕ ಉಗ್ರರ ಸಂಹಾರಕ್ಕಾಗಿ ಭಾರತ ಆರಂಭಿಸಿದ್ದ ಆಪರೇಷನ್ ಸಿಂಧೂರದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ವಾಯು ಸೇನೆಯ ಕರ್ನಲ್ ಖುರೇಷಿ ನಿಯಮಿತವಾಗಿ ಪತ್ರಿಕಾಗೋಷ್ಠಿಗಳನ್ನು ನಡೆಸಿ, ಕಾರ್ಯಾಚರಣೆಯ ಮಾಹಿತಿಯನ್ನು ಹಂಚಿಕೊಳ್ಳುತ್ತಿದ್ದರು. ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಶ್ರಿ, ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಸಹ ಮಾಹಿತಿ ಹಂಚಿಕೊಳ್ಳುತ್ತಿದ್ದರು.

'ನಮ್ಮ ಹೆಣ್ಣುಮಕ್ಕಳ ಸಿಂಧೂರವನ್ನು ಅಳಿಸಿದರೋ ಅವರಿಗೆ ತಕ್ಕ ಪಾಠ ಕಲಿಸಲು ಅವರ ಸಹೋದರಿಯನ್ನೇ ಕಳುಹಿಸಿದ್ದೆವು' ಎಂದು ಸೋಫಿಯಾ ಖುರೇಷಿ ಕುರಿತು ಮಧ್ಯಪ್ರದೇಶದ ಸಚಿವ ಬುಡಕಟ್ಟು ವ್ಯವಹಾರಗಳ ಸಚಿವ ಮತ್ತು ಬಿಜೆಪಿ ನಾಯಕ ವಿಜಯ್ ಶಾ ಅವರು ಸಾರ್ವಜನಿಕ ಕಾರ್ಯಕ್ರಮದಲ್ಲಿ ನೀಡಿರುವ ಹೇಳಿಕೆ ವಿವಾದಕ್ಕೆ ಎಡೆಮಾಡಿತ್ತು.

ವಿವಾದಾತ್ಮಕ ಹೇಳಿಕೆ ಕುರಿತಂತೆ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿರುವ ನ್ಯಾಯಮೂರ್ತಿಗಳಾದ ಅತುಲ್ ಶ್ರೀಧರನ್ ಮತ್ತು ಅನುರಾಧಾ ಶುಕ್ಲಾ ಅವರನ್ನು ಒಳಗೊಂಡ ಮಧ್ಯಪ್ರದೇಶದ ಹೈಕೋರ್ಟ್‌ನ ವಿಭಾಗೀಯ ಪೀಠ, ಸಚಿವರ ವಿರುದ್ಧ ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸುವಂತೆ ಪೊಲೀಸರಿಗೆ ಆದೇಶಿಸಿದೆ. ಎಫ್‌ಐಆರ್ ನೋಂದಣಿ ಬಗ್ಗೆ ನ್ಯಾಯಾಲಯಕ್ಕೆ ತಿಳಿಸಬೇಕೆಂದು ವಿಭಾಗೀಯ ಪೀಠ ಹೇಳಿದೆ. ಅರ್ಜಿಯ ಮುಂದಿನ ವಿಚಾರಣೆಯನ್ನು ಗುರುವಾರ ಬೆಳಿಗ್ಗೆ 10.30ಕ್ಕೆ ನಿಗದಿಪಡಿಸಲಾಗಿದೆ. ವಿವರವಾದ ಆದೇಶಕ್ಕಾಗಿ ಕಾಯಲಾಗುತ್ತಿದೆ.



ಸೋಫಿಯಾ ಖುರೇಷಿ

ಶಾ ಅವರ ಹೇಳಿಕೆಗೆ ವ್ಯಾಪಕ ಖಂಡನೆ ವ್ಯಕ್ತವಾಗಿದ್ದು, ಅವರನ್ನು ಸಂಪುಟದಿಂದ ತಕ್ಷಣ ವಜಾಗೊಳಿಸಬೇಕೆಂದು ಕಾಂಗ್ರೆಸ್ ಒತ್ತಾಯಿಸಿದೆ. ತೀವ್ರ ಟೀಕೆಗೆ ಗುರಿಯಾದ ಶಾ, ತಮ್ಮ ಹೇಳಿಕೆಯಿಂದ ಯಾರಿಗಾದರೂ ನೋವಾಗಿದ್ದರೆ, ಹತ್ತು ಬಾರಿ ಕ್ಷಮೆಯಾಚಿಸಲು ಸಿದ್ಧರಿರುವುದಾಗಿ ಹೇಳಿದ್ದಾರೆ. ಕರ್ನಲ್ ಖುರೇಷಿ ಅವರನ್ನು ತಮ್ಮ ಸಹೋದರಿಗಿಂತ ಹೆಚ್ಚಾಗಿ ಗೌರವಿಸುವುದಾಗಿ ಹೇಳಿದ್ದಾರೆ.

ವಿಧಾನಸಭಾ ಸ್ಪೀಕರ್‌ಗಳ ರಾಷ್ಟ್ರೀಯ ಸಮಿತಿಗೆ ಯು.ಟಿ. ಖಾದರ್ ನೇಮಕ

ಮಂಗಳೂರು, ಮೇ 14– ಸಂವಿಧಾನದ ಹತ್ತನೇ ಅನುಸೂಚಿಯಡಿ ಸಭಾಧ್ಯಕ್ಷರ ಅಧಿಕಾರ ಮತ್ತು ನಿಯಮಗಳನ್ನು ಪರಿಶೀಲಿಸುವ ರಾಷ್ಟ್ರೀಯ ಸಮಿತಿಗೆ ಕರ್ನಾಟಕ ವಿಧಾನಸಭೆಯ ಸ್ಪೀಕರ್ ಯು.ಟಿ. ಖಾದರ್ ಅವರನ್ನು ನೇಮಕ ಮಾಡಲಾಗಿದೆ.



ದೇಶಾದ್ಯಂತ ಕೇವಲ ನಾಲ್ಕು ವಿಧಾನಸಭಾ ಸ್ಪೀಕರ್‌ಗಳನ್ನು ಒಳಗೊಂಡ ಸಮಿತಿಗೆ ಯು.ಟಿ.ಖಾದರ್ ಅವರನ್ನು ನೇಮಕ ಮಾಡಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಆದೇಶ ಹೊರಡಿಸಿದ್ದಾರೆ.

ಈ ನೇಮಕ ಮಹತ್ವದ್ದು ಎಂದು ಪರಿಗಣಿಸಲಾಗಿದೆ. ಮಹಾರಾಷ್ಟ್ರದ ಸ್ಪೀಕರ್ ರಾಹುಲ್ ನಾರ್ವೇಕರ್ ಸಮಿತಿಯ ಅಧ್ಯಕ್ಷರಾಗಿದ್ದು, ಒಡಿಶಾ ಸ್ಪೀಕರ್ ಸುರಮ ಪಾದಿ, ಕರ್ನಾಟಕ ಸ್ಪೀಕರ್ ಯು.ಟಿ. ಖಾದರ್, ನಾಗಲ್ಯಾಂಡ್ ಸ್ಪೀಕರ್ ಷರಿಂಗೈನ್ ಲಾಂಗ್ ಕುಮೆರ್ ಸಮಿತಿಯ ಸದಸ್ಯರಾಗಿದ್ದಾರೆ. ರಾಜ್ಯ ವಿಧಾನಸಭೆಗಳಲ್ಲಿ ಸ್ಪೀಕರ್ ಅವರ ಅಧಿಕಾರ, ಜವಾಬ್ದಾರಿಗಳು ಮತ್ತು ಕಾರ್ಯವಿಧಾನದ ನಿಯಮಗಳನ್ನು ರಾಷ್ಟ್ರೀಯ ಸಮಿತಿಗೆ ಪರಿಶೀಲಿಸಲಿದ್ದು, ನಾಲ್ಕು ಬಾರಿ ಶಾಸಕರಾಗಿರುವ ಖಾದರ್ ಅವರು ಈ ರಾಷ್ಟ್ರೀಯ ಸಮಿತಿಗೆ ನಾಮನಿರ್ದೇಶನಗೊಂಡ ಕರ್ನಾಟಕದ ಮೊದಲ ಸ್ಪೀಕರ್ ಆಗಿದ್ದಾರೆ.

ನಾಪತ್ತೆಯಾಗಿದ್ದ ವಿಕಲಚೇತನ ಬಾಲಕಿ ಶವ ಪತ್ತೆ; ಅತ್ಯಾಚಾರ ಎಸಗಿ ಕೊಲೆ ಆರೋಪ

ರಾಮನಗರ, ಮೇ 14– ಭಾನುವಾರ ಕಾಣೆಯಾಗಿದ್ದ ರಾಮನಗರ ತಾಲೂಕಿನ ಭದ್ರಾಪುರ ಗ್ರಾಮದ ಹಕ್ಕಿಪಿಕ್ಕಿ ಕಾಲೋನಿಯ 14 ವರ್ಷ ವಯಸ್ಸಿನ ವಿಕಲಚೇತನ ಬಾಲಕಿ ಶವ ಸೋಮವಾರ ಭದ್ರಾಪುರ ಗ್ರಾಮ ಸಮೀಪದ ರೈಲು ಹಳಿ ಪಕ್ಕದಲ್ಲಿ ಪತ್ತೆಯಾಗಿತ್ತು. ಬಾಲಕಿ ಕುಟುಂಬಸ್ಥರು ಆಕೆಯನ್ನು ಅತ್ಯಾಚಾರ ಎಸಗಿ, ಕೊಲೆ ಮಾಡಲಾಗಿದೆ ಎಂದು ಆರೋಪಿಸಿದ್ದಾರೆ.

ಘಟನೆ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಬಿಡದಿ ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದಾರೆ. ಬಾಲಕಿ ಮೇಲೆ ಅತ್ಯಾಚಾರ ಎಸಗಲಾಗಿದೆ ಎಂದು ಕುಟುಂಬಸ್ಥರು ಶಂಕೆ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಪೊಲೀಸರು ಕೆಲ ಸಾಕ್ಷ್ಯಗಳನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಿದ್ದು, ವರದಿಗಾಗಿ ಕಾಯುತ್ತಿದ್ದಾರೆ. ಅಲ್ಲದೆ, ಕೆಲವು ಸಂಶಯಾಸ್ಪದ ವ್ಯಕ್ತಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ. ಘಟನೆಯನ್ನು ಖಂಡಿಸಿ ರಾಮನಗರದಲ್ಲಿ ಭದ್ರಾಪುರ ಗ್ರಾಮಸ್ಥರು ಬೃಹತ್ ಪ್ರತಿಭಟನೆ ನಡೆಸಿ ಆರೋಪಿಗಳನ್ನು ಶೀಘ್ರ ಬಂಧಿಸಿ ಗಲ್ಲಿಗೇರಿಸುವಂತೆ ಒತ್ತಾಯಿಸಿದರು. ಈ ಹಿನ್ನೆಲೆಯಲ್ಲಿ ರಾಜ್ಯ ಎಸ್ಸಿ–ಎಸ್ಟಿ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ.ಜಿ ಗ್ರಾಮಕ್ಕೆ ಹಾಗೂ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಗ್ರಾಮಸ್ಥರಿಗೆ ಧೈರ್ಯ ತುಂಬಿದರು. ಸರ್ಕಾರದಿಂದ ನ್ಯಾಯಕೊಡಿಸುವ ಭರವಸೆ ನೀಡಿದರು.

ಈ ವಿಚಾರ ತಿಳಿದ ಬುಧವಾರ (ಮೇ 14) ಗ್ರಾಮಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಕುಟುಂಬಸ್ಥರಿಗೆ ಪರಿಹಾರದ ಚೆಕ್ ವಿತರಣೆ ಮಾಡಿ, ಸೂಕ್ತ ತನಿಖೆ ನಡೆಸಿ ಬಾಲಕಿಯ ಸಾವಿಗೆ ನ್ಯಾಯ ಒದಗಿಸುವ ಭರವಸೆ ನೀಡಿದರು.

ಇಂದಿನಿಂದ ಡಿಇಎಲ್‌ಇಡಿ ಮುಖ್ಯ ಪರೀಕ್ಷೆಗಳು

ಮೈಸೂರು, ಮೇ 14(ಎಸ್‌ಪಿಎನ್)– ಮೈಸೂರು ನಗರದ ಮಹಾರಾಣಿ ಟಿಟಿಐ ಪ್ರಶಿಕ್ಷಣ ಸಂಸ್ಥೆಯಲ್ಲಿ ಡಿಇಎಲ್‌ಇಡಿ ಮುಖ್ಯ ಪರೀಕ್ಷೆಗಳು ಗುರುವಾರದಿಂದ(ಮೇ 15) ಮೇ 27ರವರೆಗೆ ನಡೆಯಲಿವೆ.

ಈ ಪರೀಕ್ಷೆಗಳನ್ನು ಸುಸೂತ್ರವಾಗಿ ನಡೆಸುವ ಉದ್ದೇಶದಿಂದ ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಹಾಗೂ 200 ಮೀಟರ್ ವ್ಯಾಪ್ತಿ ಪ್ರದೇಶದ ಸುತ್ತಲೂ ಬಿಎನ್‌ಎಸ್‌ಎಸ್–2023 ಸೆಕ್ಷನ್ 163 ರೀತ್ಯಾ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ.

ಈ ಪ್ರದೇಶದಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿಗಳು ಹೊರತುಪಡಿಸಿ ಇತರೆ ಅನಧಿಕೃತ ವ್ಯಕ್ತಿಗಳು ಓಡಾಡಬಾರದು. ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಕಾಪಿಯರ್ (ಜೆರಾಕ್ಸ್)/ಬ್ರೌಸಿಂಗ್ ಸೆಂಟರ್‌ಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಆದೇಶಿಸಿದ್ದಾರೆ.

ಸರಸ್ವತಿಪುರಂ ಪೊಲೀಸ್ ಠಾಣೆಯ ಎಎಸ್‌ಐ ಶೇಷಾದ್ರಿ, ಸಂಚಾರಿ ವಾರ್ಡನ್ ಮಹೇಶ್ವರ್‌ಗೆ ರೋಟರಿ ಪ್ರಶಸ್ತಿ



ಎಎಸ್‌ಐ ವಿ.ಆರ್.ಶೇಷಾದ್ರಿ, ಸಂಚಾರಿ ವಾರ್ಡನ್ ಅ.ಮಹೇಶ್ವರ(ಸ್ವಯಂ ಸೇವಕ) ಅವರಿಗೆ 'ರೋಟರಿ ಮೈಸೂರು ಮಿಡ್‌ಟೌನ್ ವೀನಸ್ ಶ್ರಮಜೀವಿ' ಪ್ರಶಸ್ತಿಯನ್ನು ಮೈಸೂರು ಸಂಘ–ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ಪ್ರದಾನ ಮಾಡಿದರು.

ಮೈಸೂರು, ಮೇ 14(ಎಸ್‌ಪಿಎನ್)– ಮೈಸೂರು ಜೆಎಲ್‌ಬಿ ರಸ್ತೆಯ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ರೋಟರಿ ಮೈಸೂರು ಮಿಡ್‌ಟೌನ್ ವತಿಯಿಂದ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಸರಸ್ವತಿಪುರಂ ಪೊಲೀಸ್ ಠಾಣೆಯ ಜನ ಸ್ನೇಹಿ ಪೊಲೀಸ್ ಎಂದೇ ಖ್ಯಾತಿಯಾಗಿರುವ ಎಎಸ್‌ಐ ವಿ.ಆರ್. ಶೇಷಾದ್ರಿ, ಸಂಚಾರಿ ವಾರ್ಡನ್ ಅ.ಮಹೇಶ್ವರ (ಸ್ವಯಂ ಸೇವಕ) ಅವರಿಗೆ ಶ್ರಮಿಕರಿಗೆ 'ರೋಟರಿ ಮೈಸೂರು ಮಿಡ್‌ಟೌನ್ ವೀನಸ್ ಶ್ರಮಜೀವಿ' ಪ್ರಶಸ್ತಿಯನ್ನು ಮೈಸೂರು ಸಂಘ–ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ಪ್ರದಾನ ಮಾಡಿದರು.

ನಂತರ ಮಾತನಾಡಿದ ಅವರು, ಸಾರ್ವಜನಿಕ ಸಂಚಾರ ನಿಯಮಗಳನ್ನು ವಾಹನ ಸವಾರರು, ಚಾಚೂ ತಪ್ಪದೇ ಪಾಲಿಸಿ, ನಿಯಮ ಪಾಲನೆಯಲ್ಲೂ ಮೈಸೂರಿನ ಜನತೆ ಮೊದಲು ಎಂಬ ಅಂಶ ವಿಶ್ವದ ಗಮನ ಸೆಳೆಯುವಂತಾಗಬೇಕು. ಮೈಸೂರಿನ ಪ್ರವಾಸಿ ತಾಣಗಳು, ಇಲ್ಲಿನ ಸಾಂಸ್ಕೃತಿಕ ಚಟುವಟಿಕೆಗಳ ಪ್ರದರ್ಶನದಲ್ಲಿ ವಿಶ್ವವಿಖ್ಯಾತಗೊಂಡಿವೆ. ಅಂತೆಯೇ ಜನರ ನಡವಳಿಕೆಯಲ್ಲೂ ವಿನಯತೆ ರೂಢಿಸಿಕೊಳ್ಳುವಂತಾಗಬೇಕು ಎಂದು ಸಲಹೆ ನೀಡಿದರು.

ಜನರು ಸಂಚಾರ ನಿಯಮ ಪಾಲನೆ ಮಾಡುವ ಮೂಲಕ, ಸಂಘ–ಸಂಸ್ಥೆಗಳ ಮೂಲಕ ಸಾರ್ವಜನಿಕ ಸಮಸ್ಯೆಗಳಿಗೆ ಸ್ಪಂದಿಸುವ ಗುಣ ಹಾಗೂ ಸರ್ಕಾರದ ನೀತಿ–ನಿಯಮಗಳನ್ನು ಚಾಚೂ ತಪ್ಪದೇ ಪಾಲನೆ ಮೂಲಕ ಸಾರ್ವಜನಿಕ ಶಿಸ್ತನ್ನು ಬಿಂಬಿಸಬೇಕು. ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ನಿಯಮಗಳನ್ನು ಪಾಲಿಸದಿರುವ ವಾಹನ ಸವಾರರೇ ಹೆಚ್ಚಾಗುತ್ತಿದ್ದಾರೆ. ಇದರಿಂದ ದಿನಪೂರ್ತಿ ಬೀದಿಯಲ್ಲಿ ನಿಂತು ನಿಯಂತ್ರಿಸುವ ಸಂಚಾರ ಪೊಲೀಸರ ಮೇಲೆ ತೀವ್ರ ಒತ್ತಡ ಬೀಳುತ್ತಿದೆ. ಇದನ್ನು ತಪ್ಪಿಸಬೇಕಾದರೆ, ನನ್ನನ್ನೂ ಸೇರಿದಂತೆ ಎಲ್ಲರೂ ಸಂಚಾರ ನಿಯಮಗಳನ್ನು ಪಾಲಿಸಿ, ಸಂಚಾರ ಪೊಲೀಸರ ಮೇಲಿನ ಒತ್ತಡ ಕಡಿಮೆ ಮಾಡಲು ಪ್ರಯತ್ನಿಸಬೇಕು ಎಂದು ಮನವಿ ಮಾಡಿದರು.

ವಯಸ್ಸು 80 ದಾಟಿದರೂ ಅ.ಮಹೇಶ್ವರ ಅವರು ಮೈಸೂರು ವಿವಿ ಮುಂಭಾಗದ ವೃತ್ತದಲ್ಲಿ ಸಂಚಾರಿ ವಾರ್ಡನ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಜೀವನ ಉತ್ಸಾಹ, ಸಾರ್ವಜನಿಕ ಬದ್ಧತೆ ನೋಡಿದರೆ, ಮಧ್ಯಮ ವಯಸ್ಕರಾದ ನಮ್ಮಂತಹವರಿಗೆ ನಾಚಿಕೆಯಾಗುವಂತೆ ಕರ್ತವ್ಯದಲ್ಲಿ ಶಿಸ್ತು ರೂಢಿಸಿಕೊಂಡು ಇತರರಿಗೆ ಮಾದರಿಯಾಗಿದ್ದಾರೆ. ಅಂತೆಯೇ ಸರಸ್ವತಿಪುರಂ ಪೊಲೀಸ್ ಠಾಣೆಯ ಎಎಸ್‌ಐ ವಿ.ಆರ್.ಶೇಷಾದ್ರಿ, ಠಾಣೆಗೆ ಬರುವ ದೂರುದಾರರೊಂದಿಗೆ ತಮ್ಮ ಕೆಲಸದಲ್ಲಿ ಎಷ್ಟೇ ಒತ್ತಡವಿದ್ದರೂ ನೊಂದವರ ಪರ ತಾವೇ ಸ್ವತಃ ನಿಂತು ಕಾನೂನಿನ ಚೌಕಟ್ಟಿನಲ್ಲಿ ನ್ಯಾಯ ದೊರಕಿಸಿಕೊಡಲು ಶ್ರಮಿಸುತ್ತಿದ್ದಾರೆ. ಅವರು ಕರ್ತವ್ಯ ನಿರ್ವಹಿಸಿದ ಎಲ್ಲಾ ಸ್ಥಳದಲ್ಲೂ ಜನಸ್ನೇಹಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ ಎಂದು ಹಲವು ಘಟನೆಗಳನ್ನು ಉಲ್ಲೇಖಿಸಿ ವಿವರಿಸಿದರು. ಇಂತಹ ಶ್ರಮಜೀವಿಗಳಿಗೆ 'ರೋಟರಿ ಮೈಸೂರು ಮಿಡ್‌ಟೌನ್–ವೀನಸ್ ಶ್ರಮಜೀವಿ' ಪ್ರಶಸ್ತಿ ನೀಡುತ್ತಿರುವುದು ಸಂತೋಷದಾಯಕ ಎಂದರು.

ಈ ವೇಳೆ ರೋಟರಿ ಮೈಸೂರು ಮಿಡ್‌ಟೌನ್ ಅಧ್ಯಕ್ಷ ರೊ.ಎಸ್.ಕುಮಾರಸ್ವಾಮಿ, ಕಾರ್ಯದರ್ಶಿ ರೊ.ಎಲ್ಯೆಜರ್ ಮಿಲ್ಟನ್, ರೊ.ಆರ್.ವೆಂಕಟೇಶ ಇತರರಿದ್ದರು.

ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣ: ಮತ್ತೆ ಮೂವರ ಬಂಧನ







ಮಂಗಳೂರು, ಮೇ 14– ಮಂಗಳೂರು ನಗರದ ಬಜ್ಪೆ ಬಳಿ ನಡೆದ ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ ಮೂವರು ಆರೋಪಿಗಳನ್ನು ಬಜ್ಪೆ ಪೊಲೀಸರು ಬಂಧಿಸಿದ್ದಾರೆ. ಕಳವಾರು ನಿವಾಸಿ ಅಜರುದ್ದೀನ್ ಅಲಿಯಾಸ್ ಅಜರ್ ಅಲಿಯಾಸ್ ಅಜ್ಜು(29), ಬಜಪೆ ನಿವಾಸಿ ಅಬ್ದುಲ್ ಖಾದರ್ ಅಲಿಯಾಸ್ ನೌಫಲ್(24), ವಾಮಂಜೂರು ನಿವಾಸಿ ನೌಷದ್ ಅಲಿಯಾಸ್ ವಾಮಂಜೂರು ನೌಷದ್ ಅಲಿಯಾಸ್ ಚೊಟ್ಟೆ ನೌಷದ್(39) ಬಂಧಿತರು.

ಅಜರುದ್ದೀನ್ ವಿರುದ್ಧ ಈ ಹಿಂದೆ ಪಣಂಬೂರು, ಸುರತ್ಕಲ್, ಮುಲ್ಕಿ ಪೊಲೀಸ್ ಠಾಣೆಗಳಲ್ಲಿ ಮೂರು ಕಳವು ಪ್ರಕರಣ ದಾಖಲಾಗಿದ್ದವು. ಈತ ಕೊಲೆಯಾದ ಸುಹಾಸ್ ಶೆಟ್ಟಿಯ ಚಲನವಲನದ ಬಗ್ಗೆ ಮಾಹಿತಿ ನೀಡಿ, ಕೊಲೆಗೆ ಸಹಕರಿಸಿದ್ದಾನೆ. ಆರೋಪಿಗಳು ಕೊಲೆ ಮಾಡಿದ ನಂತರ ಕಾರಿನಲ್ಲಿ ಪರಾರಿಯಾಗಲು ಆರೋಪಿ ಅಬ್ದುಲ್ ಖಾದರ್ ಸಹಕರಿಸಿದ್ದನು. ಇನ್ನೋರ್ವ ಆರೋಪಿ ನೌಷದ್ ಉಳಿದ ಆರೋಪಿಗಳ ಜೊತೆ ಸೇರಿ ಕೊಲೆಗೆ ಸಂಚು ರೂಪಿಸಿದ್ದನು ಎಂದು ಪೊಲೀಸರ ತನಿಖೆಯಲ್ಲಿ ತಿಳಿದುಬಂದಿದೆ.

ಆರೋಪಿ ನೌಷದ್ ವಿರುದ್ಧ ಈ ಹಿಂದೆ ಸುರತ್ಕಲ್, ಬಜ್ಪೆ, ಮೂಡಬಿದ್ರಿ, ಮಂಗಳೂರು ಉತ್ತರ, ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಗಳಲ್ಲಿ ಕೊಲೆ, ಕೊಲೆ ಯತ್ನ, ದರೋಡೆಗೆ ಸಂಚು ಸೇರಿದಂತೆ ಒಟ್ಟು 6 ಪ್ರಕರಣಗಳು ದಾಖಲಾಗಿದ್ದವು.

ಆರೋಪಿಗಳ ಪೈಕಿ ಅಜರುದ್ದೀನ್‌ಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ. ಅಬ್ದುಲ್ ಖಾದರ್ ಹಾಗೂ ನೌಷದ್‌ಗೆ 7 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಪಡೆಯಲಾಗಿದೆ. ಪ್ರಕರಣ ಸಂಬಂಧ ಪೊಲೀಸರು ಈಗಾಗಲೇ ಎಂಟು ಜನರ ಬಂಧಿಸಿದ್ದಾರೆ.

ಮೈಸೂರು ಮಿತ್ರ

ಗುರುವಾರ 15 ಮೇ 2025

ಮೇ 20ರಂದು ಮನ್‌ಮುಲ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಗೆ ಚುನಾವಣೆ

ಬಹುತೇಕ ಕಾಂಗ್ರೆಸ್‌ಗೆ ಅಧಿಕಾರ, ಅಧ್ಯಕ್ಷಗಾದಿ ರೇಸ್‌ನಲ್ಲಿ ಅಪ್ಪಾಜಿಗೌಡ, ಕೆ.ಎಂ.ಉದಯ್, ಶಿವಪ್ಪ

ಮಂಡ್ಯ,ಮೇ 14–(ಮೋಹನ್‌ರಾಜ್) ಪ್ರತಿಷ್ಠಿತ ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟ (ಮನ್‌ಮುಲ್) ಆಡಳಿತ ಮಂಡಳಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆಗೆ ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ್ದಾರೆ.

ಚುನಾವಣೆಯು ಮೇ 20 ರಂದು ಮಂಗಳವಾರ ನಡೆಯಲಿದ್ದು, ಆಸಕ್ತ ಅಭ್ಯರ್ಥಿಗಳು ಮೇ 20 ರಂದು ಬೆಳಿಗ್ಗೆ 9 ರಿಂದ 11 ರವರೆಗೆ ನಾಮಪತ್ರಗಳನ್ನು ಸಲ್ಲಿಸಬಹುದಾಗಿದೆ. ಮಧ್ಯಾಹ್ನ 1 ಗಂಟೆಗೆ ಆಡಳಿತ ಮಂಡಳಿಯ ಸಭೆ ಹಾಗೂ ನಾಮಪತ್ರಗಳ ಪರಿಶೀಲನೆ ನಡೆಯಲಿದೆ.

ಪರಿಶೀಲನೆಯ ನಂತರ ಕ್ರಮಬದ್ಧವಾದ ಅಭ್ಯರ್ಥಿಗಳ ನಾಮಪತ್ರಗಳು ಹಾಗೂ ತಿರಸ್ಕೃತ ಅಭ್ಯರ್ಥಿಗಳ ನಾಮಪತ್ರಗಳ ಪಟ್ಟಿಯನ್ನು ಪ್ರಕಟಣೆ ಮಾಡಲಾಗುವುದು. ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆಯ ನಂತರ 30 ನಿಮಿಷಗಳ ಕಾಲ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳು ನಾಮ ಪತ್ರಗಳನ್ನು ಹಿಂತೆಗೆದುಕೊಳ್ಳಲು ಅವಕಾಶ ನೀಡಲಾಗುವುದು. ನಾಮಪತ್ರಗಳ ವಾಪಸ್ಸು ಪಡೆಯಲು ನೀಡಿದ ಅವಧಿಯ ನಂತರ ನಾಮ ಪತ್ರಗಳ ವಾಪಸ್ಸು ಪಡೆದ ಅಭ್ಯರ್ಥಿಗಳ ಹೆಸರು ಹಾಗೂ ಸ್ಪರ್ಧಾ ಕಣದಲ್ಲಿರುವ ಅಭ್ಯರ್ಥಿಗಳ ಹೆಸರು ಪ್ರಕಟಿಸಲಾಗುತ್ತದೆ.

ಅಂತಿಮವಾಗಿ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಕಣದಲ್ಲಿದ್ದಲ್ಲಿ ರಹಸ್ಯ ಮತದಾನ ನಡೆಸಿ, ಮತದಾನದ ನಂತರ ಮತ ಎಣಿಕೆ ಹಾಗೂ ಫಲಿತಾಂಶ ಘೋಷಿಸಲಾಗುತ್ತದೆ. ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ಚುನಾವಣೆಗೆ ಸಂಬಂಧಿಸಿದಂತೆ ಫೆಬ್ರವರಿ

ಹಲವು ಮಂದಿ ಆಕಾಂಕ್ಷಿತರು
ಮನ್‌ಮುಲ್ ಅಧ್ಯಕ್ಷ ಸ್ಥಾನ ಅಲಂಕರಿಸಲು ಕಾಂಗ್ರೆಸ್‌ನಿಂದ ಹಲವು ಮಂದಿ ಆಕಾಂಕ್ಷಿಗಳಿದ್ದು, ಈ ಪೈಕಿ ನಾಗಮಂಗಲದಿಂದ ಆಯ್ಕೆಯಾಗಿರುವ ವಿಧಾನ ಪರಿಷತ್ ಮಾಜಿ ಸದಸ್ಯ ಎನ್.ಅಪ್ಪಾಜಿಗೌಡ ಹೆಸರು ಮುಂಚೂಣಿಯಲ್ಲಿದೆ. ಮಳವಳ್ಳಿಯಿಂದ ಆಯ್ಕೆಯಾಗಿರುವ ಉಮ್ಮಡಹಳ್ಳಿ ಶಿವಪ್ಪ ಹಾಗೂ ಸರ್ಕಾರದಿಂದ ನಾಮನಿರ್ದೇಶನ ಗೊಂಡು ಅಧ್ಯಕ್ಷ ಸ್ಥಾನ ಪಡೆಯಬೇಕೆಂಬ ಆಸೆ ಹೊಂದಿರುವ ಮದ್ದೂರು ಶಾಸಕ ಕೆ.ಎಂ.ಉದಯ್ ರೇಸ್‌ನಲ್ಲಿದ್ದಾರೆ.

2 ರಂದು ಚುನಾವಣೆಯನ್ನು ನಡೆಸಲಾಗಿದ್ದು, ಘನ ನ್ಯಾಯಾಲಯದ ಅಂತಿಮ ಆದೇಶಗಳ ರೀತ್ಯಾ ಎಲ್ಲಾ ಮತಕ್ಷೇತ್ರಗಳ



ಫಲಿತಾಂಶವನ್ನು ಪ್ರಕಟಿಸಿದೆ.

ಚುನಾಯಿತರಾಗಿ ಮಂಡ್ಯ–3, ಮದ್ದೂರು–2, ಮಳವಳ್ಳಿ–1, ಪಾಂಡವಪುರ–1, ಶ್ರೀರಂಗಪಟ್ಟಣ–1, ಕೆ.ಆರ್.ಪೇಟೆ–2 ಮತ್ತು ನಾಗಮಂಗಲ–2 ಒಟ್ಟು 12 ಜನ ನಿರ್ದೇಶಕರು ಆಯ್ಕೆಯಾಗಿದ್ದು, ಎಲ್ಲರೂ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಗಾದಿಗೆ ತಲಾ ಒಂದೊಂದು ಮತ ಚಲಾಯಿಸಬಹುದಾಗಿದೆ.

ಇವರದೊಂದಿಗೆ ಸರ್ಕಾರದ ನಾಮನಿರ್ದೇಶಿತ ಸದಸ್ಯರು–1, ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು– 1, ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳದ ಪ್ರತಿನಿಧಿ–1, ಪಶು ಸಂಗೋಪನಾ ಇಲಾಖೆಯ ಮಂಡ್ಯ ಜಿಲ್ಲಾ ಉಪ ನಿರ್ದೇಶಕರು–1, ಮತ್ತು ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳದ ಪ್ರತಿನಿಧಿ–1 ಸೇರಿ ಒಟ್ಟು 17 ಜನ ಮತದಾನದ ಹಕ್ಕನ್ನು ಹೊಂದಿದ್ದಾರೆಂದು ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ರಿಟರ್ನಿಂಗ್ ಅಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ ಶಿವಾನಂದಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್‌ಗೆ ಅಧಿಕಾರ ಸಾಧ್ಯತೆ

ಚುನಾಯಿತ 12 ಮಂದಿ ಪೈಕಿ 6 ಮಂದಿ ಕಾಂಗ್ರೆಸ್ ಪಕ್ಷದ ಬೆಂಬಲದೊಂದಿಗೆ ಗೆದ್ದ ನಿರ್ದೇಶಕರಿದ್ದರೆ, ಮೂರು ಮಂದಿ ಜೆಡಿಎಸ್ ಬೆಂಬಲದೊಂದಿಗೆ ಗೆದ್ದ ನಿರ್ದೇಶಕರಿದ್ದಾರೆ. ಬಿಜೆಪಿಯಿಂದ ಬಂಡಾಯವಾಗಿ ಸ್ಪರ್ಧಿಸಿ ಮದ್ದೂರಿನ ಸ್ವಾಮಿ ಆಯ್ಕೆಯಾಗಿದ್ದರೆ, ಕೆ.ಆರ್.ಪೇಟೆಯಿಂದ ಗೆದ್ದಿರುವ ಇಬ್ಬರು ಜೆಡಿಎಸ್‌ನಿಂದ ಬಂಡೆದ್ದು ನಿಂತು ವಿಜಯಶಾಲಿಯಾಗಿರುವವರಿದ್ದಾರೆ. ಇನ್ನು ಸರ್ಕಾರದ ನಾಮನಿರ್ದೇಶಿತ ಒಬ್ಬರು ಹಾಗೂ ರಾಜ್ಯ ಸರ್ಕಾರದ ಮೂರು ಮಂದಿ ಅಧಿಕಾರಿಗಳ ಸಹ ಸರ್ಕಾರದ ಪರವೇ ಮತ ಚಲಾಯಿಸುವ ಸಾಧ್ಯತೆ ಇರುವುದರಿಂದ ಕಾಂಗ್ರೆಸ್ ಬೆಂಬಲ ಚುನಾಯಿತ 6, ಮೂರು ಮಂದಿ ಅಧಿಕಾರಿಗಳು, ಓರ್ವ ನಾಮನಿರ್ದೇಶಿತ ಸೇರಿ 10ಕ್ಕೇರಲಿದೆ. ಜೆಡಿಎಸ್‌ಗೆ ಮೂರು ಮಂದಿಯ ಬೆಂಬಲವಿದ್ದರೆ, ಇತ್ತ ಜೆಡಿಎಸ್‌ನ ಇಬ್ಬರು ಬಂಡಾಯಗಾರರು ಹಾಗೂ ಬಿಜೆಪಿಯ ಓರ್ವ ಬಂಡಾಯ ನಿರ್ದೇಶಕರ ನಡೆ ಕುತೂಹಲ ಕೆರಳಿಸಿದೆ. ಸದ್ಯ ಕಾಂಗ್ರೆಸ್ ಮೇಲ್ನೋಟಕ್ಕೆ ಅಧಿಕಾರ ಹಿಡಿಯುವ ಸಾಧ್ಯತೆ ಇದೆ.

ವಿದ್ಯಾರ್ಥಿ ಸಂಘದ ಸಮಾರೋಪ



ಕೆ.ಆರ್.ಪೇಟೆ ಪಟ್ಟಣದ ಕಲ್ಪತರು ಪ್ರಥಮ ದರ್ಜೆ ಕಾಲೇಜಿನ ಅಂತಿಮ ಬಿಎ, ಬಿ.ಕಾಂ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಬೀಳ್ಕೊಡುಗೆ, ಹಾಗೂ ವಿದ್ಯಾರ್ಥಿ ಸಂಘದ ಸಮಾರೋಪ ಸಮಾರಂಭವನ್ನು ಪಾಂಡವಪುರ ಉಪವಿಭಾಗಾಧಿಕಾರಿ ಕೆ.ಆರ್.ಶ್ರೀನಿವಾಸ್ ಅವರು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು.

ಬೈಕುಗಳ ನಡುವೆ ಡಿಕ್ಕಿ: ಓರ್ವ ಸಾವು, ಮತ್ತೋರ್ವನಿಗೆ ಗಾಯ

ಕೆ.ಆರ್.ಪೇಟೆ, ಮೇ 14(ಶ್ರೀನಿವಾಸ್)– ಎರಡು ಬೈಕುಗಳ ನಡುವೆ ಸಂಭವಿಸಿದ ಡಿಕ್ಕಿಯಿಂದ ಓರ್ವ ಸಾವನ್ನಪ್ಪಿ ಮತ್ತೋರ್ವ ಗಂಭೀರವಾಗಿ ಗಾಯ ಗೊಂಡಿರುವ ಘಟನೆ ತಾಲೂಕಿನ ಕತ್ತರಘಟ್ಟ–ಹೊಸ ಹೊಳಲು ಮುಖ್ಯ ರಸ್ತೆಯ ಜಲಸೂರು–ಬೆಂಗಳೂರು ರಾಜ್ಯ ಹೆದ್ದಾರಿಯಲ್ಲಿ ಜರುಗಿದೆ.



ತಾಲೂಕಿನ ಹೊಸಹೊಳಲು ಗ್ರಾಮದ ಬೈಕ್ ಸವಾರ ಬಾಲಕೃಷ್ಣ (55) ಸ್ಥಳದಲ್ಲಿಯೇ ಮೃಪಟ್ಟಿದ್ದರೆ, ಮತ್ತೊಂದು ಬೈಕಿನ ಸವಾರ ದೊಡ್ಡಯಾಚೇನಹಳ್ಳಿ ಗ್ರಾಮದ ಟೈಲರ್ ಕೃಷ್ಣ ಗಂಭೀರವಾಗಿ ಗಾಯಗೊಂಡಿದ್ದು, ಸ್ಥಳೀಯ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ವೈದ್ಯರ ಸಲಹೆಯ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಮೃತ ಬಾಲಕೃಷ್ಣ ಅವರು ಪತ್ನಿ, ಇಬ್ಬರು ಮಕ್ಕಳು, ಸಹೋದರ, ಸಹೋದರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ನಿಧನಕ್ಕೆ ಪುರಸಭಾ ಸದಸ್ಯ ಹೆಚ್.ಆರ್.ಲೋಕೇಶ್ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ. ಘಟನೆ ಕುರಿತು ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಳವಳ್ಳಿಗೆ ನರೇಂದ್ರಸ್ವಾಮಿ ಕೊಡುಗೆ ಶೂನ್ಯ

ಮಾಜಿ ಶಾಸಕ ಡಾ.ಕೆ.ಅನ್ನದಾನಿ ವಾಗ್ದಾಳಿ



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಮಾಜಿ ಶಾಸಕ ಡಾ.ಕೆ.ಅನ್ನದಾನಿ.

ಮಂಡ್ಯ,ಮೇ 14– ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದ 20 ಮತ್ತು 14 ತಿಂಗಳ ಅವಧಿಯಲ್ಲಿ ಮಳವಳ್ಳಿ ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದು, ಇದಕ್ಕೆ ಆ ಸಂದರ್ಭದಲ್ಲಿ ಶಾಸಕನಿದ್ದ ನಾನೇ ಸಾಕ್ಷಿಯಾಗಿದ್ದೇನೆ. ಹಾಲಿ ಶಾಸಕರಾಗಿರುವ ಪಿ.ಎಂ.ನರೇಂದ್ರಸ್ವಾಮಿ ಕ್ಷೇತ್ರಕ್ಕೆ ನಯಾಪೈಸೆ ಅಭಿವೃದ್ಧಿ ಕಾರ್ಯಗಳನ್ನು ಮಾಡಿಲ್ಲ. ಅವರಿಂದ ಕ್ಷೇತ್ರಕ್ಕೆ ಅಭಿವೃದ್ಧಿ ಶೂನ್ಯವಾಗಿದೆ ಎಂದು ಮಾಜಿ ಶಾಸಕ ಹಾಗೂ ಜೆಡಿಎಸ್ ಎಸ್ಸಿ ಘಟಕದ ರಾಜ್ಯಾಧ್ಯಕ್ಷ ಡಾ.ಕೆ.ಅನ್ನದಾನಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಡಿದ ಕೆಲಸ ಮಾತನಾಡಬೇಕು, ಮಾತನಾಡುವುದೇ ಕೆಲಸವಾಗಬಾರದೆಂದು ವೇದಿಕೆಯೊಂದರಲ್ಲಿ ಶಾಸಕ ನರೇಂದ್ರಸ್ವಾಮಿ ಮಾತನಾಡುತ್ತಾ ವೈಯಕ್ತಿಕವಾಗಿ ಹಾಡೇಳುವವನು ಎಂದು ಅಪಹಾಸ್ಯ ಮಾಡಿದ್ದು, ಮಳವಳ್ಳಿ ತಾಲೂಕಿನಲ್ಲಾದ ಅಭಿವೃದ್ಧಿ ಕೆಲಸಗಳು ತಮ್ಮಿಂದಲೇ ಆಗಿದೆ ಎಂದು ಬಿಂಬಿಸಿಕೊಳ್ಳುತ್ತಿದ್ದು, ಅವರು ಮಂತ್ರಿಯಾಗಿ, ಶಾಸಕರಾಗಿ ಎಷ್ಟು ಅಭಿವೃದ್ಧಿ ಕೆಲಸಗಳನ್ನು ತಾಲೂಕಿಗೆ ತಂದಿದ್ದಾರೆ ಎಂಬುದರ ದಾಖಲೆ ಬಿಡುಗಡೆ ಮಾಡಿ ಚರ್ಚೆಗೆ ಬರಲಿ ಎಂದು ಆಗ್ರಹಿಸಿದರು.

ನಾನು ದೇವರಾಜ ಅರಸು ಅಭಿವೃದ್ಧಿ ಮಂಡಳಿಯ ಅಧ್ಯಕ್ಷನಾಗಿದ್ದ ವೇಳೆ ಹಿಂದುಳಿದ ವರ್ಗದ ಜನರಿಗೆ ಅನುದಾನ ಒದಗಿಸಿ, ಅಭಿವೃದ್ಧಿಯತ್ತ ಸಾಗಲು ಸಹಾಯ ಮಾಡಿದ್ದೇನೆ. ಇದರಿಂದ ಕುರುಬ, ಕುಂಬಾರ, ತಿಗಳ ಸೇರಿದಂತೆ ಹಲವು ಸಮಾಜದವರು ಅಭಿವೃದ್ಧಿಯ ಹಾದಿಗೆ ಸಾಗಲು ಸಹಕಾರಿಯಾಗಿದೆ ಎಂದು ದಾಖಲೆಗಳನ್ನು ಮುಂದಿಟ್ಟರು.

ತಾವು ಮಂತ್ರಿಯಾಗಿದ್ದ ವೇಳೆ ಏನೆಲ್ಲ ಕೆಲಸ ಮಾಡಿದ್ದಾರೆ ಎಂಬ ಸಾಧನೆ ತೆರೆದಿಡಲಿ, ಈಗ ಎರಡು ವರ್ಷಗಳಿಂದ ತಾಲೂಕಿಗೆ ಎಷ್ಟು ಹಣ ತಂದಿದ್ದಾರೆ ಎಂದು ಸಾಭೀತು ಮಾಡಲಿ ಎಂದು ಆಗ್ರಹಿಸಿದ ಅವರು ತಮ್ಮೆಲ್ಲಾ ದಾಖಲೆಗಳ ಸಮೇತ ತಾವು ಪೂಜಿಸುವ ಭ್ರಮರಾಂಭ ಮಲ್ಲಿಕಾರ್ಜುನ ಸ್ವಾಮಿ ದೇವಾಲಯಕ್ಕೆ ಬರಲಿ ಎಂದು ಸವಾಲಿಗೆ ಕರೆ ನೀಡಿದರು.

ಹಾಡೇಳುವವನು ಎಂದು ಅಪಹಾಸ್ಯ ಮಾಡುತ್ತಿದ್ದು, ನಾನೊಬ್ಬ ಜನಪದ ಕಲಾವಿದ ಹಾಡೇಳುವುದು ನನ್ನ ಕಲೆ ಎರಡು ಪದವಿ ಪಡೆದು, ಜನಪದ ಪಿಹೆಚ್‌ಡಿಯನ್ನು ಪಡೆದಿದ್ದೇನೆ. ನಿನ್ನಂತೆ ಗುಂಡಾಗಿರಿ, ಬೆದರಿಸುವ ಕಲೆ ನನಗಿಲ್ಲ ಕೋವಿಡ್ ಸಂದರ್ಭದಲ್ಲಿ ಜನರ ಕಷ್ಟ ಕೇಳದ ನೀನು ಇಸ್ಪೀಟ್ ಆಟದ ಗಿರಾಕಿ, ಮರಳು ದಂಧೆ ಮಾಡುವ ಗಿರಾಕಿ, ಮಾತನಾಡುವಾಗ ನಾಲಿಗೆ ಬಿಗಿ ಹಿಡಿದು ಮಾತನಾಡಬೇಕು ಎಂದು ಎಚ್ಚರಿಕೆ ನೀಡಿದರು.

ಐಶ್ವರ್ಯಗೌಡ ವಿರುದ್ಧ ಇ.ಡಿ ತನಿಖೆಗೆ ಆದೇಶ: ಚಿನ್ನಾಭರಣ ಅಕ್ರಮವೆಸಗಿದ ಐಶ್ವರ್ಯಗೌಡ ವಿರುದ್ಧ ಇ.ಡಿ ತನಿಖೆಗೆ ಆದೇಶಿಸಿರುವುದು ನನ್ನ ಹೋರಾಟಕ್ಕೆ ಸಿಕ್ಕ ಪ್ರತಿಫಲವಾಗಿದೆ. ಇಷ್ಟು ದಿನ ಆಕೆಗೆ ಸಹಕಾರ ನೀಡಿರುವುದು ಯಾರು ಎಂಬುದರ ವಿಚಾರವಾಗಿ ನನ್ನ ಮೇಲೆ ಗೂಬೆ ಕೂರಿಸಲಾಗುತ್ತಿತ್ತು. ಇದನ್ನು ಬಹಿರಂಗ ಪಡಿಸಲು ನಾನು ಹೋರಾಟದ ಮೂಲಕ ಒತ್ತಾಯ ಮಾಡಿದ ಹಿನ್ನೆಲೆ ತನಿಖೆಯನ್ನು ಇ.ಡಿಗೆ ವಹಿಸಲಾಗಿದ್ದು, ಇದರಿಂದ ಆಕೆಗೆ ಸಹಕಾರ ನೀಡಿದವರು ಯಾರು ಎಂಬುದು ಬಯಲಾಗಲಿದೆ ಎಂದರು.

ಈಕೆ ಬಳಸುತ್ತಿದ್ದು (ಕೆಎ–09 ಎಂಕೆ 4689) ಬೆನ್ಸ್ ಕಾರನ್ನು ವಿನಯ್ ಕುಲಕರ್ಣಿ ನೀಡಿರುವುದಾಗಿ ತಿಳಿದು ಬಂದಿದ್ದು, ಏತಕ್ಕಾಗಿ ಸದರಿ ಕಾರನ್ನು ಈಕೆಗೆ ನೀಡಲಾಗಿತ್ತು ಎಂಬುದು ಸಹ ಇ.ಡಿ ತನಿಖಾ ಸಂಸ್ಥೆ ಬೆಳಕಿಗೆ ತರಬೇಕಿದೆ ಎಂದು ಇದೇ ವೇಳೆ ಆಗ್ರಹಿಸಿದರು.

ವೃದ್ಧಾಪ್ಯ ವೇತನ ಪಡೆಯಲು ಜಾತಿ, ಆದಾಯ ಪ್ರಮಾಣ ಪತ್ರ ಕಡ್ಡಾಯ ಖಂಡಿಸಿ ಪ್ರತಿಭಟನೆ



ತಾಲೂಕು ಕಚೇರಿ ಮುಂದೆ ಪ್ರತಿಭಟನೆ ನಡೆಸುತ್ತಿರುವ ಸಂಘಟನೆಗಳ ಮುಖಂಡರು.

ಶ್ರೀರಂಗಪಟ್ಟಣ:(ವಿನಯ್) ವೃದ್ಧಾಪ್ಯ ವೇತನ ಪಡೆಯಲು ಕಡ್ಡಾಯವಾಗಿ ಜಾತಿ ಮತ್ತು ಆದಾಯ ಪ್ರಮಾಣಪತ್ರ ಕೇಳುತ್ತಿರುವುದನ್ನು ಖಂಡಿಸಿ ವಿವಿಧ ಜನಪರ ಸಂಘಟನೆಗಳ ಮುಖಂಡರು ಪ್ರತಿಭಟನೆ ನಡೆಸಿದರು.

ಪಟ್ಟಣ ತಾಲೂಕು ಕಚೇರಿ ಎದುರು ಜವಾವಣೆಗೊಂಡ ಮುಖಂಡರು, ವೃದ್ಧರು, ವಿಕಲಚೇತನರು, ವಿಧವಾ ವೇತನ ಪಡೆಯಲು ಸರ್ಕಾರ ಜಾತಿ, ಆದಾಯ ಪ್ರಮಾಣ ಪತ್ರ ಸೇರಿದಂತೆ ಇತರೆ ದಾಖಲಾತಿಗಳನ್ನು ಕೇಳುತ್ತಿರುವುದು ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನಂತರ ವಿಕಲ ಚೇತನರ ಒಕ್ಕೂಟ ಜೆಡಿಎಸ್ ಘಟಕದ ಅಧ್ಯಕ್ಷ ದಸರಗುಪ್ಪೆ ಮಂಜುನಾಥ್ ಮಾತನಾಡಿ, 60ವರ್ಷ ಮೇಲ್ಪಟ್ಟ ನಾಗರೀಕರು ಮಾಶಾಸನವನ್ನು ಪಡೆಯುತ್ತಿದ್ದು, ಇದೀಗ ಅವರಿಗೆ 65 ವರ್ಷ ತುಂಬಿದ್ದರಿಂದ ಸಂಧ್ಯಾ ಸುರಕ್ಷ ಯೋಜನೆಯಡಿ (ಎಸ್‌ಎಸ್‌ವೈ) ಮಾಶಾಸನ ಪಡೆಯಲು ಅರ್ಜಿ ಸಲ್ಲಿಸುತ್ತಿದ್ದಾರೆ. ಜೊತೆಗೆ ವಿಧವಾ ವೇತನ, ವೃದ್ಧಾಪ್ಯ ವೇತನ, ವಿಕಲ ಚೇತನರು ಸೇರಿದಂತೆ ಅರ್ಹ ಫಲಾನುಭವಿಗಳಿಗೆ ಮಾಶಾಸನ ನೀಡಲು ಅಧಿಕಾರಿಗಳು ಇನ್ನಿಲ್ಲದಂತಹ ದಾಖಲಾತಿಗಳನ್ನು ಕೇಳಿ, ಮೇಲಿಂದ ಮೇಲೆ ಕಚೇರಿ ಅಲೆಯುವಂತೆ ಮಾಡುತ್ತಿರುವುದು ಸರಿಯಲ್ಲ. ಎಷ್ಟೋ ಮಂದಿ ಸರ್ಕಾರ ನೀಡುವ ಮಾಶಾಸನವನ್ನೇ ನಂಬಿಕೊಂಡು ತಮ್ಮ ನಿತ್ಯ ಜೀವನ ನಡೆಸುತ್ತಿದ್ದಾರೆ. ಅಂತಹವರಿಗೆ ತೊಂದರೆ ನೀಡದೆ ದಾಖಲಾತಿಗಳನ್ನು ಸಡಿಲಗೊಳಿಸುವಂತೆ ಆಗ್ರಹಿಸಿ, ಉಪ ತಹಸೀಲ್ದಾರ್ ಚೈತ್ರ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ರೈತ ಮುಖಂಡ ಮಂಜೇಶ್ ಗೌಡ, ನಗುವನಹಳ್ಳಿ ಶಿವಸ್ವಾಮಿ, ಶಂಕರ್ ಬಾಬು, ಮಹೇಶ್, ಡಿ.ಎಂ.ರವಿ, ಕುಮಾರ ಸ್ವಾಮಿ, ತಮ್ಮೇಗೌಡ, ಕೆ.ನಿಂಗೇಗೌಡ, ಕೆ.ಹೆಚ್ ಜಗದೀಶ್, ಸೇರಿದಂತೆ ಇತರರು ಇದ್ದರು.

ಒಂದನೇ ಪುಟದಿಂದ

ಮುಡಾ ಈಗ ಎಂಡಿಎ

ರಾಜಕಾರಣಿಗಳ ಕಾರುಬಾರಿಗೆ ಬ್ರೇಕ್

- ಆಡಳಿತ ಅನುಭವ ಸೇರಿದಂತೆ ವಿವಿಧ ವ್ಯಕ್ತಿ, ಕ್ಷೇತ್ರದ ನೈಪುಣ್ಯಗಾರರ ಜೊತೆಗೆ ಸರ್ಕಾರದಿಂದ ಅಧ್ಯಕ್ಷ, ಓರ್ವ ಶಾಸಕ ಸೇರಿ ಆರು ಮಂದಿ ನಾಮ ನಿರ್ದೇಶನಕ್ಕೆ ಅವಕಾಶ
- ಮೈಸೂರು ಪಾರಂಪರಿಕ ಕಟ್ಟಡಗಳ ಸಂರಕ್ಷಣಾ ಆಯೋಗ ರಚನೆ

ದರ್ಜೆಗೆ ಕಡಿಮೆ ಇಲ್ಲದ ದರ್ಜೆಯ ನಗರಾಭಿವೃದ್ಧಿ ಇಲಾಖೆಯ ಕರ್ನಾಟಕ ಸರ್ಕಾರ ಸಚಿವಾಲಯದ ಒಬ್ಬ ಅಧಿಕಾರಿ (ಪದ ನಿಮಿತ್ತ), ಕರ್ನಾಟಕ ರಾಜ್ಯ ವಿಧಾನ ಮಂಡಲದ ಸದಸ್ಯರಾಗಿರುವ ಒಬ್ಬ ವ್ಯಕ್ತಿ, ಮಹಿಳೆಯೂ ಸೇರಿದಂತೆ ನಾಲ್ವರು ವ್ಯಕ್ತಿಗಳು (ಅವರಲ್ಲಿ ಒಬ್ಬರು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಸೇರಿದವರು), ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಯ ಒಬ್ಬ ಪ್ರತಿನಿಧಿ, ಮೈಸೂರು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯ ಒಬ್ಬ ಪ್ರತಿನಿಧಿ, ಎಂಡಿಎ ಆಯುಕ್ತರು (ಪದ ನಿಮಿತ್ತ ಸದಸ್ಯ), ಪ್ರಾಧಿಕಾರದ ಕಾರ್ಯದರ್ಶಿ (ಪದ ನಿಮಿತ್ತ ಸದಸ್ಯ) ಸದಸ್ಯರಾಗಿರುತ್ತಾರೆ.

ಇವರಲ್ಲಿ ಪ್ರಾಧಿಕಾರದ ಅಧ್ಯಕ್ಷ ವಾಸ್ತುಶಿಲ್ಪದಲ್ಲಿ ಅನುಭವವಿರುವ ವ್ಯಕ್ತಿ, ನಗರಾಭಿವೃದ್ಧಿ ಇಲಾಖೆ ಸಚಿವಾಲಯದ ಅಧಿಕಾರಿ, ವಿಧಾನಮಂಡಲದ ಸದಸ್ಯ, ಮಹಿಳೆಯರೂ ಸೇರಿದಂತೆ ನಾಲ್ವರು ವ್ಯಕ್ತಿಗಳನ್ನು ಸರ್ಕಾರವೇ ನೇಮಿಸತಕ್ಕದ್ದು ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಪ್ರಾಧಿಕಾರದ ಆಯುಕ್ತರಾಗಿ ಭಾರತೀಯ ಆಡಳಿತ ಸೇವೆ ಅಥವಾ ಕರ್ನಾಟಕ ಆಡಳಿತ ಸೇವೆಯ ಹಿರಿಯ ಶ್ರೇಣಿ ಅಥವಾ ಅದರ ಮೇಲಿನ ದರ್ಜೆಯ ಅಧಿಕಾರಿಯನ್ನು ನೇಮಿಸತಕ್ಕದ್ದು. ಕಾರ್ಯದರ್ಶಿಯಾಗಿ ಕರ್ನಾಟಕ ಆಡಳಿತ ಸೇವೆಯ ಹಿರಿಯ ಶ್ರೇಣಿಯ ಅಧಿಕಾರಿಯ ದರ್ಜೆಗಿಂತ ಕಡಿಮೆ ಇಲ್ಲದ ದರ್ಜೆಯ ಅಧಿಕಾರಿಯನ್ನು ನೇಮಿಸತಕ್ಕದ್ದು ಎಂದು ತಿಳಿಸಲಾಗಿದೆ.



ಪ್ರಾಧಿಕಾರವು ಮೈಸೂರು ಪಾರಂಪರಿಕ ಕಟ್ಟಡಗಳ ಸಂರಕ್ಷಣಾ ಆಯೋಗವನ್ನು ರಚನೆ ಮಾಡಬೇಕು ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದ್ದು, ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕಾಗಿ ಈ ಆಯೋಗವನ್ನು ಸರ್ಕಾರವು ಅಧಿಸೂಚನೆ ಮೂಲಕ ರಚಿಸಬಹುದು. ಅದರಲ್ಲಿ ಸರ್ಕಾರವು ನೇಮಿಸಬಹುದಾದ ಅಧ್ಯಕ್ಷ ಮತ್ತು ಇತರ ವಿಷಯಗಳ ಜೊತೆ ದೃಶ್ಯ ಕಲೆ ಅಥವಾ ವಾಸ್ತುಶಿಲ್ಪ ಅಥವಾ ಭಾರತೀಯ ಇತಿಹಾಸ ಅಥವಾ ಪುರಾತತ್ವ ಶಾಸ್ತ್ರ ಮತ್ತು ಪರಿಸರ ವಿಜ್ಞಾನಗಳನ್ನು ಪ್ರತಿನಿಧಿಸುವ ಇತರ ಸದಸ್ಯರು ಇರತಕ್ಕದ್ದು. ನಗರ ವಿನ್ಯಾಸದ ಮತ್ತು ಅಭಿವೃದ್ಧಿ ಪ್ರದೇಶಗಳ ಪರಿಸರದ ಜೀರ್ಣೋದ್ಧಾರ ಮಾಡುವುದು ಮತ್ತು ರಕ್ಷಣೆ ಮಾಡುವುದು, ಭವಿಷತ್ತಿನ ನಗರ ವಿನ್ಯಾಸವನ್ನು ಮತ್ತು ಪರಿಸರವನ್ನು ಯೋಜಿಸುವುದು ಹಾಗೂ ಅಭಿವೃದ್ಧಿಗೊಳಿಸುವುದು, ಪ್ರಾಚ್ಯ ವಸ್ತು ವಿಷಯ ಮತ್ತು ಐತಿಹಾಸಿಕ ಅತ್ಯುತ್ಕೃಷ್ಟ ನಿಸರ್ಗ ಸೌಂದರ್ಯವುಳ್ಳ ನಿವೇಶನಗಳನ್ನು ಜೀರ್ಣೋದ್ಧಾರ ಮಾಡುವುದು ಹಾಗೂ ರಕ್ಷಣೆ ಮಾಡುವುದು, ಈ ಉದ್ದೇಶಕ್ಕೋಸ್ಕರ ಖರೀದಿ ಅಥವಾ ಸ್ವಾಧೀನಪಡಿಸಿಕೊಳ್ಳುವುದಕ್ಕಾಗಿ ಸರ್ಕಾರ ಅಥವಾ ಯಾವುದೇ ಪ್ರಾಧಿಕಾರ ನೀಡಬೇಕಾದ ಅನುದಾನಗಳು, ರಿಯಾಯಿತಿ ಮತ್ತು ಇತರ ರೀತಿಯ ನಷ್ಟ ಪರಿಹಾರದ ವಿಧಾನಗಳು ಮತ್ತು ಅಂತಹ ಅನುದಾನಗಳನ್ನು ಮತ್ತು ರಿಯಾಯಿತಿಗಳನ್ನು ಹಾಗೂ ನಷ್ಟ ಪರಿಹಾರವನ್ನು ಯಾವ ಷರತ್ತಿಗೆ ಒಳಪಟ್ಟು ಕೊಡಬೇಕು ಎಂಬುದರ ಬಗ್ಗೆ ಮೈಸೂರು ಪಾರಂಪರಿಕ ಕಟ್ಟಡಗಳ ಸಂರಕ್ಷಣಾ ಆಯೋಗವು ಸರ್ಕಾರಕ್ಕೆ ಶಿಫಾರಸು ಮಾಡುವುದು ಕರ್ತವ್ಯವಾಗಿರಬೇಕು ಎಂದು ಅಧಿಸೂಚನೆಯಲ್ಲಿ ಹೇಳಲಾಗಿದೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದ ನಂತರ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಲೇಔಟ್ ಪ್ಲಾನ್ ಅನುಸರಣೆ ಹೊರತಾಗಿ ಪ್ರಾಧಿಕಾರದ ವ್ಯಾಪ್ತಿಯೊಳಗಿನ ಯಾವುದೇ ಪ್ರದೇಶದಲ್ಲೂ ಗೃಹ ನಿರ್ಮಾಣ ಯೋಜನೆಯನ್ನು ಕೈಗೊಳ್ಳತಕ್ಕದ್ದಲ್ಲ. ಆದರೆ ಪ್ರಾಧಿಕಾರ ಅಸ್ತಿತ್ವಕ್ಕೆ ಬರುವ ಮುನ್ನ ಗೃಹ ನಿರ್ಮಾಣ ಮಂಡಳಿ ಕೈಗೊಂಡಿರುವ ವಸತಿ ಯೋಜನೆಯನ್ನು ಆ ಯೋಜನೆ ಅನುಸಾರ ಮಂಡಳಿ ಕಾರ್ಯಗತಗೊಳಿಸತಕ್ಕದ್ದು ಎಂದು ಅಧಿಸೂಚನೆಯಲ್ಲಿ ಹೇಳಲಾಗಿದೆ.

ಶಂಭು ಭೀಕರ ಹತ್ಯೆ

ಶೋಧ ಕಾರ್ಯ; ಶವ ಪತ್ತೆ: ಯಸಳೂರು ಠಾಣೆ ಪೊಲೀಸರು ತಕ್ಷಣ ಶೋಧ ಕಾರ್ಯ ಆರಂಭಿಸಿದ್ದಾರೆ. ದುರ್ಗಮ ಕಾಡಲ್ಲಿ ಶವ ಹುಡುಕುವುದು ಸವಾಲಿನ ಕೆಲಸವಾಗಿತ್ತು. ಆದರೂ, ಕೊಲೆ ಪ್ರಕರಣ ಗಂಭೀರವಾಗಿ ಪರಿಗಣಿಸಿದ ಪೊಲೀಸರು, ಸ್ಥಳೀಯ ಸಾಹಸಿ ಯುವಕರೊಂದಿಗೆ ನಾಲ್ಕು ದಿನಗಳ ಕಾಲ ನಿರಂತರ ಶೋಧ ನಡೆಸಿದ ನಂತರ ಕಲ್ಲಹಳ್ಳಿ ಗ್ರಾಮದ ಸಮೀಪವಿರುವ ಪ್ರಪಾತದಲ್ಲಿ ಸಂಪತ್ ಶವ ಪತ್ತೆಯಾಗಿದೆ. ಶವದ ಸ್ಥಿತಿಗತಿ ಮತ್ತು ರಕ್ತದ ಗುರುತುಗಳನ್ನು ಗಮನಿಸಿದಾಗ ಇದೊಂದು ಘೋರ ಹತ್ಯೆ ಎಂದು ಪೊಲೀಸರು ಪ್ರಾಥಮಿಕವಾಗಿ ನಿರ್ಧರಿಸಿದ್ದಾರೆ

ಪೊಲೀಸರ ಪ್ರಾಥಮಿಕ ತನಿಖೆ ಪ್ರಕಾರ, ಸಂಪತ್ ಅವರನ್ನು ಬೇರೆಡೆ ಕೊಲೆ ಮಾಡಿ, ನಂತರ, ಆತ ಬಂದಿದ್ದ ಕಾರಿನಲ್ಲೇ ಶವವನ್ನು ಕಲ್ಲಹಳ್ಳಿ ಪ್ರಪಾತದ ಬಳಿ ತಂದು ಬಿಸಾಡಲಾಗಿದೆ ಎಂದು ಶಂಕಿಸಲಾಗಿದೆ. ಈ ಘಟನೆ ಯಸಳೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದಾಖಲಾಗಿದ್ದು, ಶವವನ್ನು ಮಡಿಕೇರಿಯ ಜಿಲ್ಲಾ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ.

ಕೊಳೆತಿರುವ ಮೃತದೇಹ: ಸಂಪತ್‌ನನ್ನು ಕೊಲೆ ಮಾಡಿದ ದುಷ್ಕರ್ಮಿಗಳು ತೀರ ಆಳವಾದ ಪ್ರಪಾತಕ್ಕೆ ಬಿಸಾಡಿ ನಾಲ್ಕು ದಿನಗಳು ಕಳೆದಿದ್ದರಿಂದ ಶವ ಅರ್ಧ ಕೊಳೆತು ಹೋಗಿದೆ.

ಯಾವುದೇ ಕಾಡುಪ್ರಾಣಿಗಳು ಶವದತ್ತ ಸುಳಿದಿಲ್ಲ. ಸಂಪತ್ ಶವವನ್ನು ಪ್ರಪಾತದಿಂದ ಮೇಲಕ್ಕೆ ತಂದು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ.

ಸಿದ್ದರಾಮಯ್ಯ ಮೇಲೆ ಮೊಟ್ಟೆ ಎಸೆದ ಪ್ರಕರಣದ ಆರೋಪಿ: ಸಂಪತ್ ಹತ್ಯೆ ಪ್ರಕರಣದಲ್ಲಿ ಇಬ್ಬರ ಮೇಲೆ ಅನುಮಾನವಿದೆ ಎಂದು ಕೊಡಗು ಜಿಲ್ಲಾ ಎಸ್‌ಪಿ ರಾಮರಾಜನ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಗಣಪತಿ ಮತ್ತು ಕಿರಣ್ ಎಂಬುವರ ಮೇಲೆ ಬಲವಾದ ಅನುಮಾನವಿದೆ ಎಂದ ಅವರು, ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರು ವಿಪಕ್ಷ ನಾಯಕರಾಗಿದ್ದ ವೇಳೆ ಮಡಿಕೇರಿಗೆ ಬಂದಿದ್ದಾಗ ಅವರ ಕಾರಿನ ಮೇಲೆ ಮೊಟ್ಟೆ ಎಸೆದ ಪ್ರಕರಣದಲ್ಲಿ ಹತ್ಯೆಗೀಡಾದ ಸಂಪತ್ ಮತ್ತು ಶಂಕಿತ ಆರೋಪಿ ಗಣಪತಿ ಆರೋಪಿಗಳಾಗಿದ್ದಾರೆ. ಅಕ್ರಮ ಸಂಬಂಧ ವಿಚಾರವಾಗಿ ಕೊಲೆ ನಡೆದಿರಬಹುದು ಎಂದು ಪ್ರಾಥಮಿಕವಾಗಿ ಗೊತ್ತಾಗಿದ್ದು, ಮುಂದಿನ ದಿನಗಳಲ್ಲಿ ಕೊಲೆಗೆ ಕಾರಣವೇನು ಎಂಬುದು ತನಿಖೆಯಿಂದ ತಿಳಿಯಲಿದೆ ಎಂದರು.

ಕೇಂದ್ರ ಸಕಾಲದಲ್ಲಿ ಹಣ ನೀಡದಿದ್ದರಿಂದ ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತಗೊಂಡಿವೆ

- ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿನುಡಿ
- ರಾಜ್ಯದಿಂದ ವಾರ್ಷಿಕ 4.50 ಲಕ್ಷ ಕೋಟಿ ವರಮಾನ ಪಡೆಯುವ ಕೇಂದ್ರ ರಾಜ್ಯಕ್ಕೆ ನೀಡಬೇಕಾದ್ದನ್ನು ನ್ಯಾಯವಾಗಿ ನೀಡುತ್ತಿಲ್ಲ

ಬೆಂಗಳೂರು, ಮೇ 14(ಕೆಎಂಶಿ)– ಕೇಂದ್ರ ಸರ್ಕಾರ ಸಕಾಲದಲ್ಲಿ ಹಣ ಬಿಡುಗಡೆ ಮಾಡದಿರುವುದರಿಂದ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತ ಗೊಂಡಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.



ವಾರ್ಷಿಕ 4.50 ಲಕ್ಷ ಕೋಟಿ ತೆರಿಗೆಯನ್ನು ರಾಜ್ಯ ಕೇಂದ್ರಕ್ಕೆ ನೀಡಿದ್ದರೂ, ರಾಜ್ಯಕ್ಕೆ ಮಾತ್ರ ಸರಿಯಾದ ನೆರವು ಕೇಂದ್ರದಿಂದ ದೊರೆಯುತ್ತಿಲ್ಲ. ಅತ್ತ ಕೇಂದ್ರ ಪುರಸ್ಕೃತ ಯೋಜನೆಗಳಿಗೂ ಹಣ ಕೊಡುತ್ತಿಲ್ಲ ಎಂದು ದೂರಿದರು.

ನಮ್ಮ ತೆರಿಗೆ ಹಣ ಪಡೆದು, ನಮ್ಮ ಪಾಲಿನದು ಸರಿಯಾಗಿ ನೀಡದಿದ್ದರೆ ನಾವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವುದಾದರೂ ಹೇಗೆ ಎಂದು ಪ್ರಶ್ನಿಸಿದ್ದಾರೆ.

ವಿಧಾನಸೌಧದ ಸಮ್ಮೇಳನಾ ಕೊಠಡಿಯಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಮಟ್ಟದ ದಿಶಾ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ನೀವು ಸಂಸದರು ನಮ್ಮ ಪರ ವಾಗಿ ಕೇಂದ್ರದ ಮೇಲೆ ಒತ್ತಡ ಹೇರಬೇಕು. ನಮ್ಮ ಸಂಸದರು, ರಾಜ್ಯಸಭಾ ಸದಸ್ಯರು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬಾರದು. 2 ವರ್ಷದಲ್ಲಿ ಒಮ್ಮೆಯೂ ರಾಜ್ಯದ ಪರವಾಗಿ ಸಂಸದರು ಮಾತಾಡಲಿಲ್ಲವಲ್ಲ ಏಕೆ ಎಂದರು.

ಕೇಂದ್ರ ಸರ್ಕಾರದಿಂದ ಬರಬೇಕಾದ ಪಿಂಚಣಿ ಎರಡು ವರ್ಷದಿಂದ ರಾಜ್ಯಕ್ಕೆ ಕೊಟ್ಟಿಲ್ಲ. ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಕೇಂದ್ರದಿಂದ ಹಣ ಬಾರದೇ ಇರುವುದಕ್ಕೆ ಮುಖ್ಯಮಂತ್ರಿ ಅವರು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರವೇ ಬಹುತೇಕ ಹಣ ಕೊಡುವ ಯೋಜನೆಗಳಿಗೆ ಪ್ರಧಾನಿ ಮತ್ತು ಕೇಂದ್ರದ ಹೆಸರಿದೆ. ಆದರೂ ಚೂರು–ಪಾರು ಕೇಂದ್ರದ ಹಣವೂ ಬರುತ್ತಿಲ್ಲ. ಈ ನಿರಂತರ ಅನ್ಯಾಯ ಪ್ರಶ್ನಿಸಬೇಕಲ್ಲವಾ ನೀವು ಎಂದರು. ರಾಜ್ಯ ಸರ್ಕಾರ ನಿರಂತರವಾಗಿ ಒಟ್ಟು 5665 ಕೋಟಿ ಪಿಂಚಣಿ ಕೊಡುತ್ತಲೇ ಬರುತ್ತದೆ. ಆದರೆ, 559 ಕೋಟಿ ಮಾತ್ರ ಕೇಂದ್ರ ಸರ್ಕಾರ ಕೊಡುತ್ತದೆ. ಈ ಸಣ್ಣ ಮೊತ್ತವನ್ನೂ ಕೇಂದ್ರ ಸರ್ಕಾರಕ್ಕೆ ಕೊಡಲು ಸಾಧ್ಯವಾಗುತ್ತಿಲ್ಲ. ಇದನ್ನೂ ಎರಡು ವರ್ಷಗಳಿಂದ ಬಾಕಿ ಉಳಿಸಿಕೊಂಡಿದೆ. ಇದು ಏಕೆ ಎಂದು ಪ್ರಶ್ನಿಸಿದರು.

ಜಿಲ್ಲಾ ಮಟ್ಟದಲ್ಲಿ ದಿಶಾ ಸಭೆಗಳು ನಿಗದಿತವಾಗಿ ನಡೆಯಬೇಕು ಎಂದು ಸೂಚನೆ ನೀಡಿದ ಮುಖ್ಯಮಂತ್ರಿಗಳು, ಸಂಸದರೂ ಈ ಬಗ್ಗೆ ಆಸಕ್ತಿ ವಹಿಸಬೇಕು ಎಂದರು.

ಮೂರು ತಿಂಗಳ ಒಳಗೆ ನರೇಗಾ ಕ್ರಿಯಾ ಯೋಜನೆ ಕಡ್ಡಾಯವಾಗಿ ಸಿದ್ಧಪಡಿಸಬೇಕು. ಏನೇ ಕಾರಣದಿಂದ ಹಿಂದಿನ ಕ್ರಿಯಾ ಯೋಜನೆ ಆಗಿದ್ದರೆ ಅದನ್ನು ಮುಂದಿನ ಕ್ರಿಯಾ ಯೋಜನೆಯಲ್ಲಿ ಸೇರ್ಪಡೆಗೊಳಿಸಿ ಎಂದು ಮುಖ್ಯಮಂತ್ರಿಗಳು ಸೂಚನೆ ನೀಡಿದರು.

ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಾಗಿ ಕೇಂದ್ರದಿಂದ ಬರಬೇಕಾಗಿದ್ದ ಎರಡು ವರ್ಷದ ಪಾಲು 10000 ಕೋಟಿಯಷ್ಟು ಬಾಕಿ ಉಳಿದಿದೆ. ಹೀಗೆ ಬಾಕಿ ಉಳಿಸಿಕೊಂಡಿರುವುದರಿಂದ ಬಹಳ ಸಮಸ್ಯೆ ಆಗುತ್ತಿದೆ ಎಂದು ಅಧಿಕಾರಿಗಳು ಆತಂಕ ವ್ಯಕ್ತಪಡಿಸಿದರು.

23–24ರ ಸಾಲಿನಲ್ಲಿ 7656 ಕೋಟಿ, 24–25ರ ಸಾಲಿನಲ್ಲಿ 3233 ಕೋಟಿ ಹಣವನ್ನು ಕೇಂದ್ರ ಜಲ ಜೀವನ್ ಮಿಷನ್ ಯೋಜನೆಯಲ್ಲಿ ಬಾಕಿ ಉಳಿಸಿಕೊಂಡಿದೆ ಎಂದು ಅಧಿಕಾರಿಗಳು ಅಂಕಿ ಅಂಶ ಮುಂದಿಟ್ಟರು. ಈ ವೇಳೆ, ಏಕೆ ಕೇಂದ್ರ ಸರ್ಕಾರದ ಬಳಿ ಹಣ ಇಲ್ಲವೇ, ಕುಡಿಯುವ ನೀರಿಗೆ ಹಣ ಕೊಡಲಾಗದಷ್ಟು ಕೇಂದ್ರ ದುರ್ಬಲವಾಗಿದೆಯೇ ಎಂದು ದಿಶಾ ಸಮಿತಿ ಸದಸ್ಯರಾದ ಶಾಸಕ ರಿಜ್ವಾನ್ ಅರ್ಷದ್ ಸಂಸದರ ಪ್ರಶ್ನಿಸಿದರು.

2024–25ರ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆಗಳಡಿ ರಾಜ್ಯದ ಅನುದಾನ 24960 ಕೋಟಿ ರೂಪಾಯಿಗಳು, ಕೇಂದ್ರದ ಅನುದಾನ 22758 ಕೋಟಿ ರೂಪಾಯಿಗಳಿದ್ದು ಕೇಂದ್ರದಿಂದ 18561 ಕೋಟಿ ರೂಪಾಯಿ ಮಾತ್ರ ಬಿಡುಗಡೆ ಆಗಿದೆ 4195 ಕೋಟಿ ರೂಪಾಯಿಗಳು ಬಿಡುಗಡೆ ಆಗಿರುವುದಿಲ್ಲ. ರಾಜ್ಯಕ್ಕೆ ಬರಬೇಕಾಗಿರುವ ಹಣವನ್ನು ಸರಿಯಾಗಿ ಬಿಡುಗಡೆ ಮಾಡದಿದ್ದರೆ ಹೇಗೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೇಂದ್ರ ಬಜೆಟ್‌ನಲ್ಲಿ 5360 ಕೋಟಿ ಅನುದಾನ ಘೋಷಣೆ ಆಗಿದ್ದರೂ ಒಂದು ರೂಪಾಯಿ ಕೂಡಾ ಈವರೆಗೂ ಬಿಡುಗಡೆ ಆಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಎರಡು ಬಾರಿ ನಿಯೋಗದೊಂದಿಗೆ ಭೇಟಿ ಮಾಡಿದ್ದರೂ ಪ್ರಯೋಜನವಾಗಿಲ್ಲ. ದಿಶಾ ಸಮಿತಿ ಸದಸ್ಯರು ರಾಜ್ಯಕ್ಕೆ ಕೇಂದ್ರದ ಪಾಲನ್ನು ತರುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮಾಡಬೇಕು. ರಾಜ್ಯದಲ್ಲಿ ನರೇಗಾ ಯೋಜನೆಯಡಿ ಅಕ್ರಮ ಎಸಗಿರುವ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು, ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ಬಿ–ಖಾತಾ ಅವಧಿ 3 ತಿಂಗಳು ವಿಸ್ತರಣೆ

ಬಿ–ಖಾತಾ ಪಡೆದು ಕೊಳ್ಳಲು ಸಮಯ ನೀಡಲಾಗಿತ್ತು. ರಾಜ್ಯದ ಎಲ್ಲಾ ಮಹಾನಗರಪಾಲಿಕೆಗಳು ಮತ್ತು ನಗರ ಪ್ರದೇಶಗಳಲ್ಲಿ 30 ಲಕ್ಷಕ್ಕೂ ಅಧಿಕ ಇಂತಹ ಅನಧಿಕೃತ ಕಟ್ಟಡಗಳು, ಮನೆಗಳು, ನಿವೇಶನಗಳಿವೆ ಎಂದು ಅಂದಾಜಿಸಲಾಗಿದೆ. ಸರ್ಕಾರ ಒಂದು ಬಾರಿಯ ಅವಕಾಶ ನೀಡಿದ ನಂತರ ನಾಗರಿಕರು ಉತ್ತಮ ರೀತಿಯಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸಿ ತಮ್ಮ ಆಸ್ತಿಗಳಿಗೆ ಬಿ–ಖಾತಾ ಪಡೆದುಕೊಳ್ಳುತ್ತಿದ್ದಾರೆ ಎಂದು ನಗರಾಭಿವೃದ್ಧಿ ಸಚಿವ ಬಿ.ಎಸ್.ಸುರೇಶ್ ತಿಳಿಸಿದ್ದಾರೆ.

ಎರಡು ಲಕ್ಷ ಬಿ–ಖಾತಾ ವಿತರಣೆ: ಸರ್ಕಾರ ನೀಡಿದ ಅವಕಾಶವನ್ನು ಬಳಸಿಕೊಂಡು, ಸುಮಾರು 10 ಲಕ್ಷ ಆಸ್ತಿಗಳಿಗೆ ಬಿ–ಖಾತಾ ಕೋರಿ ಅರ್ಜಿ ಸಲ್ಲಿಸಲಾಗಿದ್ದು, ಈ ಪೈಕಿ ಎರಡು ಲಕ್ಷ ಆಸ್ತಿಗಳಿಗೆ ಬಿ–ಖಾತೆಗಳನ್ನು ಈಗಾಗಲೇ ವಿತರಿಸಲಾಗಿದೆ. ಉಳಿದ ಅರ್ಜಿಗಳ ಪರಿಶೀಲನೆ ನಡೆಯುತ್ತಿದ್ದು, ಹಂತಹಂತವಾಗಿ ಬಿ–ಖಾತಾ ವಿತರಿಸಲಾಗುತ್ತಿದೆ ಎಂದು ಸಚಿವ ಬಿ.ಎಸ್.ಸುರೇಶ್ ಹೇಳಿದ್ದಾರೆ.

ಇನ್ನೂ ಮೂರು ತಿಂಗಳು ವಿಸ್ತರಣೆ: ಸರ್ಕಾರದ ಈ ನಾಗರಿಕ ಸ್ನೇಹಿ ಸೌಲಭ್ಯವನ್ನು ಇನ್ನೂ ಹೆಚ್ಚಿನ ಜನರಿಗೆ ತಲುಪಿಸಬೇಕೆಂಬ ಉದ್ದೇಶದಿಂದ ಮಹಾನಗರಪಾಲಿಕೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬಿ–ಖಾತಾ ವಿತರಣೆ ಪ್ರಕ್ರಿಯೆಯನ್ನು ಮತ್ತೆ 3 ತಿಂಗಳ ಕಾಲ ವಿಸ್ತರಣೆ ಮಾಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದ್ದಾರೆ.

ಎಸ್‌ಐ, ಚಾಲಕನಿಗೆ ತೀವ್ರ ಗಾಯ

ಬಿಳಿಗಿರಿರಂಗನ ಬೆಟ್ಟಕ್ಕೆ ತೆರಳಿದ್ದರು. ಇವರಿಗೆ ಬೆಂಗಾವಲಾಗಿದ್ದ ವಾಹನ ಬೆಟ್ಟದ ಅರಣ್ಯ ಪ್ರದೇಶದ ಜಡೇಸ್ವಾಮಿ ದೇಗುಲದ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಉರುಳಿ ಬಿದ್ದಿದೆ. ಅದರಲ್ಲಿದ್ದ ಪಿಎಸ್‌ಐ ಆಕಾಶ್ ಹಾಗೂ ಚಾಲಕ ಪ್ರತಾಪ್‌ಗೆ ತೀವ್ರ ಗಾಯಗಳಾಗಿವೆ. ಕೂಡಲೇ ಹಿಂಬದಿ ಬರುತ್ತಿದ್ದ ಇನ್ನೊಂದು ವಾಹನದಲ್ಲಿ ಇವರನ್ನು ಯಳಂದೂರು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿ, ಅಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಚಾಮರಾಜನಗರದ ಜಿಲ್ಲಾಸ್ಪತ್ರೆಗೆ ದಾಖಲಿಸ ಲಾಯಿತು. ಬಳಿಕ ಮೈಸೂರಿನ ಖಾಸಗಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ ಎಂದು ಜಿಲ್ಲಾ ಎಸ್ಪಿ ಬಿ.ಟಿ. ಕವಿತಾ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಪಾಕಿಸ್ತಾನ ವಿರುದ್ಧ ಭಾರತಕ್ಕೆ ಮತ್ತೊಂದು ರಾಜತಾಂತ್ರಿಕ ಜಯ

ಬಂಧಿತ ಬಿಎಸ್‌ಎಫ್ ಯೋಧ ಕೊನೆಗೂ ಬಿಡುಗಡೆ

ನವದೆಹಲಿ, ಮೇ 14–ಪಾಕಿಸ್ತಾನ ವಿರುದ್ಧ ಭಾರತಕ್ಕೆ ಮತ್ತೊಂದು ರಾಜತಾಂತ್ರಿಕ ಜಯ ಲಭಿಸಿದೆ.

ಇತ್ತೀಚೆಗೆ ಅಜಾಗರೂಕತೆಯಿಂದ ಆಕಸ್ಮಿಕವಾಗಿ ಪಾಕಿಸ್ತಾನ ಗಡಿ ಪ್ರವೇಶ ಮಾಡಿದ್ದ ಬಿಎಸ್‌ಎಫ್ ಯೋಧ ಕೊನೆಗೂ ಬುಧವಾರ ಬಿಡುಗಡೆಯಾಗಿದ್ದಾನೆ. ಈ ಹಿಂದೆ ಅಂದರೆ ಏಪ್ರಿಲ್‌ನಲ್ಲಿ ಭಾರತ–ಪಾಕ್ ಗಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಅಜಾಗರೂಕತೆಯಿಂದ ಪಾಕಿಸ್ತಾನ ಗಡಿ ಪ್ರವೇಶ ಮಾಡಿದ್ದ ಭಾರತೀಯ ಗಡಿ ಭದ್ರತಾ ಪಡೆಯ ಯೋಧ ಪೂರ್ಣಂ ಕುಮಾರ್ ಶಾ ಅವರನ್ನು ಪಾಕಿಸ್ತಾನ ಸೇನೆ ಬಿಡುಗಡೆ ಮಾಡಿದೆ. ಪೂರ್ಣಮ್‌ಕುಮಾರ್ ಶಾ ಅವರನ್ನು ಅಮೃತಸರದ ಅಟ್ಟಾರಿಯಲ್ಲಿರುವ ಜಂಟಿ ಚೆಕ್‌ಪೋಸ್ಟ್ ಮೂಲಕ ಬೆಳಗ್ಗೆ 10.30ರ ಸುಮಾರಿಗೆ ಹಸ್ತಾಂತರಿಸಲಾಯಿತು ಎಂದು ಬಿಎಸ್‌ಎಫ್ ತಿಳಿಸಿದೆ. ಏಪ್ರಿಲ್ 23ರಿಂದ ಪಾಕಿಸ್ತಾನ ರೇಂಜರ್‌ಗಳ ವಶದಲ್ಲಿದ್ದ ಜವಾನ್ ಪಿಕೆ ಶಾ ಅವರನ್ನು



ಭಾರತಕ್ಕೆ ಹಸ್ತಾಂತರಿಸಲಾಗಿದೆ. ಬಿಎಸ್‌ಎಫ್ ಅಧಿಕಾರಿಗಳ ಪ್ರಕಾರ ಫಿರೋಜ್‌ಪುರ ಸೆಕ್ಟರ್‌ನಲ್ಲಿ ಆಕಸ್ಮಿಕವಾಗಿ ಎಲ್‌ಒಸಿಯ ಶೂನ್ಯ ರೇಖೆಯನ್ನು ದಾಟಿದ ನಂತರ ಏ.23ರಂದು ಪಿಕೆ ಶಾ ಅವರನ್ನು ಪಾಕಿಸ್ತಾನ ರೇಂಜರ್‌ಗಳು ಬಂಧಿಸಿದ್ದರು.

ಭಾರತದ 52ನೇ ಸಿಜೆಐ ಆಗಿ ನ್ಯಾಯಮೂರ್ತಿ ಬಿ.ಆರ್.ಗವಾಯಿ ಪ್ರಮಾಣ ವಚನ ಸ್ವೀಕಾರ



ನವದೆಹಲಿಯ ರಾಷ್ಟ್ರಪತಿ ಭವನದ ಗಣತಂತ್ರ ಮಂಟಪದಲ್ಲಿ ನಡೆದ ಸರಳ ಸಮಾರಂಭದಲ್ಲಿ ಸುಪ್ರೀಂಕೋರ್ಟ್‌ನ 52ನೇ ಮುಖ್ಯ ನ್ಯಾಯಮೂರ್ತಿಗಳಾಗಿ ನ್ಯಾ. ಭೂಷಣ್ ರಾಮಕೃಷ್ಣ ಗವಾಯಿ ಅವರು ಪ್ರಮಾಣ ವಚನ ಸ್ವೀಕರಿಸಿದರು. ಇವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಮಾಣ ವಚನ ಬೋಧಿಸಿದರು.

ನವದೆಹಲಿ, ಮೇ 14– ಸುಪ್ರೀಂ ಕೋರ್ಟ್‌ನ 52ನೇ ಮುಖ್ಯ ನ್ಯಾಯಮೂರ್ತಿಗಳಾಗಿ ನ್ಯಾಯಮೂರ್ತಿ ಭೂಷಣ್ ರಾಮಕೃಷ್ಣ ಗವಾಯಿ (64) ಅವರು ಬುಧವಾರ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ರಾಷ್ಟ್ರಪತಿ ಭವನದ ಗಣತಂತ್ರ ಮಂಟಪದಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮುಖ್ಯ ನ್ಯಾಯಮೂರ್ತಿಗಳಿಗೆ ಪ್ರಮಾಣ ವಚನ ಬೋಧಿಸಿದರು.

ರಾಷ್ಟ್ರಪತಿ ಭವನದಲ್ಲಿ ಪ್ರಮಾಣ ವಚನ ಸ್ವೀಕರಿಸಿದ ನಂತರ ಸುಪ್ರೀಂಕೋರ್ಟ್‌ಗೆ ತಲುಪಿದ ನ್ಯಾ.ಬಿ.ಆರ್.ಗವಾಯಿ ಅವರು ಮಹಾತ್ಮ ಗಾಂಧಿ ಮತ್ತು ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗಳಿಗೆ ಪುಷ್ಪ ನಮನ ಸಲ್ಲಿಸಿದರು. 65 ವರ್ಷವಾದ ನಂತರ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ನಿವೃತ್ತರಾದ ಹಿನ್ನೆಲೆಯಲ್ಲಿ ನ್ಯಾ.ಗವಾಯಿ ಅಧಿಕಾರ ವಹಿಸಿಕೊಂಡರು.

ಮೇ 24, 2019ರಂದು ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರಾಗಿ ಬಡ್ತಿ ಪಡೆದ ನ್ಯಾಯಮೂರ್ತಿ ಗವಾಯಿ ಅವರು ಮುಂದಿನ ನವೆಂಬರ್ 23ರಂದು ಅಧಿಕಾರದಿಂದ ಕೆಳಗಿಳಿಯುತ್ತಾರೆ.

ನ್ಯಾಯಮೂರ್ತಿ ಗವಾಯಿ ಅವರು ಆಗಸ್ಟ್ 1992ರಿಂದ ಜುಲೈ 1993 ರವರೆಗೆ ಬಾಂಬೆ ಹೈಕೋರ್ಟ್‌ನ ನಾಗ್ಪುರ ಪೀಠದಲ್ಲಿ ಸಹಾಯಕ ಸರ್ಕಾರಿ ವಕೀಲ ಮತ್ತು ಹೆಚ್ಚುವರಿ ಸಾರ್ವಜನಿಕ ಅಭಿಯೋಜಕರಾಗಿ ಸೇವೆ ಸಲ್ಲಿಸಿದರು. ನಂತರ ಅವರನ್ನು ಜನವರಿ 17, 2000 ರಂದು ನಾಗ್ಪುರ ಪೀಠಕ್ಕೆ ಸರ್ಕಾರಿ ವಕೀಲ ಮತ್ತು ಸಾರ್ವಜನಿಕ ಅಭಿಯೋಜಕರಾಗಿ ನೇಮಿಸಲಾಯಿತು. ಕಳೆದ ಆರು ವರ್ಷಗಳಲ್ಲಿ ಅವರು ಸಾಂವಿಧಾನಿಕ ಮತ್ತು ಆಡಳಿತಾತ್ಮಕ ಕಾನೂನು, ನಾಗರಿಕ ಮತ್ತು ಕ್ರಿಮಿನಲ್ ಕಾನೂನು, ವಾಣಿಜ್ಯ ವಿವಾದಗಳು, ಮಧ್ಯಸ್ಥಿಕೆ, ವಿದ್ಯುತ್ ಕಾನೂನು, ಶಿಕ್ಷಣ ವಿಷಯಗಳು ಮತ್ತು ಪರಿಸರ ಕಾನೂನು ಸೇರಿದಂತೆ ವ್ಯಾಪಕ ಶ್ರೇಣಿಯ ವಿಷಯಗಳನ್ನು ನಿರ್ವಹಿಸುವ ಸುಮಾರು 700 ಪೀಠಗಳ ಭಾಗವಾಗಿದ್ದಾರೆ.

ನ್ಯಾಯಮೂರ್ತಿ ಗವಾಯಿ ಅವರು ಉಲಾನ್‌ಬಾತರ್ (ಮಂಗೋಲಿಯಾ), ನ್ಯೂಯಾರ್ಕ್ (ಯುಎಸ್‌ಎ), ಕಾರ್ಡಿಫ್ (ಯುಕೆ) ಮತ್ತು ನೈರೋಬಿ (ಕೀನ್ಯಾ)ಗಳಲ್ಲಿ ವಿವಿಧ ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ. ಅವರು ಕೊಲಂಬಿಯಾ ವಿಶ್ವವಿದ್ಯಾಲಯ ಮತ್ತು ಹಾರ್ವರ್ಡ್ ವಿಶ್ವವಿದ್ಯಾಲಯ ಸೇರಿದಂತೆ ವಿವಿಧ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳಲ್ಲಿ ಸಾಂವಿಧಾನಿಕ ಮತ್ತು ಪರಿಸರ ಸಮಸ್ಯೆಗಳು ಸೇರಿದಂತೆ ಹಲವಾರು ವಿಷಯಗಳ ಕುರಿತು ಉಪನ್ಯಾಸಗಳನ್ನು ನೀಡಿದ್ದಾರೆ.

ಈಗ ಶವಕ್ಕೂ ಶುಲ್ಕ!: ಅಂತ್ಯಕ್ರಿಯೆಗೆ 500 ರೂ. ನೀಡಲೇಬೇಕು!!

ಮೈಸೂರು ನಗರಪಾಲಿಕೆ ತೆರಿಗೆ ಪಟ್ಟಿ ಸೇರಿದ ಚಿತಾಗಾರ!!!

ಮೈಸೂರು, ಮೇ 14(ಆರ್‌ಕೆ)– ಮೈಸೂರು ಮಹಾನಗರ ಪಾಲಿಕೆ, ಸಂಪನ್ಮೂಲ ಕ್ರೋಢೀಕರಣಕ್ಕೆ ಶವಗಳಿಂದಲೂ ಶುಲ್ಕ ವಸೂಲಿಗಿಳಿದಿದೆ. ತನ್ನ ವ್ಯಾಪ್ತಿಯ ಅನಿಲ ಚಿತಾಗಾರಗಳಲ್ಲಿ ಅಂತ್ಯಕ್ರಿಯೆಗೆ 500 ರೂ. ಶುಲ್ಕ ವಿಧಿಸಿದೆ. ಈ ಮೂಲಕ ಆರ್ಥಿಕ ಸಂಕಷ್ಟದಲ್ಲಿದ್ದೇನೆ ಎಂದು ಸಾರಿ... ಸಾರಿ ಹೇಳುತ್ತಿರುವಂತಿದೆ.

ಪಾಲಿಕೆಯ ಈ ಕ್ರಮಕ್ಕೆ ಮೈಸೂರು ನಾಗರಿಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದು, ತಕ್ಷಣವೇ ಈ ಶುಲ್ಕವನ್ನು ರದ್ದುಪಡಿಸಬೇಕೆಂದು ಒತ್ತಾಯಿಸಿದ್ದಾರೆ.

2024ರ ಸೆಪ್ಟೆಂಬರ್ 27ರಂದು ಅಧಿಕೃತ ಜ್ಞಾಪನ ಹೊರಡಿಸಿರುವ ಮೈಸೂರು ಮಹಾನಗರಪಾಲಿಕೆ ಜನನ ಮತ್ತು ಮರಣ ಶಾಖೆ ಅಧಿಕಾರಿಗಳು, ಪಾಲಿಕೆ ವತಿಯಿಂದ ನಿರ್ವಹಣೆ ಮಾಡಲಾಗುತ್ತಿರುವ ಸ್ಮಶಾನಗಳಲ್ಲಿ ಶವ ಸಂಸ್ಕಾರಕ್ಕೆ ಅನಿಲ ಮತ್ತು ವಿದ್ಯುತ್ ಚಿತಾಗಾರಗಳಲ್ಲಿ 500 ರೂ. ಶುಲ್ಕ ನಿಗದಿ ಮಾಡಿದ್ದಾರೆ.

ಅದರಂತೆ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ಸತ್ತವರಿಗೆ ಮೋಕ್ಷ ಕಾಣಿಸುವಲ್ಲಿ ಮೈಸೂರಿನ ಇತಿಹಾಸದಲ್ಲೇ ಮೊದಲ ಬಾರಿ ಪಾಲಿಕೆಯು ಶುಲ್ಕ ವಿಧಿಸಿರುವುದಕ್ಕೆ ನಾಗರಿಕರು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಅನಿಲ ಮತ್ತು ವಿದ್ಯುತ್ ಚಿತಾಗಾರಗಳ ನಿರ್ವಹಣೆಗೆ ತಗಲುವ ವೆಚ್ಚ ಭರಿಸಿ ಆರ್ಥಿಕ ಸಂಪನ್ಮೂಲ ಕ್ರೋಢೀಕರಣಕ್ಕೆ ಪಾಲಿಕೆಯು ಬಡವರು, ಮಧ್ಯಮ ವರ್ಗದ ಜನರ ಸಂಕಷ್ಟ ಪರಿಸ್ಥಿತಿಯನ್ನು ಶುಲ್ಕ ವಸೂಲಿಗೆ ಸದವಕಾಶ ಮಾಡಿಕೊಂಡಿದೆ ಎಂದು ಸಾರ್ವಜನಿಕರು ತೀವ್ರ ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಆದಾಗ್ಯೂ ತೆರಿಗೆದಾರರು ಕೆಲ ಸರ್ಕಾರಿ ಸೇವೆ ಪಡೆಯಲು ಮೈಸೂರು ಮಹಾನಗರಪಾಲಿಕೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ಕ್ಕೆ ಆಸ್ತಿ ತೆರಿಗೆ, ನೀರಿನ ತೆರಿಗೆ, ವ್ಯಾಪಾರ ಪರವಾನಗಿ ಶುಲ್ಕ, ದಹನ ಸೆಸ್, ಕೆರೆ, ಪಾರ್ಕ್ ನಿರ್ವಹಣೆ ಸೇರಿದಂತೆ ವಿವಿಧ ಶುಲ್ಕಗಳನ್ನು ಪಾವತಿಸುತ್ತಾ ಬರುತ್ತಿದ್ದಾರೆ.



> “ಅನಿಲ ಚಿತಾಗಾರಗಳಲ್ಲಿ ಅಂತ್ಯಕ್ರಿಯೆಗೆ ಶುಲ್ಕ ವಸೂಲಿ ಮಾಡಬೇಕೆಂದು ಸರ್ಕಾರ ಆದೇಶಿಸಿರುವುದರಿಂದ ನಾವು ಮೈಸೂರಿನ ನಾಲ್ಕು ಚಿತಾಗಾರಗಳಲ್ಲಿ ಶವ ಸಂಸ್ಕಾರಕ್ಕೆ ಶುಲ್ಕ ವಿಧಿಸಿ, ಅಧಿಸೂಚನೆ ಹೊರಡಿಸಿದ್ದೇವೆ.
>
> –ಡಾ.ವೆಂಕಟೇಶ್, ಹಿರಿಯ ವೈದ್ಯಾಧಿಕಾರಿ, ಮೈಸೂರು ನಗರಪಾಲಿಕೆ

ಸಾವಿನ ದುಃಖದಲ್ಲಿರುವವರಿಂದಲೂ ಶುಲ್ಕ ವಸೂಲಿ ಮಾಡುತ್ತಿರುವುದು ಸ್ಪಷ್ಟ ಮಾನವ ಹಕ್ಕು ಉಲ್ಲಂಘನೆಯಾಗಿದ್ದು, ಈ ಆದೇಶವನ್ನು ಸರ್ಕಾರ ಹೊರಡಿಸಿಲ್ಲ. ನಗರಪಾಲಿಕೆಂಯೇ ನಿರ್ಧಾರ ಕೈಗೊಂಡು ಅನುಷ್ಠಾನ ಮಾಡುತ್ತಿರುವುದು ಪಾಲಿಕೆಯು ತನ್ನ ತೆರಿಗೆದಾರರಿಗೆ ಮಾಡಿದ ಅವಮಾನ ಎಂದು ಸಾರ್ವಜನಿಕರು ದೂರಿದ್ದಾರೆ.

ಸ್ಮಶಾನಗಳಲ್ಲಿ ಉಚಿತ ಸೇವೆ ನೀಡಬೇಕು. ಅದರ ಬದಲು ಅಂತ್ಯಕ್ರಿಯೆಗೆ ಹಣ ವಸೂಲಿ ಮಾಡುತ್ತಿರುವುದು ಕಾನೂನು ಉಲ್ಲಂಘನೆ ಮಾಡಿದಂತೆ. ಅಧಿಕೃತ ಶುಲ್ಕ ಪಾವತಿಸುವ ಜೊತೆಗೆ ಸ್ಮಶಾನಗಳಲ್ಲಿ ಅಂತ್ಯಕ್ರಿಯೆಗೆ 1 ಸಾವಿರದಿಂದ 5000 ರೂ. ಲಂಚ ಕೊಡಬೇಕಾಗಿದ್ದು, ತಕ್ಷಣ ಈ ನಿರ್ಧಾರ ಕೈಬಿಡಬೇಕೆಂದು ಜನರು ಒತ್ತಾಯಿಸಿದ್ದಾರೆ.

ಅಗತ್ಯ ಬಿದ್ದರೆ ಯೋಧರೊಡನೆ ಸೇರಿ ನಾವೂ ಹೋರಾಟ ಮಾಡುತ್ತೇವೆ

ಮೈಸೂರಲ್ಲಿ ಮಠಾಧೀಶರ ಒಕ್ಕೊರಲಿನ ಘೋಷಣೆ



ಮೈಸೂರಿನಲ್ಲಿ ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ ಮಾತನಾಡಿದರು.

ಮೈಸೂರು, ಮೇ14(ಬಿಎಲ್‌ಯು)– ಅಗತ್ಯ ಬಿದ್ದರೆ ಮಠಗಳನ್ನು ತ್ಯಾಗ ಮಾಡಿ ನಾವು ಕೂಡ ಯೋಧರ ಜೊತೆ ಸೇರಿ ಹೋರಾಟ ಮಾಡುತ್ತೇವೆ ಎಂದು ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ ಘೋಷಿಸಿದ್ದಾರೆ.

ನಗರದ ಅಗ್ರಹಾರದ ನಟರಾಜ ಕಲ್ಯಾಣ ಮಂದಿರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಯೋಧರು ಪ್ರಾಣದ ಹಂಗು ತೊರೆದು ಗಡಿಯಲ್ಲಿ ಹೋರಾಟ ಮಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ನಾವೂ ನಮ್ಮ ಯೋಧರಿಗೆ ಬೆನ್ನೆಲುಬಾಗಿ ನಿಲ್ಲಬೇಕು. ಈ ಹಿನ್ನೆಲೆಯಲ್ಲಿ ಅಗತ್ಯ ಬಿದ್ದರೆ ನಾವು ಕೂಡ ಮಠ ತೊರೆದು ಯೋಧರ ಜೊತೆ ಸೇರಿ ಹೋರಾಟ ಮಾಡುತ್ತೇವೆ ಎಂದು ಹೇಳಿದರು.

ಎಂ.ಎಲ್.ಹುಂಡಿಯ ಬಸವೇಶ್ವರ ಮಠದ ಗೌರಿಶಂಕರ ಸ್ವಾಮೀಜಿ ಮಾತನಾಡಿ, ಪ್ರಕೃತಿಯ ಸೊಬಗನ್ನು ನೋಡಲು ಕಾಶ್ಮೀರಕ್ಕೆ ಹೋದ ಪ್ರವಾಸಿಗರನ್ನು ಪಹಲ್ಗಾಮ್‌ನಲ್ಲಿ ಉಗ್ರರು ಭೀಕರವಾಗಿ ಹತ್ಯೆ ಮಾಡಿದರು. ಇದಕ್ಕೆ ಕಾರಣವಾದ ಪಾಕಿಸ್ತಾನಕ್ಕೆ ನಮ್ಮ ಯೋಧರು ತಕ್ಕ ಪಾಠ ಕಲಿಸಿದ್ದಾರೆ ಎಂದರು.

ಯೋಧರ ಈ ಕಾರ್ಯಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ. ದೇಶದ ನೆಲ, ಜಲದ ವಿಚಾರ ಬಂದಾಗ ಮಠಾಧೀಶರು ಕೈಕಟ್ಟಿ ಕೂರುವುದಿಲ್ಲ ಎಂದು ಶ್ರೀಗಳು ತಿಳಿಸಿದರು.

ಈ ವೇಳೆ ಮಾತನಾಡಿದ ಹೊಸ ಮಠದ ವಿಶೇಷ ಆಡಳಿತಾಧಿಕಾರಿ ಡಾ.ಶಿವರಾಜಪ್ಪ, ಭಾರತ ಸರ್ವರನ್ನು ಪ್ರೀತಿ, ವಿಶ್ವಾಸದಿಂದ ನೋಡುತ್ತದೆ. ಆದರೂ ಪಾಕಿಸ್ತಾನ ಸಾವಿರಾರು ಅಮಾಯಕರನ್ನು ಹತ್ಯೆ ಮಾಡುತ್ತಾ ಬಂದಿದೆ. ಪಾಕಿಸ್ತಾನದ ಈ ಕೃತ್ಯ ಮಿತಿ ಮೀರಿದಾಗ ಭಾರತ ದಾಳಿ ಮಾಡಿ ತಕ್ಕಪಾಠ ಕಲಿಸಿದೆ ಎಂದರು.

ನಮ್ಮ ಸೈನಿಕರ ಹೋರಾಟಕ್ಕೆ ನಮ್ಮೆಲ್ಲರ ಸಂಪೂರ್ಣ ಬೆಂಬಲವಿದೆ. ಪಾಕಿಸ್ತಾನದ ಉಗ್ರರನ್ನು ಮಟ್ಟ ಹಾಕಲು ಕೇಂದ್ರ ಸರ್ಕಾರ ತೆಗೆದುಕೊಳ್ಳುವ ಯಾವುದೇ ತೀರ್ಮಾನಕ್ಕೆ ನಮ್ಮ ಬೆಂಬಲವಿದೆ ಎಂದರು. ವೀರಶೈವ ಸಂಘ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಶಿವಪ್ರಭುಸ್ವಾಮಿ, ನಾಗರಾಜು ಇದ್ದರು.

ವಿ.ರಾಮಸ್ವಾಮಿ ಹುಟ್ಟುಹಬ್ಬ ಆಚರಣೆ



ದಮನಿತರ ನಾಯಕ ದಿವಂಗತ ವಿ.ಶ್ರೀನಿವಾಸ್‌ಪ್ರಸಾದ್ ಅವರ ಸಹೋದರ ವಿ.ರಾಮಸ್ವಾಮಿಯವರ 70ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಈ ವೇಳೆ ದಸಂಸ ಜಿಲ್ಲಾ ಸಂಚಾಲಕರಾದ ನಿಂಗರಾಜ್ ಮಲ್ಲಾಡಿ, ರಾಮಸ್ವಾಮಿ ಅವರ ಪತ್ನಿ ಶ್ರೀಮತಿ ಶೈಲಜಾ, ದಲಿತ ಹಿರಿಯ ಮುಖಂಡರಾದ ಬಸವಲಿಂಗಯ್ಯ, ದಸಂಸದ ಹೆಚ್.ಬಿ.ದಿವಾಕರ್, ಚುಂಚನಕಟ್ಟೆ ಮಂಜು ಇತರರಿದ್ದರು.

ಸಿಬಿಎಸ್‌ಇ 10ನೇ ತರಗತಿಯಲ್ಲಿ ಭರತ್‌ಕುಮಾರ್‌ಗೆ ಶೇ.93 ಅಂಕ



ಮೈಸೂರು, ಮೇ 14–ಸಿಬಿಎಸ್‌ಇ ಹತ್ತನೇ ತರಗತಿ ಪರೀಕ್ಷೆಯಲ್ಲಿ ಮೈಸೂರು ಮಾನಸಗಂಗೋತ್ರಿಯ ಆರ್‌ಐಇಯ ಡೆಮಾನ್‌ಸ್ಟ್ರೇಷನ್ ಶಾಲೆಯ ವಿದ್ಯಾರ್ಥಿ ಎಂ.ಭರತ್‌ಕುಮಾರ್ ಶೇ.93 ಅಂಕಗಳೊಂದಿಗೆ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ. ವಿಜ್ಞಾನ 96, ಗಣಿತ 93, ಸಾಮಾಜಿಕ ವಿಜ್ಞಾನ 95, ಕನ್ನಡ 90 ಹಾಗೂ ಇಂಗ್ಲಿಷ್ 90 ಅಂಕ ಪಡೆದಿದ್ದಾನೆ. ಈತ ಪತ್ರಿಕಾ ವಿತರಕ ಕೆ.ಎಂ.ಮಧುಕುಮಾರ್ ಹಾಗೂ ಟಿ.ಎಂ.ಲೀನಾ ದಂಪತಿ ಪುತ್ರ.

ಇಂದಿನಿಂದ ಪರೀಕ್ಷಾ ಕೇಂದ್ರಗಳ ಸುತ್ತಲೂ ನಿಷೇಧಾಜ್ಞೆ ಜಾರಿ

ಮೈಸೂರು, ಮೇ 14– ಮೇ 15ರಿಂದ 27ರವರೆಗೆ ಮೈಸೂರು ನಗರದ ಮಹಾರಾಣಿ ಟಿ.ಟಿ.ಐ. ಪ್ರಶಿಕ್ಷಣ ಸಂಸ್ಥೆ, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು ಇಲ್ಲಿ ಡಿ.ಇಎಲ್.ಇಡಿ ಮುಖ್ಯ ಪರೀಕ್ಷೆಗಳು ನಡೆಯಲಿದ್ದು, ಸದರಿ ಪರೀಕ್ಷೆಯನ್ನು ಸುಸೂತ್ರವಾಗಿ ನಡೆಸುವ ಉದ್ದೇಶದಿಂದ ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023 ಸೆಕ್ಷನ್ 163 ರೀತ್ಯ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ವ್ಯಾಪ್ತಿಯ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ಈ ಪ್ರದೇಶದಲ್ಲಿ ಪರೀಕ್ಷಾರ್ಥಿಗಳು, ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ ಇತರೆ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಹಾಗೂ ಪರೀಕ್ಷೆ ಕೇಂದ್ರಗಳ ಸುತ್ತಮುತ್ತಲಿನ ಜೆರಾಕ್ಸ್, ಬ್ರೌಸಿಂಗ್ ಸೆಂಟರ್‌ಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಆದೇಶಿಸಲಾಗಿದೆ.

'ಮರಣ ಮೃದಂಗ' ನಾಟಕ ಪ್ರದರ್ಶನ

ಮೈಸೂರು, ಮೇ 14– ಮೈಸೂರಿನ ಅಭಿಯಂತರರು ಸಂಸ್ಥೆ ವತಿಯಿಂದ ರಂಗ ನಿರ್ದೇಶಕ ರಾಜೇಂದ್ರ ಕಾರಂತ್ ಅವರು ರಚಿಸಿ, ನಿರ್ದೇಶಿಸಿ ಹಾಗೂ ನಟನೆ ಮಾಡಿರುವ ರಾಜಕೀಯ ವಿಡಂಬನಾತ್ಮಕ ಮತ್ತು ಯಶಸ್ವಿ ನಾಟಕ 'ಮರಣ ಮೃದಂಗ' ನಾಟಕದ ಯಶಸ್ವಿ 25ನೇ ಪ್ರದರ್ಶನ ಮೇ 18ರಂದು ಸಂಜೆ 7 ಗಂಟೆಗೆ ಕಿರು ರಂಗಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ ಎಂದು ಪ್ರಕಟಣೆ ತಿಳಿಸಿದೆ.

ಹದಿಹರೆಯದವರ ಮನಸ್ಸು ಚಂಚಲತೆಯಿಂದ ಇರುತ್ತದೆ

ಮೈಸೂರು ವಿಭಾಗದ ಆರೋಗ್ಯ–ಕುಟುಂಬ ಕಲ್ಯಾಣ ಸೇವೆಗಳ ಉಪ ನಿರ್ದೇಶಕಿ ಡಾ.ಮಲ್ಲಿಕಾ ಅಭಿಮತ



ಅರಿವು ಮತ್ತು ಜಾಗೃತಿ ಕಾರ್ಯಕ್ರಮದಲ್ಲಿ ಡಾ.ಮಲ್ಲಿಕಾ ಮಾತನಾಡಿದರು.

ಮೈಸೂರು, ಮೇ 14– ಹದಿಹರೆಯದ ವಯಸ್ಸಿನಲ್ಲಿ ಮನಸ್ಸು ಚಂಚಲತೆಯಿಂದ ಕೂಡಿರುತ್ತದೆ. ಯಾವುದು ಸರಿ–ತಪ್ಪು ಎಂದು ನಿರ್ಧಾರ ಮಾಡುವುದು ಕಷ್ಟಸಾಧ್ಯ. ಈ ವಯಸ್ಸಿನಲ್ಲಿ ಮಾನಸಿಕ, ದೈಹಿಕವಾಗಿ ಸಾಕಷ್ಟು ಬದಲಾವಣೆಗಳಾಗುತ್ತವೆ. ಹೆಣ್ಣು ಮಕ್ಕಳು ಮುಖ್ಯವಾಗಿ ಇದರ ಬಗ್ಗೆ ಜಾಗೃತರಾಗಿರಬೇಕು ಎಂದು ಮೈಸೂರು ವಿಭಾಗದ ಆರೋಗ್ಯ–ಕುಟುಂಬ ಕಲ್ಯಾಣ ಸೇವೆಗಳ ಉಪ ನಿರ್ದೇಶಕಿ ಡಾ.ಮಲ್ಲಿಕಾ ತಿಳಿಸಿದರು.

ಹಾರ್ಟ್ ಸಂಸ್ಥೆಯು ನಟರಾಜ ಶಿಕ್ಷಣ ಸಂಸ್ಥೆ ಮೈಸೂರು ಇವರ ಸಹಯೋಗದೊಂದಿಗೆ ಶಿಕ್ಷಣ ಸಂಸ್ಥೆಗಳ ಆವರಣದ ಸಭಾಂಗಣದಲ್ಲಿ ಹದಿಹರೆಯದ ಹೆಣ್ಣು ಮಕ್ಕಳಿಗೆ ಆರೋಗ್ಯದ ಅರಿವು, ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಹದಿಹರೆಯದವರಲ್ಲಿ ಹಸಿರು ತರಕಾರಿ, ಮೊಳಕೆ ಕಾಳುಗಳು, ಸಿರಿಧಾನ್ಯಗಳು, ಮೊಟ್ಟೆ, ಹೆಚ್ಚು ಪೌಷ್ಟಿಕಾಂಶ ಇರುವ ಆಹಾರಗಳನ್ನು ಸೇವಿಸಬೇಕು. ಋತುಮತಿಯಾದ ಹೆಣ್ಣು ಮಕ್ಕಳಲ್ಲಿ ಮುಟ್ಟು ಪ್ರಾರಂಭವಾಗುವುದರಿಂದ ಕನಿಷ್ಠ 10ರಿಂದ 12 ಗ್ರಾಂ ಹಿಮೋಗ್ಲೋಬಿನ್ ಇರಬೇಕು. ಮುಟ್ಟು ರಕ್ತಸ್ರಾವ ಕೆಲವರಲ್ಲಿ 3 ದಿನ, 5 ದಿನ ಇರುತ್ತದೆ. ಈ ಸಮಯದಲ್ಲಿ ಸ್ವಚ್ಛತೆಗೆ ಹೆಚ್ಚಿನ ಒತ್ತನ್ನು ಕೊಡಬೇಕು. ಪ್ರತಿದಿನ 4ರಿಂದ 5 ಬಾರಿ ಪ್ಯಾಡ್ ಅಥವಾ ಕಾಟನ್ ಬಟ್ಟೆಗಳನ್ನು ಬದಲಾಯಿಸಬೇಕು. ಶೌಚಾಲಯ ಮತ್ತು ಎಲ್ಲೆಂದರಲ್ಲಿ ಬಿಸಾಡಬಾರದು. ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು. ಈ ಸಮಯದಲ್ಲಿ ಸ್ವಚ್ಛತೆ ಬಗ್ಗೆ ಗಮನ ವಹಿಸದಿದ್ದರೆ ಮುಂದೆ ಸೋಂಕುಗಳು ಹರಡುವ ಸಾಧ್ಯತೆ ಇರುತ್ತದೆ. ಬಿಳಿ ಬಟ್ಟೆ ಸಮಸ್ಯೆಯನ್ನು ಹೇಳಿಕೊಳ್ಳಲು, ವೈದ್ಯರಿಗೆ ತೋರಿಸಲು ಹಿಂಜರಿಯುತ್ತಾರೆ. ನಿರ್ಲಕ್ಷ್ಯ ವಹಿಸಿದರೆ ಗರ್ಭಕಂಠ ಕ್ಯಾನ್ಸರ್ ಕೂಡ ಆಗಬಹುದು. ಇತ್ತೀಚಿಗೆ ಮಹಿಳೆಯರಲ್ಲಿ ಗರ್ಭಕೋಶ ಕ್ಯಾನ್ಸರ್, ಗರ್ಭಕಂಠ ಕ್ಯಾನ್ಸರ್‌ನಿಂದ ಬಳಲುವವರ ಸಂಖ್ಯೆ ಹೆಚ್ಚಾಗುತ್ತಿದೆ. ಮುಂದೆ ಮದುವೆ ಆದ ನಂತರ ಬಂಜೆತನಕ್ಕೆ ಕಾರಣವಾಗಬಹುದು ಎಂದರು.

ನಟರಾಜ ಶಿಕ್ಷಣ ಸಂಸ್ಥೆಯ ವಿಶೇಷ ಅಧಿಕಾರಿ ಡಾ.ಶಿವರಾಜಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸುಮಾರು 120 ಹೆಣ್ಣು ಮಕ್ಕಳು ಸಾವಧಾನದಿಂದ ಆಲಿಸಿದ್ದು ವಿಶೇಷವಾಗಿತ್ತು. ಕೊನೆಯಲ್ಲಿ ಮಕ್ಕಳು ತಮ್ಮಲ್ಲಿ ಇದ್ದಂತಹ ಗೊಂದಲಗಳಿಗೆ ಪ್ರಶ್ನೆ ಕೇಳುವ ಮೂಲಕ ಪರಿಹಾರ ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಹಾರ್ಟ್ ಸಂಸ್ಥೆ ಸಂಯೋಜಕ ಶಿವಲಿಂಗ, ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು ಉಪಸ್ಥಿತರಿದ್ದರು.

ಮೈಸೂರಲ್ಲಿ ಜೈವಿಕ, ಇಂಧನ ಕಾರ್ಯ ಯೋಜನೆಗಳ ಪ್ರಗತಿ ಪರಿಶೀಲನೆ

ಜೈವಿಕ ಇಂಧನ ಕ್ಷೇತ್ರದ ಅಭಿವೃದ್ಧಿ, ಹೂಡಿಕೆದಾರರ ಆಕರ್ಷಣೆ, ಮೂಲಸೌಕರ್ಯಗಳು, ರಿಯಾಯಿತಿ, ಪ್ರೋತ್ಸಾಹಧನ ಕುರಿತು ಚರ್ಚೆ, ಮಾಹಿತಿ ಸಂಗ್ರಹ



ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಈ.ಸುಧೀಂದ್ರ ಮೈಸೂರಿನ ಜೈವಿಕ ಇಂಧನ ಸಂಶೋಧನೆ, ಮಾಹಿತಿ, ಪ್ರಾತ್ಯಕ್ಷಿಕೆ ಕೇಂದ್ರ, ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಜಿಲ್ಲೆಯಲ್ಲಿನ ಜೈವಿಕ ಇಂಧನ ಕಾರ್ಯ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿದರು.

ಮೈಸೂರು, ಮೇ14(ಜಿಎ)–ಮೈಸೂರಿನ ಜೈವಿಕ ಇಂಧನ ಸಂಶೋಧನೆ, ಮಾಹಿತಿ ಹಾಗೂ ಪ್ರಾತ್ಯಕ್ಷಿಕೆ ಕೇಂದ್ರ, ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜು ಹಾಗೂ ಜಿಲ್ಲೆಯಲ್ಲಿನ ಜೈವಿಕ ಇಂಧನ ಕಾರ್ಯ ಯೋಜನೆಗಳ ಪ್ರಗತಿ ಪರಿಶೀಲನೆಯನ್ನು ಪ್ರೊ.ಶ್ಯಾಮ್‌ಸುಂದರ್ ಹಾಗೂ ಅವರ ತಂಡದೊಂದಿಗೆ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಈ.ಸುಧೀಂದ್ರ ನಡೆಸಿದರು.

ಬಯೋ ಡೀಸಲ್ ಉತ್ಪಾದನಾ ಘಟಕ, ವಾಹನಗಳಿಗೆ ಬಯೋ ಡೀಸಲ್ ಹಾಕಿ ಚಾಲನೆ ನೀಡಿ, ಬಯೋ ಗ್ಯಾಸ್ ಉತ್ಪಾದನಾ ಘಟಕಕ್ಕೂ ಭೇಟಿ ನೀಡಿದರು. ಮಂಡಳಿ ನೂತನ ಜೈವಿಕ ಇಂಧನ ನೀತಿಯಲ್ಲಿ ಜೈವಿಕ ಇಂಧನ ಕ್ಷೇತ್ರದ ಸಂಪೂರ್ಣ ಅಭಿವೃದ್ಧಿ ಹಾಗೂ ಹೂಡಿಕೆದಾರರನ್ನು ಆಕರ್ಷಿಸಲು ಒದಗಿಸಬೇಕಾದ ಮೂಲಸೌಕರ್ಯಗಳು, ರಿಯಾಯಿತಿಗಳು, ಪ್ರೋತ್ಸಾಹ ಧನಗಳು, ವಿಚಾರಗಳು ಇತ್ಯಾದಿ ಪ್ರಮುಖ ಅಗತ್ಯತೆಗಳನ್ನು ಅಳವಡಿಸಿಕೊಂಡು ರೂಪಿಸುವ ಸಂಬಂಧ ಈಗಾಗಲೇ ಮಂಡಳಿ ಹಲವಾರು ಚರ್ಚೆಗಳು, ಸಂವಾದಗಳು, ಚಿಂತನ ಮಂಥನಗಳನ್ನು ಕೈಗೊಂಡಿದ್ದು, ಉದ್ದಿಮೆದಾರರು, ಕಚ್ಚಾ ವಸ್ತುಗಳ ಪೂರೈಕೆದಾರರು, ಹೂಡಿಕೆದಾರರು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿರುವುದನ್ನು ವಿವರಿಸಿದರು.

ಈ ಸಂದರ್ಭದಲ್ಲಿ ಇತ್ತೀಚೆಗೆ ಮೈಸೂರಿನಲ್ಲಿ ಆಯೋಜಿಸಲಾಗಿದ್ದ 'ಸುಸ್ಥಿರ ತಾಂತ್ರಿಕತೆ' ಅಂತರರಾಷ್ಟ್ರೀಯ ಸಮಾವೇಶದಲ್ಲಿ ಮಂಡಳಿಯ ಕಾರ್ಯ ಯೋಜನೆಗಳ ಪ್ರಾತ್ಯಕ್ಷಿಕೆ ಹಾಗೂ ಅಧ್ಯಕ್ಷರು ಸಮ್ಮೇಳನದಲ್ಲಿ ಮಂಡಳಿಯ ಕಾರ್ಯ ಯೋಜನೆಗಳ ಕುರಿತು ಮಂಡಿಸಿದ ವಿಚಾರಗಳು, ಜೈವಿಕ ಇಂಧನ ಕಾರ್ಯ ಯೋಜನೆಗಳನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಬೇಕೆನ್ನುವ ಮಂಡಳಿಯ ಅಧ್ಯಕ್ಷರ ಚಿಂತನೆಯ ಅನುಷ್ಠಾನದಲ್ಲಿ ಆಗಿರುವ ಪ್ರಗತಿಯ ಕುರಿತು ಮಂಡಳಿ ಅಧ್ಯಕ್ಷರು ಪ್ರೊ. ಶಾಮ್‌ಸುಂದರ್ ಅವರೊಂದಿಗೆ ಇಂದು ಸುದೀರ್ಘವಾಗಿ ಚರ್ಚಿಸಿದರು.


ಈ ಸಂದರ್ಭದಲ್ಲಿ ಜರ್ಮನ್ ದೇಶದ FACH HOCHSCHULE, DORTMUND, GERMANY, UNIVERSITY, UNIVERSITY OF Applied Sciences and Arts, DORTMUND, ವಿಶ್ವವಿದ್ಯಾಲಯದ ಪ್ರತಿನಿಧಿಗಳು ಮಂಡಳಿಯು ಪ್ರಸ್ತುತಪಡಿಸಿದ್ದ ಜೈವಿಕ ಇಂಧನ ಕಾರ್ಯ ಯೋಜನೆಗಳ ಕುರಿತು ಆಸಕ್ತಿ ತೋರಿದ್ದ ವಿಷಯ, ಹಾಗೂ ನಂತರದ ಬೆಳವಣಿಗೆಗಳನ್ನು ಪ್ರೊ.ಶ್ಯಾಮ್‌ಸುಂದರ್‌ರವರು ಮಂಡಳಿಯ ಅಧ್ಯಕ್ಷರಿಗೆ ವಿವರಣೆ ನೀಡಿದರು.

ಮಂಡಳಿ ಹಾಗೂ ಜರ್ಮನ್ ದೇಶದ ವಿಶ್ವವಿದ್ಯಾಲಯಗಳ ನಡುವೆ ಮಾಡಿಕೊಳ್ಳಬೇಕಾಗಿರುವ ಒಡಂಬಡಿಕೆಗಳ ಸಂಬಂಧ ಮಂಡಳಿಯ ಅಧ್ಯಕ್ಷರು ಹಾಗೂ ಕಾರ್ಯ ತಂಡವು ಶೀಘ್ರವೇ ಜರ್ಮನ್ ದೇಶದ ವಿಶ್ವವಿದ್ಯಾಲಯಗಳಿಗೆ ಪ್ರವಾಸ ಕೈಗೊಳ್ಳಲು ಪೂರ್ವ ಸಿದ್ಧತೆಗಳ ಕುರಿತು ಚರ್ಚಿಸಿದರು.

ಜರ್ಮನ್ ದೇಶದ ವಿಶ್ವವಿದ್ಯಾಲಯಗಳು ಈಗಾಗಲೇ ಮಂಡಳಿ ಅಧ್ಯಕ್ಷರು ಹಾಗೂ ಅವರ ಕಾರ್ಯ ತಂಡದ ಭೇಟಿಗಾಗಿ ಆಹ್ವಾನ ನೀಡಿದ್ದು, ಒಡಂಬಡಿಕೆ ಕರಡು ಪ್ರತಿ ಸಲ್ಲಿಸಿರುವುದನ್ನು ಪ್ರೊ.ಶ್ಯಾಮ್‌ಸುಂದರ್ ಗಮನಕ್ಕೆ ತಂದು ವಿವಿಗಳಿಗೆ ಭೇಟಿ ನೀಡಲು ಪೂರ್ವ ತಯಾರಿ, ಒಡಂಬಡಿಕೆ ಪತ್ರದ ಸಿದ್ಧತೆ ಹಾಗೂ ಪ್ರಯಾಣದ ವೇಳಾಪಟ್ಟಿ ಸಿದ್ಧಗೊಳಿಸಿ ಸರ್ಕಾರಕ್ಕೆ ಸಲ್ಲಿಸಿ ಸೂಕ್ತ ಅನುಮೋದನೆ ಪಡೆಯಲು ಅಧ್ಯಕ್ಷರು ಸೂಚಿಸಿದರು. ಪ್ರಗತಿ ಪರಿಶೀಲನಾ ಸಭೆಯಲ್ಲಿ ಐಟಿಸಿಎಲ್ ಮಾಜಿ ಅಧ್ಯಕ್ಷ ಪಿ.ಎಸ್.ನಿರಂಜನ್‌ರಾವ್, ಸಹಾಯಕ ಪರಿಸರ ಮಾಲಿನ್ಯ ನಿಯಂತ್ರಣಾಧಿಕಾರಿ ಅರ್ಪಿತ, ಪ್ರೊ.ಶ್ಯಾಮ್‌ಸುಂದರ್ ಮತ್ತು ಅವರ ತಂಡದವರು ಹಾಗೂ ಎನ್‌ಐಇ ಇಂಜಿನಿಯರಿಂಗ್ ಕಾಲೇಜಿನ ಬೋಧಕ ಸಿಬ್ಬಂದಿ ಉಪಸ್ಥಿತರಿದ್ದರು.

ದೇಶ - ವಿದೇಶ

ಗಾಜಾ ಆಸ್ಪತ್ರೆ ಮೇಲೆ ಇಸ್ರೇಲ್ ಏರ್ ಸ್ಟ್ರೈಕ್, ಹಮಾಸ್ ಮುಖ್ಯಸ್ಥ ಮಹಮದ್ ಸಿನ್ವರ್ ಸಾವು




ಟೆಲ್ ಅವೀವ್: ಗಾಜಾಪಟ್ಟಿಯಲ್ಲಿ ಇಸ್ರೇಲ್ ಸೇನೆ ವಾಯುದಾಳಿ ಮುಂದುವರೆದಿದ್ದು, ಈ ಬಾರಿ ಹಮಾಸ್ ಉಗ್ರ ಸಂಘಟನೆಯ ಮುಖ್ಯಸ್ಥ ಮಹಮದ್ ಸಿನ್ವರ್‌ನನ್ನೇ ಇಸ್ರೇಲ್ ಭದ್ರತಾ ಪಡೆಗಳು ಹೊಡೆದುರುಳಿಸಿವೆ.

ಈ ಹಿಂದೆ ಇದೇ ಇಸ್ರೇಲ್ ಪಡೆ ನಡೆಸಿದ್ದ ಡ್ರೋನ್ ದಾಳಿಯಲ್ಲಿ ಹಮಾಸ್ ಸಂಘಟನೆಯ ಅಂದಿನ ಮುಖ್ಯಸ್ಥ ಯಾಹ್ಯಾ ಸಿನ್ವರ್ ಹತನಾಗಿದ್ದ. ಅವನ ಸಾವಿನ ಬಳಿಕ ಹಮಾಸ್ ಉಗ್ರ ಸಂಘಟನೆಯ ನಾಯಕತ್ವವನ್ನು ಮಹಮದ್ ಸಿನ್ವರ್ ವಹಿಸಿಕೊಂಡಿದ್ದ. ಇದೀಗ ಮಹಮದ್ ಸಿನ್ವರ್‌ನನ್ನೂ ಕೂಡ ಇಸ್ರೇಲ್ ಸೇನೆ ವಾಯುದಾಳಿಯಲ್ಲಿ ಹೊಡೆದುರುಳಿಸಿದೆ.


ಇಸ್ರೇಲಿ ಭದ್ರತಾ ಪಡೆಗಳ ಮೂಲಗಳ ಪ್ರಕಾರ ಹಮಾಸ್‌ನ ಹಿರಿಯ ನಾಯಕ ಮಹಮ್ಮದ್ ಸಿನ್ವಾರ್‌ನನ್ನು ಗುರಿಯಾಗಿಸಿಕೊಂಡು ಮಂಗಳವಾರ ಸಂಜೆ ದಕ್ಷಿಣ ಗಾಜಾ ನಗರದ ಖಾನ್ ಯೂನಿಸ್ ಆಸ್ಪತ್ರೆ ಮೇಲೆ ಇಸ್ರೇಲಿ ಯುದ್ಧ ವಿಮಾನಗಳು ಪ್ರಬಲ ವೈಮಾನಿಕ ದಾಳಿ ನಡೆಸಿದ್ದವು. ಆಸ್ಪತ್ರೆ ಬಳಿ ಹಮಾಸ್ ಕಮಾಂಡ್ ಸೆಂಟರ್ ಭೂಗತದಲ್ಲಿತ್ತು. ಇದೇ ಪ್ರದೇಶದ ಮೇಲೆ ಇಸ್ರೇಲ್ ವಾಯುದಾಳಿ ನಡೆಸಿದೆ ಎಂದು ಇಸ್ರೇಲಿ ಸೇನೆ ಹೇಳಿಕೊಂಡಿದೆ.

ಚೀನಾ ಸರ್ಕಾರದ ಗ್ಲೋಬಲ್ ಟೈಮ್ಸ್ ಟ್ವಿಟರ್ ಖಾತೆಗೆ ಭಾರತದಲ್ಲಿ ನಿರ್ಬಂಧ



ನವದೆಹಲಿ: ಭಾರತೀಯ ಸೇನೆ ಕುರಿತು ಸುಳ್ಳು ಸುದ್ದಿಗಳನ್ನು ಪ್ರಕಟಿಸುತ್ತಿದ್ದ ಚೀನಾದ ಸರ್ಕಾರಿ ಮಾಧ್ಯಮ ಗ್ಲೋಬಲ್ ಟೈಮ್ಸ್‌ನ ಎಕ್ಸ್ ಖಾತೆಗೆ ಭಾರತ ನಿರ್ಬಂಧ ಹೇರಿದೆ. ಪಹಲ್ಗಾಮ್ ಉಗ್ರರ ದಾಳಿ ಬಳಿಕ ಉಗ್ರರ ವಿರುದ್ಧ ಭಾರತೀಯ ಸೇನೆ ಆಪರೇಷನ್ ಸಿಂಧೂರ್ ಕಾರ್ಯಾಚರಣೆ ಆರಂಭಿಸಿತ್ತು. ಈ ಕಾರ್ಯಾಚರಣೆ ಕುರಿತು ಚೀನಾದ ಸರ್ಕಾರಿ ಮಾಧ್ಯಮ ಗ್ಲೋಬಲ್ ಟೈಮ್ಸ್ ಸುಳ್ಳು ಸುದ್ದಿಗಳನ್ನು ಪ್ರಕಟಿಸುತ್ತಿತ್ತು. ಇದರ ಬೆನ್ನಲ್ಲೇ ಚೀನಾದಲ್ಲಿರುವ ಭಾರತೀಯ ರಾಯಭಾರಿ ಕಚೇರಿಯು, ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿ ಪ್ರಕಟಿಸುವುದಕ್ಕೂ ಮುನ್ನ ಸತ್ಯಾಸತ್ಯತೆಗಳನ್ನು ಪರಿಶೀಲಿಸುವಂತೆ ಒತ್ತಾಯಿಸಿತ್ತು. ಆಪರೇಷನ್ ಸಿಂಧೂರ್ ಬೆನ್ನಲ್ಲೇ ಹಲವಾರು ಪಾಕಿಸ್ತಾನ ಪರವಿರುವ ಸಾಮಾಜಿಕ ಜಾಲತಾಣದ ಖಾತೆಗಳು ಆಧಾರರಹಿತ ಹೇಳಿಕೆಗಳನ್ನು ನೀಡುತ್ತಿವೆ. ಈ ಮೂಲಕ ಸಾರ್ವಜನಿಕರನ್ನು ದಾರಿ ತಪ್ಪಿಸಲು ಪ್ರಯತ್ನಿಸುತ್ತಿವೆ. ಈ ಮಾಧ್ಯಮಗಳು ಸುದ್ದಿಯ ಮೂಲಗಳನ್ನು ಪರಿಶೀಲಿಸದೆ ಅಂತಹ ಮಾಹಿತಿಯನ್ನು ಹಂಚಿಕೊಂಡಾಗ, ಅದು ಜವಾಬ್ದಾರಿ ಮತ್ತು ಪತ್ರಿಕೋದ್ಯಮ ನೀತಿಯಲ್ಲಿ ಗಂಭೀರ ಲೋಪವನ್ನು ಪ್ರತಿಬಿಂಬಿಸುತ್ತದೆ ಎಂದು ತಿಳಿಸಿತ್ತು.

ಹೋಟೆಲ್ ಬಾಲ್ಕನಿಯಿಂದ ಬಿದ್ದು ಭಾರತೀಯ ಮೂಲದ ವಿದ್ಯಾರ್ಥಿ ಸಾವು



ನ್ಯೂಯಾರ್ಕ್: ಭಾರತೀಯ ಮೂಲದ ಕಾಲೇಜು ವಿದ್ಯಾರ್ಥಿಯೋರ್ವ ಹೋಟೆಲ್ ಬಾಲ್ಕನಿಯಿಂದ ಆಕಸ್ಮಿಕವಾಗಿ ಬಿದ್ದು ಸಾವನ್ನಪ್ಪಿದ ಘಟನೆ ಬಹಾಮಾಸ್‌ನಲ್ಲಿ ನಡೆದಿದೆ. ಅಮೆರಿಕದ ಮ್ಯಾಸಚೂಸೆಟ್ಸ್‌ನ ವಾಲ್ಥಮ್‌ನಲ್ಲಿರುವ ಬೆಂಟ್ಲೆ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದ ಗೌರವ್ ಜೈಸಿಂಗ್ (25) ಬಹಾಮಾಸ್ ಪ್ರವಾಸಕ್ಕೆ ತೆರಳಿದ್ದಾಗ ಅವಘಡ ಸಂಭವಿಸಿದೆ ಎಂದು ವರದಿಯಾಗಿದೆ.


ಜೈಸಿಂಗ್ ಈ ವಾರಾಂತ್ಯದಲ್ಲಿ ಪದವಿ ಪ್ರಮಾಣಪತ್ರ ಪಡೆಯಲು ಸಜ್ಜಾಗಿದ್ದರು. ಬೆಂಟ್ಲೆ ವಿಶ್ವವಿದ್ಯಾಲಯವು ಎಕ್ಸ್‌ನಲ್ಲಿ ಪೋಸ್ಟ್ ಮೂಲಕ ಸಂತಾಪ ವ್ಯಕ್ತಪಡಿಸಿದೆ. ಗೌರವ್ ಕುಟುಂಬ ಮತ್ತು ಸ್ನೇಹಿತರಿಗೆ ನಮ್ಮ ಹೃದಯಗಳು ಮಿಡಿಯುತ್ತವೆ. ಮೇ 17ರಂದು ನಿಗದಿಯಾಗಿರುವ ಪದವಿಪೂರ್ವ ಪದವಿ ಸಮಾರಂಭದಲ್ಲಿ ಗೌರವ್ ಅವರನ್ನು ಗೌರವಿಸಲು ನಾವು ಯೋಜಿಸಿದ್ದೇವೆ ಎಂದು ತಿಳಿಸಿದೆ. ಗೌರವ್ ಆಕಸ್ಮಿಕವಾಗಿ ಬಾಲ್ಕನಿಯಿಂದ ಬಿದ್ದಂತೆ ತೋರುತ್ತಿದೆ. ವರದಿಗಳ ಪ್ರಕಾರ ರಾತ್ರಿ 10 ಗಂಟೆ ಸುಮಾರಿಗೆ ಗೌರವ್ ಜೈಸಿಂಗ್ ಇತರ ರೂಮ್‌ಮೇಟ್‌ಗಳೊಂದಿಗೆ ತನ್ನ ಹೋಟೆಲ್ ಕೋಣೆಯೊಳಗೆ ಇದ್ದರು. ಈ ವೇಳೆ ಆಕಸ್ಮಿಕವಾಗಿ ಮೇಲಿನ ಮಹಡಿ ಬಾಲ್ಕನಿಯಿಂದ ಬಿದ್ದಿದ್ದಾರೆ ಎಂದು ವರದಿಯಾಗಿದೆ.

ದೇಶ ವಿರೋಧಿ ಪೋಸ್ಟ್; 40 ಸಾಮಾಜಿಕ ಮಾಧ್ಯಮ ಖಾತೆಗಳ ವಿರುದ್ಧ ಎಫ್‌ಐಆರ್; 25 ಮಂದಿ ಬಂಧನ

ಲಖನೌ: ಆಪರೇಷನ್ ಸಿಂಧೂರ್‌ಗೆ ಸಂಬಂಧಿಸಿದಂತೆ ದೇಶವಿರೋಧಿ ಹೇಳಿಕೆ ಮತ್ತು ಜನರನ್ನು ತಪ್ಪು ದಾರಿಗೆಳೆಯುವ ಪೋಸ್ಟ್‌ಗಳನ್ನು ಮಾಡಿದ್ದ 40 ಸಾಮಾಜಿಕ ಮಾಧ್ಯಮ ಖಾತೆಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. 25 ಜನರನ್ನು ಬಂಧಿಸಲಾಗಿದೆ ಎಂದು ಉತ್ತರ ಪ್ರದೇಶ ಪೊಲೀಸರು ತಿಳಿಸಿದ್ದಾರೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರ ನಿರ್ದೇಶನದ ಮೇರೆಗೆ ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್‌ಕುಮಾರ್ ಅವರು ಆನ್‌ಲೈನ್‌ನಲ್ಲಿ ಸುಳ್ಳು ಅಥವಾ ಪ್ರಚೋದನಕಾರಿ ಹೇಳಿಕೆ ಪೋಸ್ಟ್ ಮಾಡುತ್ತಿದ್ದ ವ್ಯಕ್ತಿಗಳನ್ನು ಗುರುತಿಸಿ ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು. ಹೆಚ್ಚುವರಿ ಮಹಾನಿರ್ದೇಶಕ (ಕಾನೂನು ಮತ್ತು ಸುವ್ಯವಸ್ಥೆ) ಅಮಿತಾಬ್ ಯಶ್ ಅವರ ಮೇಲ್ವಿಚಾರಣೆಯಡಿಯಲ್ಲಿ ವಿಶೇಷ ತಂಡವು ಪೊಲೀಸ್ ಪ್ರಧಾನ ಕಚೇರಿಯ ಸಾಮಾಜಿಕ ಮಾಧ್ಯಮ ಕೇಂದ್ರದಿಂದ ವಿವಿಧ ಸಾಮಾಜಿಕ ಮಾಧ್ಯಮ ಪ್ಲಾಟ್‌ಫಾರ್ಮ್‌ಗಳ ಮೇಲೆ ದಿನದ 24 ಗಂಟೆಯೂ ನಿಗಾ ವಹಿಸಿದೆ.

ಕತಾರ್ ರಾಜಮನೆತನದಿಂದ ಟ್ರಂಪ್‌ಗೆ 400 ಮಿಲಿಯನ್ ಡಾಲರ್ ಮೌಲ್ಯದ ಬೋಯಿಂಗ್ ವಿಮಾನ ಉಡುಗೊರೆ



ನ್ಯೂಯಾರ್ಕ್: ಕತಾರ್ ರಾಜಮನೆತನದಿಂದ ಅತ್ಯಂತ ಐಷಾರಾಮಿ ಖಾಸಗಿ ಜೆಟ್ ಆದ 400 ಮಿಲಿಯನ್ ಡಾಲರ್ ಮೌಲ್ಯದ ಬೋಯಿಂಗ್ 747–8 ವಿಮಾನವನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಉಡುಗೊರೆ ನೀಡಲಾಗಿದೆ. ಈ ವಿಮಾನವು ಏರ್‌ಫೋರ್ಸ್ ಒನ್‌ಗೆ ತಾತ್ಕಾಲಿಕ ಬದಲಿಯಾಗಿ ಕಾರ್ಯ ನಿರ್ವಹಿಸಲು ಉದ್ದೇಶಿಸಲಾಗಿದೆ. ಉತ್ತಮವಾಗಿ ವಿನ್ಯಾಸಗೊಳಿಸಲಾದ ಸ್ನಾನ ಗೃಹಗಳು, ಖಾಸಗಿ ಮಲಗುವ ಕೋಣೆಗಳು ಮತ್ತು ಭವ್ಯವಾದ ಮೆಟ್ಟಿಲುಗಳಿಂದ ಕೂಡಿದ ಐಷಾರಾಮಿ ಒಳಾಂಗಣದಿಂದಾಗಿ ಇದನ್ನು 'ಹಾರುವ ಅರಮನೆ' ಎಂದು ಕರೆಯಲಾಗುತ್ತದೆ. ಕತಾರಿ ರಾಜಮನೆತನದ ಸದಸ್ಯರು ಮತ್ತು ನಂತರ ಟರ್ಕಿಶ್ ಸರ್ಕಾರ ಅಮೆರಿಕಕ್ಕೆ ನೀಡುವ ಮೊದಲು ಇದನ್ನು ಬಳಸುತ್ತಿದ್ದರು. ಈ ಹಿಂದೆ ಟ್ರಂಪ್ ಅವರ ಮಧ್ಯಪ್ರಾಚ್ಯ ಪ್ರವಾಸದ ಸಮಯದಲ್ಲಿ ಕತಾರ್ ಅಮೆರಿಕ ಸರ್ಕಾರಕ್ಕೆ ಮೆಗಾ ಜೆಟ್ ಅನ್ನು ನೀಡುತ್ತಿದೆ. ಆದಾಗ್ಯೂ, 78 ವರ್ಷ ವಯಸ್ಸಿನ ಟ್ರಂಪ್ ಈ ವರದಿಗಳನ್ನು ನಿರಾಕರಿಸಿದ್ದರು. ವಿಮಾನಕ್ಕೆ ಅಮೆರಿಕ ಹಣ ನೀಡಿದೆ ಮತ್ತು ಅದು ಉಡುಗೊರೆಯಾಗಿಲ್ಲ ಎಂದು ಹೇಳಿದ್ದಾರೆ.

ಸಕಾಲ ಕಾಯ್ದೆಯಡಿ ಅರ್ಜಿಗಳಿಗೆ ಕಾಲಮಿತಿಯಲ್ಲಿ ಮಾಹಿತಿ ನೀಡಲು ಆದೇಶ

ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ ಜಿಲ್ಲಾಧಿಕಾರಿ



ಅಭಿವೃದ್ಧಿ ಕಾರ್ಯಗಳ ಸಂಬಂಧ ಜಿಲ್ಲಾಧಿಕಾರಿ ಬುಧವಾರ ಅಧಿಕಾರಿಗಳ ಪೂರ್ವಭಾವಿ ಸಭೆ ನಡೆಸಿದರು

ಮಡಿಕೇರಿ, ಮೇ 14–ವಿವಿಧ ಇಲಾಖೆಗೆ ಸಕಾಲ ಕಾಯ್ದೆಯಡಿ ಸಲ್ಲಿಕೆಯಾಗುವ ಅರ್ಜಿಗಳಿಗೆ ಕಾಲಮಿತಿಯಲ್ಲಿ ಮಾಹಿತಿ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.


ಜಿಲ್ಲೆಯ ಅಭಿವೃದ್ಧಿ ಕಾರ್ಯಗಳ ಸಂಬಂಧ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸಕಾಲ ಕಾಯ್ದೆಯಡಿ ಸಲ್ಲಿಕೆಯಾಗುವ ಅರ್ಜಿಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಸಕಾಲದಲ್ಲಿ ಮಾಹಿತಿ ಒದಗಿಸಬೇಕು. ತಮ್ಮ ಹಂತದಲ್ಲಿ ಕೆಲಸ ಆಗದಿದ್ದಲ್ಲಿ ಹಿಂಬರಹವನ್ನಾದರೂ ನೀಡಬೇಕು, ಅದನ್ನು ಹೊರತುಪಡಿಸಿ ಸತಾಯಿಸುವುದು ಬೇಡ ಎಂದು ನಿರ್ದೇಶನ ನೀಡಿದ ಅವರು, ಸಕಾಲ ಕಾಯ್ದೆಯಡಿ ಸಲ್ಲಿಕೆಯಾದ ಅರ್ಜಿಗಳನ್ನು ಕಾಲಮಿತಿಯಲ್ಲಿ ವಿಲೇವಾರಿ ಮಾಡದಿದ್ದಲ್ಲಿ ಯಾವ ರೀತಿ ಭಾವಿಸಿಕೊಳ್ಳಬೇಕು ಎಂಬ ಬಗ್ಗೆ ತಾವೇ ವಿಮರ್ಶೆ ಮಾಡಿಕೊಳ್ಳಬೇಕು ಎಂದು ಎಚ್ಚರಿಸಿದರು.

ಸಕಾಲ ಕಾಯ್ದೆಯಡಿ ಸಲ್ಲಿಕೆಯಾದ ಅರ್ಜಿಗಳಿಗೆ ಕಾಲಮಿತಿಯಲ್ಲಿ ಮಾಹಿತಿ ನೀಡದಿದ್ದಲ್ಲಿ ದಂಡ ಪಾವತಿಸಬೇಕಾಗುತ್ತದೆ. ಆದ್ದರಿಂದ ಸಮಯ ವ್ಯರ್ಥ ಮಾಡದೆ ಕೆಲಸವನ್ನು ವ್ಯವಸ್ಥಿತವಾಗಿ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ತಾಕೀತು ಮಾಡಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಮಾತನಾಡಿ, ವಿವಿಧ ಇಲಾಖೆ ಅಧಿಕಾರಿಗಳು ತಮ್ಮ ಇಲಾಖೆ ವ್ಯಾಪ್ತಿಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಾಹಿತಿ ಒದಗಿಸಬೇಕು ಎಂದರು.

ಉಪವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಜಿಪಂ ಉಪಕಾರ್ಯದರ್ಶಿ ಅಬ್ದುಲ್ ನಬೀ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್, ಜಿಲ್ಲಾ ಸರ್ಜನ್ ಡಾ. ನಂಜುಂಡಯ್ಯ, ನಗರಾಭಿವೃದ್ಧಿ ಯೋಜನಾ ಶಾಖೆಯ ನಿರ್ದೇಶಕ ಬಿ.ಬಸಪ್ಪ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಕವಿತಾ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ವಿ.ಟಿ.ವಿಸ್ಮಯಿ, ಕಾರ್ಮಿಕ ಅಧಿಕಾರಿ ಕಾವೇರಿ, ತಹಶೀಲ್ದಾರ್ ಕಿರಣ್ ಗೌರಯ್ಯ, ಕೃಷ್ಣಮೂರ್ತಿ, ಶಿಕ್ಷಣಾಧಿಕಾರಿ ಮಹದೇವಸ್ವಾಮಿ, ಪಶುಪಾಲನೆ ಇಲಾಖೆ ಉಪ ನಿರ್ದೇಶಕ ಲಿಂಗರಾಜು ದೊಡ್ಡಮನಿ, ಪಿಎಂಜಿಎಸ್‌ವೈ ಎಂಜಿನಿಯರ್ ಪ್ರಭು, ಹೇಮಂತ್ ಕುಮಾರ್, ತಾಪಂ ಇಒಗಳು, ಕೃಷಿ, ಸೆಸ್ಕ್, ಶಾಲಾ ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಪುರಸಭೆ ಮತ್ತು ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿಗಳು ಇತರರು ತಮ್ಮ ವ್ಯಾಪ್ತಿಗೆ ಸಂಬಂಧಿಸಿದಂತೆ ಮಾಹಿತಿ ನೀಡಿದರು.

ಮಲ ಸಹೋದರನಿಂದ ಗುಂಡಿನ ದಾಳಿ: ಸಹೋದರರಿಬ್ಬರಿಗೆ ತೀವ್ರ ಗಾಯ



ಜ್ಯೋತಿ ಬಾಳೇರ ಟಿಮ್ಸನ್

ಮಡಿಕೇರಿ: ಆಸ್ತಿ ವಿಚಾರದಲ್ಲಿ ಕಲಹವಾಗಿ ಮಲ ಸಹೋದರ ತನ್ನ ಮತ್ತಿಬ್ಬರು ಸಹೋದರರ ಮೇಲೆ ಗುಂಡು ಹಾರಿಸಿ ಕೊಲೆಗೆ ಯತ್ನಿಸಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಬೆಳ್ಳೂರು ಗ್ರಾಮದಲ್ಲಿ ನಡೆದಿದೆ.

ಬಾಳೇರ ರೋಷನ್(35) ಮತ್ತು ಸಚಿನ್(43) ಗಾಯಗೊಂಡ ಸಹೋದರರಾಗಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಳೇರ ಟಿಮ್ಸನ್ ಮತ್ತು ಆತನ ತಾಯಿ ಜ್ಯೋತಿಯನ್ನು ಪೊಲೀಸರು ಬಂಧಿಸಿದ್ದಾರೆ.

ಪ್ರಕರಣದ ಹಿನ್ನೆಲೆ: ಬಾಳೇರ ರೋಷನ್ ಕುಮಾರ್, ಸಚಿನ್ ಕುಮಾರ್ ಮತ್ತು ಬಾಳೇರ ಟಿಮ್ಸನ್ ಕುಟುಂಬ ಸಂಬಂಧಿಗಳಾಗಿದ್ದು, ಇವರ ನಡುವೆ ಆಸ್ತಿ ಕಲಹವಿತ್ತು ಎನ್ನಲಾಗಿದೆ. ನೆನ್ನೆ ಸಂಜೆ ಬೆಳ್ಳೂರು ಗ್ರಾಮ ನಿವಾಸಿ ಸಚಿನ್ ಕುಮಾರ್ ಮನೆಗೆ ಟಿಮ್ಸನ್ ಮತ್ತು ಆತನ ತಾಯಿ ಜ್ಯೋತಿ ಕಾರಿನಲ್ಲಿ ಆಗಮಿಸಿ ನಿಮ್ಮೊಂದಿಗೆ ಮಾತನಾಡಬೇಕು ಎಂದು ಹೇಳಿ ಜಗಳವಾಡಲು ಪ್ರಾರಂಭಿಸಿದ್ದಾರೆ. ಬೊಬ್ಬೆ ಶಬ್ದ ಕೇಳಿ ಸಚಿನ್‌ನ ಚಿಕ್ಕಪ್ಪನ ಮಗ ರೋಷನ್ ಕುಮಾರ್ ಸ್ಥಳಕ್ಕಾಗಮಿಸಿದ್ದಾರೆ. ಟಿಮ್ಸನ್ ಅವರನ್ನು ನಿಂದಿಸಿ ತಲೆಗೆ ಹೊಡೆದಿದ್ದಾನೆ. ಪಕ್ಕದಲ್ಲಿದ್ದ ಟಿಮ್ಸನ್ ತಾಯಿ ಜ್ಯೋತಿ ಸಚಿನ್ ಕುಮಾರ್ ಅವರ ಬೆನ್ನಿಗೆ ಕಚ್ಚಿದ್ದಾರೆ. ಈ ವೇಳೆ ಟಿಮ್ಸನ್ ಕಾರಿನಲ್ಲಿಟ್ಟಿದ್ದ ರಿವಾಲ್ವರ್ ತಂದು ಏಕಾಏಕಿ ಸಚಿನ್ ಅವರ ಬಲಕಾಲು ಮತ್ತು ರೋಷನ್ ಕುಮಾರ್ ಅವರ ಕುತ್ತಿಗೆ ಭಾಗಕ್ಕೆ ಗುಂಡು ಹಾರಿಸಿ ಕೊಲೆ ಮಾಡಲು ಯತ್ನಿಸಿದ್ದಾನೆ. ಬಳಿಕ ಸ್ಥಳೀಯರು ಗಾಯಾಳುಗಳನ್ನು ಗೋಣಿಕೊಪ್ಪದ ಖಾಸಗಿ ಆಸ್ಪತ್ರೆ ಚಿಕಿತ್ಸೆಗಾಗಿ ದಾಖಲಿಸಿ, ನಂತರ ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಕರೆದೊಯ್ದಿದ್ದು, ಸಹೋದರರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಸ್ಥಳಕ್ಕೆ ವಿರಾಜಪೇಟೆ ಡಿವೈಎಸ್‌ಪಿ ಮಹೇಶ್ ಕುಮಾರ್, ಕುಟ್ಟ ವೃತ್ತ ನಿರೀಕ್ಷಕ ಶಿವರುದ್ರಪ್ಪ, ಶ್ರೀಮಂಗಲ ಠಾಣಾಧಿಕಾರಿ ರವೀಂದ್ರ ಮತ್ತು ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕೃತ್ಯಕ್ಕೆ ಸಂಬಂಧಿಸಿದ ಮಾಹಿತಿ ಹಾಗೂ ಸಾಕ್ಷ್ಯಾಧಾರಗಳನ್ನು ಕಲೆಹಾಕಿದ ತನಿಖಾ ತಂಡ ಆರೋಪಿ ಟಿಮ್ಸನ್(36) ಹಾಗೂ ಜ್ಯೋತಿ(63) ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ. ಆರೋಪಿ ಹೊಂದಿರುವ ರಿವಾಲ್ವರ್ ಜಮ್ಮ ವಿನಾಯಿತಿಯನ್ನು ಹೊಂದಿದ್ದು, ಮುಂಜಾಗ್ರತಾ ಕ್ರಮವಾಗಿ ಇದನ್ನು ರದ್ದುಪಡಿಸಲು ಜಿಲ್ಲಾಧಿಕಾರಿಗಳಿಗೆ ಶಿಫಾರಸು ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪೆರಂಬಾಡಿಯಿಂದ ಮಾಕುಟ್ಟವರೆಗೆ ಪರಿಸರ ಸಂರಕ್ಷಣಾ ಜಾಥಾ



ಕೊಡಗು ಪರಿಸರ ಸಂರಕ್ಷಣಾ ಹೋರಾಟ ಸಮಿತಿ, ಆರ್ಜಿ–ಬೇಟೋಳಿ ಗ್ರಾಪಂ ಸಹಯೋಗದಲ್ಲಿ ಪರಿಸರ ಸಂರಕ್ಷಣಾ ಜಾಥಾ ನಡೆಸಿದವು.

ವಿರಾಜಪೇಟೆ, ಮೇ 14– ಕೊಡಗು ಪರಿಸರ ಸಂರಕ್ಷಣಾ ಹೋರಾಟ ಸಮಿತಿ ಆರ್ಜಿ–ಬೇತೋಳಿ ಗ್ರಾಮ ಪಂಚಾಯ್ತಿ ಸಹಯೋಗದೊಂದಿಗೆ ಪೆರಂಬಾಡಿ ಚೆಕ್‌ಪೋಸ್ಟ್‌ನಿಂದ ಕೇರಳ ಗಡಿ ಮಾಕುಟ್ಟವರೆಗೆ ಪರಿಸರ ಸಂರಕ್ಷಣಾ ಜಾಥಾ ಹಾಗೂ ಶುಚಿತ್ವ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ರಾಜ್ಯ ವನ್ಯಜೀವಿ ಸಂರಕ್ಷಣಾ ಸಮಿತಿ ಸದಸ್ಯ ಮೇರಿಯಂಡ ಕೆ.ಸಂಕೇತ್ ಪೂವಯ್ಯ ಜಾಥಾ ಉದ್ಘಾಟಿಸಿದರು. ಪರಿಸರ ಸಂರಕ್ಷಣೆ ಪ್ರತಿ ಪ್ರಜೆಯ ಕರ್ತವ್ಯವಾಗಿದೆ. ಪ್ರಕೃತಿ ನಮಗೆ ಬಹಳಷ್ಟು ನೀಡಿರುವಾಗ ಅದರ ಅರಿವು ಇಲ್ಲದೆ ನಾವು ಪರಿಸರವನ್ನು ನಾಶಗೊಳಿಸುತ್ತಿದ್ದೇವೆ. ಈ ಬಗ್ಗೆ ಸ್ವಯಂಸೇವಾ ಸಂಸ್ಥೆಗಳ ಜಾಗೃತಿ ಕಾರ್ಯಗಳು ಶ್ಲಾಘನೀಯ ಎಂದರು.

ಕಾರ್ಯಕ್ರಮದಲ್ಲಿ ಲಿಟಲ್ ಸ್ಕಾಲರ್ಸ್ ಅಕಾಡೆಮಿಯ ಪೂಜಾ ಸಜೇಶ್, ಬೆಂಗಳೂರಿನ ಸಹಾಯಕ ಪೋಲೀಸ್ ಆಯುಕ್ತ ಸುಬ್ರಹ್ಮಣಿ, ರಗ್ಬಿ ಆಟಗಾರ ಮಾದಂಡ ತಿಮ್ಮಯ್ಯ, ಆರ್ಜಿ ಗ್ರಾಪಂ ಅಧ್ಯಕ್ಷೆ ಫಾತಿಮಾ, ಅಭಿವೃದ್ಧಿ ಅಧಿಕಾರಿ ಪ್ರಮೋದ್, ಉಪಾಧ್ಯಕ್ಷ ಬೋಪಣ್ಣ, ಸದಸ್ಯ ಉಪೇಂದ್ರ, ಬೇತ್ರಿ ಪಂಚಾಯಿತಿ ಅಧಿಕಾರಿ ಮಣಿ, ಅರಣ್ಯ ಅಧಿಕಾರಿ ಅರುಣ್, ಪರಿಸರ ರಕ್ಷಣಾ ಹೋರಾಟ ಸಮಿತಿ ಕಾರ್ಯದರ್ಶಿ ಸುನಿತಾ, ಕೋಶಾಧಿಕಾರಿ ವಿನೂಪ್ ಕುಮಾರ್ ಹಾಜರಿದ್ದರು. ಸಮಿತಿ ಸಂಚಾಲಕ ಶಶಿ ಅಚ್ಚಪ್ಪ ಧನ್ಯವಾದವಿತ್ತರು. ಗ್ರಾಪಂ ಕಾರ್ಯದರ್ಶಿ ರಾಜನ್ ಕಾರ್ಯಕ್ರಮ ನಿರೂಪಿಸಿದರು. ವಿರಾಜಪೇಟೆ ಸರಕಾರಿ ಪ್ರಥಮ ದರ್ಜೆ ಕಾಲೇಜು, ಕಾವೇರಿ ಕಾಲೇಜು, ಸರ್ವೋದಯ ಶಿಕ್ಷಕರ ತರಬೇತಿ ಸಂಸ್ಥೆ, ಪ್ರಗತಿ ಶಾಲೆ, ಫ್ರೆಂಡ್ಸ್ ಚಾರಿಟೆಬಲ್ ಟ್ರಸ್ಟ್ ಸ್ವಯಂ ಸೇವಕರು ಜಾಗೃತಿ ಜಾಥಾದಲ್ಲಿ ಪಾಲ್ಗೊಂಡಿದ್ದರು. ಸ್ವಯಂ ಸೇವಕರು ಶುಚಿತ್ವ ಕಾರ್ಯವನ್ನು ಕೈಗೊಂಡರು.

11 ತಿಂಗಳಲ್ಲಿ ಹುಲಿ ದಾಹಕ್ಕೆ 13 ಜಾನುವಾರು ಬಲಿ

ಆತಂಕದಲ್ಲಿ ಗ್ರಾಮಸ್ಥರು, ಬೆಳೆಗಾರರು



ಮಡಿಕೇರಿ: ತಾಲೂಕಿನ ತಿತಿಮತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೋಣನಕಟ್ಟೆ, ನೋಕ್ಯ, ಬಾಳಾಜಿ, ಮಾಯಮುಡಿ, ಹೆಬ್ಬಾಲೆ, ಸಿದ್ದಾಪುರ, ರುದ್ರಬೀಡು ಸೇರಿದಂತೆ ಮತ್ತಿತರ ಗ್ರಾಮಗಳಲ್ಲಿ 11 ತಿಂಗಳಲ್ಲಿ ಹುಲಿಯ ದಾಹಕ್ಕೆ ಸುಮಾರು 13 ಜಾನುವಾರುಗಳು ಬಲಿಯಾಗಿದ್ದು, ಗ್ರಾಮಸ್ಥರಲ್ಲಿ ಹಾಗೂ ಬೆಳೆಗಾರರಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿದೆ.

ಹುಲಿ ಹಾವಳಿ ಬಗ್ಗೆ ಸರ್ಕಾರ ಹಾಗೂ ಶಾಸಕರ ಗಮನಕ್ಕೆ ತರುವ ನಿಟ್ಟಿನಲ್ಲಿ ತಿತಿಮತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೋಕ್ಯ ಗ್ರಾಮದಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ ನೇತೃತ್ವದಲ್ಲಿ ಗ್ರಾಮಸ್ಥರು ಸಭೆ ನಡೆಸಿದರು. ಸಭೆಗೆ ಆಗಮಿಸಿದ ತಿತಿಮತಿ ವಲಯ ಅರಣ್ಯಾಧಿಕಾರಿ ಗಂಗಾಧರ್ ಅವರನ್ನು ಗ್ರಾಮಸ್ಥರು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ವರ್ಷದಲ್ಲಿ 13 ಜಾನುವಾರುಗಳನ್ನು ಹುಲಿ ಬಲಿ ತೆಗೆದುಕೊಂಡಿದೆ. ತಿಂಗಳ ಅಂತರದಲ್ಲಿ 6 ಜಾನುವಾರು ಗಳನ್ನು ಹುಲಿ ಕೊಂದು ಹಾಕಿದ್ದು, ಹುಲಿ ಸೆರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಅರಣ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡದೆ, ನಿರ್ಲಕ್ಷ್ಯ ವಹಿಸಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

ಅರಣ್ಯಾಧಿಕಾರಿಗಳ ನಿರ್ಲಕ್ಷ್ಯಕ್ಕೆ ಧರ್ಮಜ ಉತ್ತಪ್ಪ ಹಾಗೂ ರಾಜ್ಯ ವನ್ಯಜೀವಿ ಸಂರಕ್ಷಣಾ ಘಟಕದ ಸದಸ್ಯ ಸಂಕೇತ್ ಪೂವಯ್ಯ ಸಹ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ನೋಕ್ಯ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಹುಲಿ ದಾಳಿಯಿಂದಾಗಿ ಸುಮಾರು 13 ಹಸುಗಳು ಮೃತಪಟ್ಟಿವೆ.

ಕೆಲವು ಅರಣ್ಯ ಇಲಾಖೆ ಅಧಿಕಾರಿಗಳು ಸಂಪೂರ್ಣವಾದ ಮಾಹಿತಿಯನ್ನು ನೀಡುವುದರಲ್ಲಿ ವಿಫಲರಾಗಿದ್ದಾರೆ ಎಂದು ಆರೋಪಿಸಿದರು. ವೈಜ್ಞಾನಿಕವಾದ ಮಾಹಿತಿ ಕಾರ್ಯಾಚರಣೆ ನಡೆಸಲು ಸಾಧ್ಯವಿಲ್ಲವೆಂದಾದರೆ ಇಲ್ಲಿಂದ ವರ್ಗಾವಣೆಯಾಗಿ ಬೇರೆಡೆಗೆ ತೆರಳುವಂತೆ ಆಕ್ರೋಶ ವ್ಯಕ್ತಪಡಿಸಿದರು.

ತಿತಿಮತಿ ವಲಯ ಅರಣ್ಯಾಧಿಕಾರಿ ಗಂಗಾಧರ್ ಮಾತನಾಡಿ, ಹುಲಿ ದಾಳಿ ಇರುವ ನಾಲ್ಕೈದು ಗ್ರಾಮಗಳನ್ನು ಗುರುತು ಮಾಡಿಕೊಳ್ಳಲಾಗಿದೆ. ಹುಲಿ ಗುರುತು ಪತ್ತೆ ಹಚ್ಚಿ ಸಾರ್ವಜನಿಕರಿಂದ ಮಾಹಿತಿ ಕಲೆಹಾಕಿ ಮೇಲಾಧಿಕಾರಿಗಳಿಗೆ ವರದಿ ನೀಡಿದ್ದು, ಹುಲಿಯನ್ನು ಸೆರೆ ಹಿಡಿದು ಸುರಕ್ಷಿತ ಬೇರೆ ಪ್ರದೇಶಕ್ಕೆ ವರ್ಗಾಯಿಸುವುದಾಗಿ ಮೇಲಾಧಿಕಾರಿಗಳಿಂದ ಅನುಮತಿ ದೊರೆತಿದೆ. ಸಾರ್ವಜನಿಕರ ಮಾಹಿತಿಯನ್ನು ಆಧರಿಸಿ ಹುಲಿ ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಲಾಗುವುದು ಎಂದರು.

ಈ ಸಂದರ್ಭ ಡಿಆರ್‌ಎಫ್‌ಓ ಪ್ರಶಾಂತ್, ಗಸ್ತು ಅರಣ್ಯಪಾಲಕರಾದ ಸಚಿನ್, ಗಗನ್, ಗ್ರಾಮಸ್ಥರಾದ ಚೆಪ್ಪುಡಿರ ಕಿರಣ್, ಚೆಪ್ಪುಡಿರ ಎಸ್. ಮುದ್ದಪ್ಪ, ಚೆಪ್ಪುಡಿರ ಸುರೇಶ್ ಗಣಪತಿ, ಚೆಪ್ಪುಡಿರ ನಿಖಿಲ್, ಚೆಪ್ಪುಡಿರ ಪ್ರಕಾಶ್ ಬೆಳ್ಯಪ್ಪ, ಗುಂಬಿರ ಸುಕೇಶ್, ಸತೀಶ್, ಶಿವು, ಚೆಂದ್ರಿಮಾಡ ಕಿಷಿ, ಬೆನ್ನಿ ಹಾಗೂ ಮತ್ತಿತರರು ಹಾಜರಿದ್ದರು.

ಇಂದು ಸಾಹಿತಿ ದಿ.ಗೋಪಾಲಕೃಷ್ಣ ದತ್ತಿ ಪ್ರಶಸ್ತಿ ಪ್ರದಾನ

ಮಡಿಕೇರಿ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಪತ್ರಕರ್ತರ ಸಂಘ ಸಂಯುಕ್ತ ಆಶ್ರಯದಲ್ಲಿ ಸಾಹಿತಿ ದಿ.ಬಿ.ಎಸ್.ಗೋಪಾಲಕೃಷ್ಣ ದತ್ತಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಮೇ 15ರ ಸಂಜೆ 5.30ಕ್ಕೆ ನಡೆಯಲಿದೆ. ರಾಜಲಕ್ಷ್ಮಿ ಗೋಪಾಲಕೃಷ್ಣ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಪರಿಷತ್ತಿನ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್, ಮಾಜಿ ಸಂಪಾದಕ ಟಿ.ಪಿ.ರಮೇಶ್, ಮಾಜಿ ಸಚಿವ ಎಂ.ಸಿ.ನಾಣಯ್ಯ, ಪ್ರಶಸ್ತಿ ಪುರಸ್ಕೃತರಾದ ಹಿರಿಯ ಸಾಹಿತಿ ನಾಗೇಶ್ ಕಾಲೂರು, ದತ್ತಿದಾನಿ ಬಿ.ಜಿ.ಅನಂತಶಯನ, ಪತ್ರಕರ್ತರ ಸಂಘದ ಅಧ್ಯಕ್ಷ ಅನಿಲ್ ಎಚ್.ಟಿ., ತಾಲೂಕು ಕಸಾಪ ಅಧ್ಯಕ್ಷ ಕಡ್ಲೇರ ತುಳಸಿ ಮೋಹನ್ ಪಾಲ್ಗೊಳ್ಳಲಿದ್ದಾರೆ.

ಕಾಶಿ ಕಾಳಯ್ಯ ನಿಧನ



ನಾಪೋಕ್ಲು: ಇಲ್ಲಿಗೆ ಸಮೀಪದ ಚೆಯ್ಯಂಡಾಣೆಯ, ಚೇಲಾವರ ಗ್ರಾಮದ ನಿವಾಸಿ ಮುಂಡಿಯೋಳಂಡ ಕಾಶಿ ಕಾಳಯ್ಯ (74) ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮೃತರ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಿಲ್ಲಾ ಉಸ್ತುವಾರಿ ಸಚಿವರಿಂದ ಪರಿಶಿಷ್ಟ ಜಾತಿ ಒಳಮೀಸಲಾತಿ ಸಮೀಕ್ಷೆ ಪ್ರಗತಿ ಪರಿಶೀಲನೆ

ಚಾಮರಾಜನಗರ: ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಜಾರಿ ಸಂಬಂಧ ಉಪವರ್ಗೀಕರಣ ಕೈಗೊಳ್ಳಲು ಅವಶ್ಯವಿರುವ ದತ್ತಾಂಶ ಸಂಗ್ರಹಕ್ಕಾಗಿ ನಡೆಸುತ್ತಿರುವ ಸಮೀಕ್ಷೆ ಕುರಿತ ಪ್ರಗತಿ ಪರಿಶೀಲನೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಪಿ.ಮಣಿವಣ್ಣನ್ ಇಂದು ನಡೆಯಿತು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸಮೀಕ್ಷಾ ಕಾರ್ಯ ಸಂಬಂಧ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ಪಡೆದರು. ರಾಜ್ಯದಲ್ಲಿ ಈಗಾಗಲೇ 17 ಲಕ್ಷ ಪರಿಶಿಷ್ಟ ಜಾತಿಯ ಮನೆಗಳಿಗೆ ಭೇಟಿ ನೀಡಿ ಸಮೀಕ್ಷೆ ನಡೆಸಲಾಗಿದೆ. ಒಟ್ಟಾರೆ 22 ಲಕ್ಷ ಪರಿಶಿಷ್ಟ ಜಾತಿಯವರ ಮನೆಗಳು ಇರಬಹುದೆಂದು ಅಂದಾಜಿಸಲಾಗಿದೆ. ಇನ್ನು ಒಂದು ವಾರದಲ್ಲಿ ಸಮೀಕ್ಷೆ ಪೂರ್ಣವಾಗಲಿದೆ ಎಂದರು

ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಮಾತನಾಡಿ, ಸಮೀಕ್ಷೆ ನಡೆಯುತ್ತಿರುವ ಸ್ಥಳಗಳಿಗೆ ತಾವು ಸಹ ಭೇಟಿ ನೀಡಿ ಪರಿಶೀಲಿಸಿದ್ದೇನೆ. ಶಿಕ್ಷಕರು ಗಣತಿದಾರರಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಧಿಕಾರಿಗಳು ಮೇಲ್ವಿಚಾರಣೆ ಮಾಡುತ್ತಿದ್ದು ಸಮೀಕ್ಷೆ ಕಾರ್ಯದಲ್ಲಿ ಮಾರ್ಗದರ್ಶನ ಮಾಡುತ್ತಿದ್ದಾರೆ ಎಂದರು. ರಾಜ್ಯದಲ್ಲಿ ಒಟ್ಟಾರೆ ಶೇ.68ರಷ್ಟು ಸಮೀಕ್ಷಾ ಕಾರ್ಯ ಮುಗಿದಿದೆ. ನಿಗದಿತ ವೇಳೆಗೆ ಶೇ.100ರಷ್ಟು ಸರ್ವೆ ಕಾರ್ಯ ಪೂರ್ಣವಾಗಲಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮುನಿರಾಜು ಸಭೆಗೆ ವಿವರ ನೀಡಿದರು.

ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್, ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷ ಹೆಚ್.ವಿ. ಚಂದ್ರು, ನಗರಸಭೆ ಅಧ್ಯಕ್ಷ ಸುರೇಶ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ.ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಸಭೆಯಲ್ಲಿ ಉಪಸ್ಥಿತರಿದ್ದರು. ಸಭೆಗೂ ಮೊದಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಪಿ. ಮಣಿವಣ್ಣನ್ ಕೊಳ್ಳೇಗಾಲ ತಾಲೂಕಿನ ಸತ್ತೇಗಾಲ, ಮತ್ತಿತರೆ ಭಾಗಗಳಿಗೆ ಭೇಟಿ ನೀಡಿ ಗಣತಿದಾರರ ಜೊತೆಯಲ್ಲಿಯೇ ಇದ್ದು ಸಮೀಕ್ಷೆ ಪರಿಶೀಲಿಸಿದರು.

ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮುನಿರಾಜು, ತಹಸೀಲ್ದಾರ್ ಐ.ಇ. ಬಸವರಾಜು, ಕ್ಷೇತ್ರ ಶಿಕ್ಷಣಾಧಿಕಾರಿ ಮಂಜುಳಾ ಇದ್ದರು.

ಕುಡಿಯುವ ನೀರಿನ ಯೋಜನೆ ಕಾಮಗಾರಿ ಪೂರ್ಣಗೊಳಿಸಿ

ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಆದೇಶ



ಚಾಮರಾಜನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅಧಿಕಾರಿಗಳ ಸಭೆಯನ್ನು ನಡೆಸಿದರು.

ಚಾಮರಾಜನಗರ, ಮೇ 14– ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮರ್ಪಕ ಪೂರೈಕೆಗೆ ಮೊದಲ ಆದ್ಯತೆ ನೀಡಬೇಕು. ಕುಡಿಯುವ ನೀರಿನ ಯೋಜನೆ ಕಾಮಗಾರಿಗಳನ್ನು ಯಾವುದೇ ವಿಳಂಬ ಮಾಡದೇ ತ್ವರಿತವಾಗಿ ಪೂರ್ಣಗೊಳಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅಧಿಕಾರಿಗಳಿಗೆ ಆದೇಶಿಸಿದ್ದಾರೆ.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಹವಾಮಾನ, ಕುಡಿಯುವ ನೀರು ನಿರ್ವಹಣೆ, ಜಾನುವಾರುಗಳ ಮೇವು ಹಾಗೂ ಅರಣ್ಯ ಇಲಾಖೆಗೆ ಸಂಬಂಧಿಸಿದ ಪ್ರಸ್ತಾವನೆಗಳು ಮತ್ತು ಇತರೆ ಇಲಾಖೆ ವಿಷಯಗಳ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕುಡಿಯುವ ನೀರಿಗೆ ಅಧಿಕಾರಿಗಳು ಪ್ರಥಮ ಪ್ರಾಶಸ್ತ್ಯ ನೀಡಬೇಕು. ಜಲ ಜೀವನ್ ಮಿಷನ್ (ಜೆಜೆಎಂ) ಅಡಿ ಗ್ರಾಮಗಳಲ್ಲಿ ಕೈಗೊಂಡಿರುವ ಕುಡಿಯುವ ನೀರಿನ ಕಾಮಗಾರಿಯನ್ನು ಸಂಪೂರ್ಣವಾಗಿ ಮುಗಿಸಿದ ಬಳಿಕವಷ್ಟೇ ಆಯಾಯ ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸಬೇಕು. ಈ ಬಗ್ಗೆ ದೂರು ಕೇಳಿ ಬರುತ್ತಿದೆ. ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಪರಿಶೀಲಿಸಿ ಕ್ರಮವಹಿಸಬೇಕೆಂದು ನಿರ್ದೇಶನ ನೀಡಿದರು.

ಬಿಎಸ್‌ಎನ್‌ಎಲ್ ಸಂಪರ್ಕ ಹಾಗೂ ಅರಣ್ಯ ಇಲಾಖೆಗೆ ಸಂಬಂಧಿಸಿದ ಪ್ರಸ್ತಾವನೆಗಳಿಗೆ ಕುರಿತು ಮಾತನಾಡಿದ ಸಮಾಜ ಕಲ್ಯಾಣ ಇಲಾಖೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ಮೇಜರ್ ಪಿ.ಮಣಿವಣ್ಣನ್ ಬಂಡೀಪುರದಲ್ಲಿ ಸ್ಥಾಪಿಸಲಾಗುವ ಟವರ್‌ಗೆ ಅವಶ್ಯವಿರುವ ಸೋಲಾರ್ ಸಂಪರ್ಕಕ್ಕೆ ಫಿಲ್ಲರ್‌ಗಳನ್ನು ನಿರ್ಮಾಣ ಮಾಡುವ ಸಂಬಂಧ ಪ್ರಸ್ತಾವನೆಯನ್ನು ಕಳುಹಿಸುವಂತೆ ಸೂಚಿಸಿದರು.

ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿ ಕುಡಿಯುವ ನೀರಿನ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಿ ಶುದ್ಧತೆಯ ಬಗ್ಗೆ ಖಾತರಿಪಡಿಸಿಕೊಳ್ಳಲಾಗುತ್ತಿದೆ. ಬೆಳಹಾನಿ, ವಸತಿ ಹಾನಿಯಂತಹ ಪ್ರಕರಣಗಳಿಗೆ ನಿಯಮಾನುಸಾರ ಪರಿಶೀಲಿಸಿ ತ್ವರಿತವಾಗಿ ಪರಿಹಾರ ಕಲ್ಪಿಸಲಾಗುತ್ತಿದೆ ಪರಿಹಾರ ಪೋರ್ಟಲ್‌ನ ಎಡಿಟ್ ಆಪ್ಷನ್ ತಾಂತ್ರಿಕ ತೊಡಕು ನಿವಾರಣೆಯಾಗಬೇಕಿದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಮಾತನಾಡಿ ಹನೂರು ಭಾಗದಲ್ಲಿ ಕೆಲವೆಡೆ ಕುಡಿಯುವ ನೀರಿನ ಸಮಸ್ಯೆಯಿದೆ. ಕೌದಳ್ಳಿ ಭಾಗದಲ್ಲಿ ಬೋರ್‌ವೆಲ್ ಕೊರೆಸಲು ಸ್ಥಳ ಗುರುತಿಸಲಾಗಿದೆ. ಆದರೆ ಅರಣ್ಯ ಇಲಾಖೆ ಅನುಮತಿ ಅಗತ್ಯವಿದೆ. ಈ ಬಗ್ಗೆ ಸೂಕ್ತ ನಿರ್ದೇಶನ ನೀಡಬೇಕಿದೆ ಎಂದರು.

ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷ ಹೆಚ್.ವಿ. ಚಂದ್ರು, ಚೂಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ, ನಗರಸಭೆ ಅಧ್ಯಕ್ಷ ಸುರೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಮಲೆ ಮಹದೇಶ್ವರ ವನ್ಯಜೀವಿ ಧಾಮದ ಡಿಎಫ್‌ಓ ಚಕ್ರಪಾಣಿ, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಮುಡಿಗುಂಡದಲ್ಲಿ ಜಿಲ್ಲಾಸ್ಪತ್ರೆಗೆ ಶಿಫಾರಸು: ಶಾಸಕ

ಕೊಳ್ಳೇಗಾಲ, ಮೇ 14– ಜಿಲ್ಲಾಸ್ಪತ್ರೆ ನಿರ್ಮಿಸುವ ಸಂಬಂಧ ಶಾಸಕ ಎ.ಆರ್. ಕೃಷ್ಣಮೂರ್ತಿ ಅಧಿಕಾರಿಗಳೊಂದಿಗೆ ಇಂದು ಸ್ಥಳ ಪರಿಶೀಲನೆ ನಡೆಸಿದರು.

ಮಹದೇಶ್ವರ ಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೊಳ್ಳೇಗಾಲಕ್ಕೆ 250 ಹಾಸಿಗೆ ಸಾಮರ್ಥ್ಯದ ಜಿಲ್ಲಾಸ್ಪತ್ರೆ ನಿರ್ಮಿಸುವ ತೀರ್ಮಾನ ಪ್ರಕಟಿಸಿದ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲಿಸಿ, ರೇಷ್ಮೆ ಇಲಾಖೆಗೆ ಸೇರಿದ ನಿರುಪಯುಕ್ತ 13 ಎಕರೆ ಜಾಗದಲ್ಲಿ ಆಸ್ಪತ್ರೆ ನಿರ್ಮಾಣಕ್ಕೆ ಶಾಸಕರು ಅಧಿಕಾರಿಗಳೊಂದಿಗೆ ಚರ್ಚಿಸಿದರು

ಮೆಡಿಕಲ್ ಕಾಲೇಜು ಇರುವ ಜಿಲ್ಲೆಗೆ ಹೆಚ್ಚುವರಿ ಜಿಲ್ಲಾಸ್ಪತ್ರೆ ನೀಡಲು ಸರ್ಕಾರ ಚಿಂತನೆ ನಡೆಸಿದ್ದು. ಅಂತೆಯೇ, ಕೊಳ್ಳೇಗಾಲಕ್ಕೆ ಜಿಲ್ಲಾಸ್ಪತ್ರೆ ಘೋಷಣೆ ಮಾಡಿತ್ತು. ಹಾಗಾಗಿ ಪಟ್ಟಣದ ಮುಡಿಗುಂಡದಲ್ಲಿರುವ ರೇಷ್ಮೆ ಇಲಾಖೆಯ ಜಾಗದಲ್ಲಿ ಕಚೇರಿ, ಫೌರಂ ಹೌಸ್ ಆಗಲಿ, ಚಾಕಿ ಸೆಂಟರ್ ಇರುವುದಿಲ್ಲ. ಪ್ರಶಾಂತವಾಗಿರುವ ಈ ಜಾಗ ಜಿಲ್ಲಾ ಮಟ್ಟದ ಆಸ್ಪತ್ರೆ ನಿರ್ಮಾಣಕ್ಕೆ ಸೂಕ್ತವಾದ ಜಾಗವೆಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅಧಿಕಾರಿಗಳಿಗೆ ಸೂಚಿಸುವೆ ಎಂದರು.

ನಗರಸಭೆ ಅಧ್ಯಕ್ಷೆ ರೇಖಾ ರಮೇಶ್, ಉಪಾಧ್ಯಕ್ಷ ಶಂಕರ್, ಸದಸ್ಯರಾದ ಪ್ರಕಾಶ್ ಶಂಕನಪುರ, ಶಾಂತರಾಜು, ಮಂಜುನಾಥ್, ಬಸ್ತಿಪುರ ರವಿ, ಡಿಎಚ್‌ಓ ಡಾ. ಚಿದಂಬರ, ತಹಸೀಲ್ದಾರ್ ಬಸವರಾಜು, ರೇಷ್ಮೆ ಇಲಾಖೆ ಉಪನಿರ್ದೇಶಕ ರಾಚಪ್ಪಾಜಿ, ಇನ್ನಿತರ ಅಧಿಕಾರಿಗಳು ಹಾಜರಿದ್ದರು.



250 ಹಾಸಿಗೆ ಸಾಮರ್ಥ್ಯದ ಜಿಲ್ಲಾಸ್ಪತ್ರೆ ನಿರ್ಮಾಣಕ್ಕೆ ಮುಡಿಗುಂಡ ರೇಷ್ಮೆ ಇಲಾಖೆ ಜಾಗವನ್ನು ಅಧಿಕಾರಿಗಳ ಜೊತೆ ಶಾಸಕ ಎಆರ್‌ಕೆ ಪರಿಶೀಲಿಸಿದರು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ

ಮಾಜಿ ಶಾಸಕ ಆರ್.ನರೇಂದ್ರ ಭರ್ಜರಿ ಜಯ



ಹನೂರು: ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಸಾಲಗಾರರಲ್ಲದ ಕ್ಷೇತ್ರದಿಂದ ಮಾಜಿ ಶಾಸಕ ಆರ್. ನರೇಂದ್ರ ಭರ್ಜರಿ ಜಯ ಸಾಧಿಸುವ ಮೂಲಕ ಜೆಡಿಎಸ್ ಶಾಸಕ ಎಂ.ಆರ್. ಮಂಜುನಾಥ್ ಬಣಕ್ಕೆ ಮುಖಭಂಗ ಮಾಡಿದ್ದಾರೆ.

ಚುನಾವಣೆಯನ್ನು ಕಾಂಗ್ರೆಸ್ ಹಾಗೂ ಮೈತ್ರಿ ಪಕ್ಷಗಳಾದ ಬಿಜೆಪಿ, ಜೆಡಿಎಸ್ ರಾಜಕೀಯ ಪ್ರತಿಷ್ಠೆಯನ್ನಾಗಿ ತೆಗೆದುಕೊಂಡು ಜಿದ್ದಾಜಿದ್ದಿನಿಂದ ಮತ ಪ್ರಚಾರ ನಡೆಸಿದ್ದರು.

ಮಾಜಿ ಶಾಸಕ ಆರ್.ನರೇಂದ್ರ ಅವರನ್ನು ಶತಾಯಗತಾಯ ಸೋಲಿಸಲೇಬೇಕೆಂದು ಹಾಲಿ ಶಾಸಕ ಎಂ.ಆರ್. ಮಂಜುನಾಥ್ ಸೇರಿದಂತೆ ಬಿಜೆಪಿಯ ಮುಖಂಡರು ಶ್ರಮಿಸಿದ್ದರು. ಆದರೆ ಮತದಾರರು ನರೇಂದ್ರ ಅವರ ಕೈ ಬಲಪಡಿಸುವ ಮೂಲಕ ಹನೂರು ಕ್ಷೇತ್ರದಲ್ಲಿ ಮತ್ತೊಮ್ಮೆ ರಾಜೂಗೌಡ ಕುಟುಂಬ ತನ್ನ ಪ್ರಾಬಲ್ಯ ಸಾಧಿಸಿದೆ.

270 ಮಂದಿ ಮತ ಚಲಾವಣೆ : ಸಾಲಗಾರರಲ್ಲದ ಕ್ಷೇತ್ರದಲ್ಲಿ 274 ಮತದಾರರಿದ್ದು, 270 ಮತದಾರರು ಮತ ಚಲಾವಣೆ ಮಾಡಿದ್ದರು. ಈ ಪೈಕಿ ಮೈತ್ರಿ ಪಕ್ಷದ ಅಭ್ಯರ್ಥಿ ಎಸ್.ಗಿರೀಶ್ 97 ಮತ ಹಾಗೂ ಮಾಜಿ ಶಾಸಕ ಆರ್. ನರೇಂದ್ರ 171 ಮತಗಳನ್ನು ಪಡೆಯುವ ಮೂಲಕ ಭರ್ಜರಿ ಜಯಗಳಿಸಿದರು.

ಇಬ್ಬರು ಮತದಾರರು ಮತ ಚಲಾವಣೆ ಮಾಡುವಾಗ ಹೆಬ್ಬೆಟ್ಟು ಒತ್ತಿರುವುದರಿಂದ ಎರಡು ಮತಗಳು ತಿರಸ್ಕೃತಗೊಂಡಿದೆ.

ವಾಗ್ವಾದ : ಸಂಘಕ್ಕೆ ಬೆಳಗ್ಗೆ 10 ಗಂಟೆಯಿಂದ ಮತ ಚಲಾವಣೆ ಪ್ರಾರಂಭವಾದಾಗ ಮೈತ್ರಿ ಪಕ್ಷದ ಅಭ್ಯರ್ಥಿ ಗಿರೀಶ್ ಮತಗಟ್ಟೆಯ ಸಮೀಪವೇ ಮತದಾರರನ್ನು ಓಲೈಕೆ ಮಾಡುತ್ತಿರುವುದನ್ನು ನರೇಂದ್ರ ಹಾಗೂ ಬೆಂಬಲಿಗರು ಪ್ರಶ್ನಿಸಿದರು. ಈ ವೇಳೆ ಎರಡು ಗುಂಪುಗಳ ನಡುವೆ ಮಾತಿನ ಚಕಮಕಿ ನಡೆಯಿತು. ಇನ್‌ಸ್ಪೆಕ್ಟರ್ ಆನಂದ ಮೂರ್ತಿ ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು. ಚುನಾವಣೆಯ ಹಿನ್ನೆಲೆಯಲ್ಲಿ ಇನ್‌ಸ್ಪೆಕ್ಟರ್ ಆನಂದ್‌ಮೂರ್ತಿ ನೇತೃತ್ವದಲ್ಲಿ ರಾಮಾಪುರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಚಿಕ್ಕರಾಜಶೆಟ್ಟಿ, ಮೂವರು ಸಬ್ ಇನ್‌ಸ್ಪೆಕ್ಟರ್, 50ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿತ್ತು.

ಇಂದು ಹಗಲು ವೇಳೆ 3 ಫೇಸ್ ವಿದ್ಯುತ್ ರದ್ದು

ಚಾಮರಾಜನಗರ: ಬೇಗೂರಿನಲ್ಲಿ ಹೊಸ ಕೇಬಲ್‌ಗಳನ್ನು ಬದಲಾಯಿಸುವ ಕಾಮಗಾರಿಯನ್ನು ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಮೇ 15ರವರೆಗೆ 11 ಕೆವಿ ಐಪಿ ಮಾರ್ಗಗಳಿಗೆ ಹಗಲು ವೇಳೆಯಲ್ಲಿ ನೀಡಲಾಗುತ್ತಿದ್ದ 3 ಫೇಸ್ ವಿದ್ಯುತ್ ಸರಬರಾಜನ್ನು ರಾತ್ರಿ 12 ರಿಂದ ಬೆಳಿಗ್ಗೆ 6ರವರೆಗೆ ಸರಬರಾಜುಲಾಗುವುದು ಎಂದು ಸೆಸ್ಕಾಂ ತಿಳಿಸಿದೆ.

ಮಲ್ಲಯ್ಯನಪುರ, ಬರಗಿ, ಕೋಡಿಹಳ್ಳಿ, ಬೇರಂಬಾಡಿ, ನೇನೆಕಟ್ಟೆ ವೀರನಪುರ, ಮೈದನಹಳ್ಳಿ, ಬಾಚಳ್ಳಿ, ಬೊಮ್ಮಲಾಪುರ, ದಾರಿಬೇಗೂರು, ಕೊಡಸೋಗೆ ಮತ್ತು ಹೆಗ್ಗವಾಡಿ, ಕಬ್ಬಳ್ಳಿ, ಸೋಮಳ್ಳಿ ಪಡಗೂರು, ಬಲಚವಾಡಿ, ನಿಟ್ರೆ, ಅಗತಗೌಡನಹಳ್ಳಿ ಹಾಗೂ ಮೂಡ್ನಾಕೂಡು, ಮುಕ್ಕಡಹಳ್ಳಿ, ಉಡಿಗಾಲ, ಕಲ್ಪುರ, ದೇವಲಾಪುರ ಹಾಗೂ ಹೊಂಗಹಳ್ಳಿ ಐಪಿ, ಮುಂಟಿಪುರ ಐಪಿ, ಆಲತ್ತೂರು ಐಪಿ ಮತ್ತು ಮೂಕಳ್ಳಿ ಕಾಲೋನಿ ಐಪಿ, ಹಂಗಳ, ಶಿವಪುರ, ದೇವರಹಳ್ಳಿ, ಹೊನ್ನೇಗೌಡನಹಳ್ಳಿ, ಮಲ್ಲಯ್ಯನಪುರ, ಬೊಮ್ಮನಹಳ್ಳಿ, ಕುಂದಗೆರೆ, ಕಟ್ನವಾಡಿ, ದೇಪಾಪುರ, ಕಗ್ಗಳ, ಕೆಲಸಿಪುರ, ಲಕ್ಕೂರು ಹಾಗೂ ಸುತ್ತಮುತ್ತಲ ಪ್ರದೇಶಗಳಿಗೆ ಸರಿದೂಗಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ತಾಯಿ, ಮಗು ಕಾಣೆ: ಸುಳಿವಿಗೆ ಸಹಕರಿಸಲು ಮನವಿ



ಚಾಮರಾಜನಗರ: ಅಟ್ಟುಗೂಳಿಪುರ ಗ್ರಾಮದಿಂದ ಮಹಿಳೆ ಮತ್ತು ಮಗು ಕಾಣೆಯಾಗಿರುವ ಬಗ್ಗೆ ವರದಿಯಾಗಿದೆ. 25 ವರ್ಷದ ಸೌಂದರ್ಯ 5 ಅಡಿ ಎತ್ತರ, ಸದೃಢ ಮೈಕಟ್ಟು, ಎಣ್ಣೆಗೆಂಪು ಮೈ ಬಣ್ಣ ಹೊಂದಿದ್ದು, ಎಡತೋಳಿನಲ್ಲಿ ಎಸ್.ಎಸ್. ಅಕ್ಷರದ ಹಚ್ಚೆ ಗುರುತು ಇರುತ್ತದೆ. ಕನ್ನಡ ಮತ್ತು ತಮಿಳು ಭಾಷೆ ಮಾತನಾಡುತ್ತಾರೆ. ಮನೆಯಿಂದ ಹೋಗುವಾಗ ಗುಲಾಬಿ ಬಣ್ಣದ ಚೂಡಿದಾರ್ ಧರಿಸಿದ್ದರು.

ತಮಿಳುನಾಡಿನ ಗೋಬಿ ತಾಲೂಕು ಶಿರವಳ್ಳೂರು ಗ್ರಾಮದಲ್ಲಿ ವಾಸವಾಗಿದ್ದ ಇವರು ಕಳೆದ ಏಪ್ರಿಲ್ 23ರಂದು ಅಟ್ಟುಗೂಳಿಪುರ ಗ್ರಾಮಕ್ಕೆ ಬಂದಿದ್ದರು. ಇವರ ಸುಳಿವು ದೊರೆತಲ್ಲಿ ಚಾಮರಾಜನಗರ ಜಿಲ್ಲಾ ಪೊಲೀಸ್ ಅಧೀಕ್ಷಕರ ದೂ.ಸಂ.08226–222243, ಚಾಮರಾಜನಗರ ಪೂರ್ವ ಠಾಣೆ ದೂ.ಸಂ. 08226–222052, ಮೊ.ಸಂ.9480804648 ಸಂಪರ್ಕಿಸುವಂತೆ ಚಾಮರಾಜನಗರ ಪೂರ್ವ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೋರು ಗಾಳಿ: ರೆಂಬೆಬಿದ್ದು ಯುವಕನ ಕಾಲು ಮುರಿತ



ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಸಿ.ಸಾಗರ್ ಚಿಕಿತ್ಸೆ ಪಡೆಯುತ್ತಿರುವುದು.

ಯಳಂದೂರು: ತಾಲೂಕಿನ ವಡಗೆರೆ ಗ್ರಾಮದಲ್ಲಿ ಮಂಗಳವಾರ ಜೋರು ಗಾಳಿಗೆ ಆಲದ ಮರದ ಕೊಂಬೆ ಬಿದ್ದು ವ್ಯಕ್ತಿಯೊಬ್ಬರು ಗಾಯಗೊಂಡಿರುವ ಘಟನೆ ನಡೆದಿದೆ.

ಗ್ರಾಮದ ಚಾಮೇಗೌಡ ರವರ ಪುತ್ರ ಸಿ.ಸಾಗರ್(21) ವಡಗೆರೆ ಗ್ರಾಮದ ಅಂಚಿನಲ್ಲಿರುವ ರಂಗನಕಟ್ಟೆ ಬಳಿ ಕುಳಿತಿದ್ದ ಸಂದರ್ಭದಲ್ಲಿ ಜೋರು ಗಾಳಿ ಬೀಸಿದೆ. ಈ ಸಂದರ್ಭದಲ್ಲಿ ಆಲದ ಮರದ ದೊಡ್ಡ ಕೊಂಬೆಯೊಂದು ಈತನ ಬಲ ಕಾಲಿನ ಮೇಲೆ ಬಿದ್ದಿದೆ. ಬಿದ್ದ ರಭಸಕ್ಕೆ ಕಾಲಿನ ಮೂಳೆ ಮುರಿದಿದ್ದು ಗಂಭೀರವಾಗಿ ಗಾಯವಾಗಿದೆ. ಕೂಡಲೇ ಈತನನ್ನು ಚಾಮರಾಜನಗರ ಜಿಲ್ಲಾಸ್ಪತ್ರೆಗೆ ಸೇರಿಸಲಾಗಿದೆ. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ಸಂಬಂಧ ಕಂದಾಯ ಇಲಾಖೆಗೆ ಸಂಬಂಧಿಕರು ಮಾಹಿತಿ ನೀಡಿದ್ದಾರೆ. ಈ ಬಗ್ಗೆ ತಹಸೀಲ್ದಾರ್ ಬಸವರಾಜು ಮಾತನಾಡಿ ಸಂಬಂಧಪಟ್ಟವರಿಂದ ಈ ಬಗ್ಗೆ ಮಾಹಿತಿ ಪಡೆದು ಈತನ ಚಿಕಿತ್ಸಾ ವೆಚ್ಚ ಭರಿಸಲು ಕ್ರಮ ವಹಿಸಲಾಗುವುದು ಎಂದು ಮಾಹಿತಿ ನೀಡಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಹಾಗೂ ಮೈಸೂರಿನ ಸುತ್ತ ಮುತ್ತಲು ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡು ಬೇಕಾಗಿದ್ದಾರೆ. 8hrs ಪಾಳಿಗೆ ESI, PF ಕಟ್ ಆಗಿ ತಿಂಗಳ ವೇತನ–16000/– ಸಂಪರ್ಕಿಸಿ:
9945489996

ಜಮೀನು ಮಾರಾಟಕ್ಕಿದೆ
10 ಗುಂಟೆ ಜಮೀನು ಶ್ರೀರಾಂಪುರ ರಿಂಗ್ ರಸ್ತೆಯಿಂದ 15 ಕಿ.ಮೀನಲ್ಲಿ 15 ಲಕ್ಷ ಹಾಗೂ 1.5 ಎಕರೆ ತೋಟ ಹುಲ್ಲಹಳ್ಳಿ ಇಂದ 5 ಕಿ.ಮೀನಲ್ಲಿ 80 ಲಕ್ಷಗಳಿಗೆ ಮಾರಾಟಕ್ಕಿದೆ.
(Owner)
8197665413

ಬೇಕಾಗಿದ್ದಾರೆ
ಲೇಡೀಸ್ ಟೈಲರ್ಸ್ ಮತ್ತು ಹೆಲ್ಪರ್ಸ್ ಬೇಕಾಗಿದ್ದಾರೆ. ಮತ್ತು ಟೆಲಿ ಮಾರ್ಕೆಟಿಂಗ್ ಹುಡುಗಿಯರು ಬೇಕಾಗಿದ್ದಾರೆ. ಮಧ್ಯಾಹ್ನ ಊಟದ ವ್ಯವಸ್ಥೆ ಇರುತ್ತದೆ. ಸ್ಥಳ: ಬೆಳವಾಡಿ ಕೃಷ್ಣ ಬೇಕರಿ ಮೈಸೂರು–ಹುಣಸೂರು ಮೇನ್ ರೋಡ್
7676841708

ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯ ರೈತ ಬಾಂಧವರಿಗೆ ಒಂದು ಸದಾವಕಾಶ
ತೆಂಗು ಸಸಿಗಳನ್ನು ಬೆಳೆಸಿಕೊಡುವವರಿಗೆ ನಾವು ಬ್ಯಾಂಕಿನ ಸಾಲ ಸೌಲಭ್ಯ ಒದಗಿಸಿ ಸಸಿಗಳನ್ನು ಮಾರಾಟ ಮಾಡಿಕೊಡಲಾಗುವುದು. ಕೂಡಲೇ ಸಂಪರ್ಕಿಸಿ:
Mob: 8951525007

ಬೇಕಾಗಿದ್ದಾರೆ
ಆಶ್ರಮದಲ್ಲಿ ಉಳಿದುಕೊಂಡು ಕೆಲಸ ಮಾಡುವಂಥವರು, ಮಹಿಳೆಯರು ಬೇಕಾಗಿದ್ದಾರೆ. ಎಸ್ಎಸ್ಎಲ್‌ಸಿ, ಪಿಯುಸಿ, ಫೇಲ್/ಪಾಸ್ ಊಟ ವಸತಿ ದೊರೆಯುತ್ತದೆ
9110455297

ಶ್ರೀ ಬಾಲಾಜಿ ಟೂರಿಸ್ಟ್
20.6.25–10 ದಿನ: ಹೈದ್ರಾಬಾದ್, ರಾಮೋಜಿ ಫಿಲಂಸಿಟಿ ಭದ್ರಾಚಲಂ, ಸಿಂಹಾಚಲಂ, ಅನ್ನಾವರಂ, ಅಹೋಬಿಲಂ,
25.07.25–7 ದಿನ: ದೆಹಲಿ, ಆಗ್ರಾ, ಕಾಶೀ, ಅಯೋಧ್ಯೆ, ಮಥುರಾ, ಬೃಂದಾವನ, ಗಯಾ, ಬುದ್ಧಗಯಾ, ಪ್ರಯಾಗ್
05.09.25–14 ದಿನ: ಚಾರ್‌ಧಾಮ್ ಯಾತ್ರೆ ದೆಹಲಿ, ಯಮುನೋತ್ರಿ, ಗಂಗೋತ್ರಿ, ಕೇದಾರ್‌ನಾಥ್, ಬದ್ರಿನಾಥ್ (ಸರ್ಕಾರದಿಂದ ರೂ.20,000/– ಸಬ್ಸಿಡಿ ದೊರೆಯುತ್ತದೆ)
04.10.25–14 ದಿನ: ಗುಜರಾತ್ ರಾಜಸ್ಥಾನ ಮಧ್ಯಪ್ರದೇಶ ಜೈಪುರ್, ದ್ವಾರಕ, 4ಜ್ಯೋತಿರ್ಲಿಂಗಗಳು, Statue of Unity
9945770486

ಬಾಡಿಗೆ/ಭೋಗ್ಯಕ್ಕೆ
20x30 ಅಳತೆಯ 2 BHK House. ಬಾಡಿಗೆಗೆ ಅಥವಾ ಭೋಗ್ಯಕ್ಕೆ ದೊರೆಯುತ್ತದೆ. ನಂ.2224, ಏ ಬ್ಲಾಕ್, 3ನೇ ಕ್ರಾಸ್, ಕುವೆಂಪು ನಗರ, ಗಾನಭಾರತಿ ಸಂಗೀತ ಪಾಠ ಶಾಲೆ ಹಿಂಭಾಗ, ಮೈಸೂರು.
9980410580

ನಿವೇಶನ ಮಾರಾಟಕ್ಕಿದೆ
ಮಣಿಪಾಲ್ ಹಾಸ್ಪಿಟಲ್ ನಿಂದ 4 ಕಿಲೋ ಮೀಟರ್ ದೂರದ ಎಂಐಟಿ ಕಾಲೇಜು ಹಿಂಭಾಗ ಧಾತ್ರಿ ಲೇಔಟ್ ಆಗುತ್ತೆ 3211 ಸ್ಕ್ವೇರ್ ಫೀಟ್ ನಿವೇಶ ಮಾರಾಟಕ್ಕಿದೆ ಒಂದು ಸ್ಕ್ವೇರ್ ಫೀಟ್ Rs 1950 ದೂರವಾಣಿ ಸಂಖ್ಯೆ
9449333789
9480083326

ತಕ್ಷಣ ಬೇಕಾಗಿದ್ದಾರೆ
Security Guard ಬೇಕಾಗಿದ್ದಾರೆ. ಸಂಬಳ: 19000/- 26 Days ವಯಸ್ಸು 19 ರಿಂದ 45
House Keeping ಮಹಿಳೆಯರು ಬೇಕಾಗಿದ್ದಾರೆ. ಸಂಬಳ 10000/– ವಿದ್ಯಾಭ್ಯಾಸ: SSLC, PUC, Any Degree Pass ESI, PF, Bonus ಸೌಲಭ್ಯವಿದೆ.
9880116412

ಸ್ಕೂಲ್ ಯೂನಿಫಾರಂ ಹೋಲ್‌ಸೇಲ್ ಬೆಲೆಯಲ್ಲಿ

ಸದ್ವಿದ್ಯ, ಅಮೃತಮಯಿ ನಟರಾಜ ಕಾನ್ವೆಂಟ್ ನಳಂದ, ಮರಿಮಲ್ಲಪ್ಪ ಅವಿಲ, ರೋಟರಿವೆಸ್ಟ್ ಆದರ್ಶ, ಸೆಂಟ್‌ಮೇರೀಸ್ ಸೆಂಟ್ ರೋಸೆಲೋ
ಭಾವಸಾರ್ ಶ್ರೀಗಣೇಶ್
ಅಗ್ರಹಾರ, ಬಸವೇಶ್ವರ ರಸ್ತೆ 5ನೇ ಕ್ರಾಸ್, ಮೈಸೂರು

ಹೊಸ ಮನೆ ಮಾರಾಟಕ್ಕಿದೆ
20X30 NF
RS. 39 ಲಕ್ಷ
FULLY FURNISEHED
ಗುರೂರು 4ನೇ ಬ್ಲಾಕ್ ಮೈಸೂರು
9379056972

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempuragar, Mysuru
MYSURU 9611028523 MANGALORE 9343142258

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596



SUNZONE SOLAR SYSTEM
VM Double Road, Kuvempunagar, Mysuru
9845175443

ಸುವರ್ಣಾವಕಾಶ
ಪ್ರಸಿದ್ಧ ಶೋರೂಂ ಮತ್ತು ಕಂಪನಿ & ವರ್ಕ್ ಫ್ರಮ್ ಹೋಂ ಕೆಲಸಕ್ಕೆ ಯುವಕರು ಮತ್ತು ಯುವತಿರು 22000/- Salary ಗ್ಯಾರೆಂಟಿ ಕೆಲಸ
9482369816
9482360136

WANTED TEACHERS
Social Science- BEd
Physical Education
Hindi - DEd/BEd
Jyothi Shikshana Samsthe
Kuvempunagar
9886400349
9986332244

WANTED
Field Executive
ಫೀಲ್ಡ್ ಎಕ್ಸಿಕ್ಯೂಟಿವ್ ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗರು/ಹುಡುಗಿಯರು
8050804575

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

MAKE TO SUIT OFFICE SPACE FOR RENT
(FIRST FLOOR - 300 sqft)
PRIME LOCATION ABOVE SAMAGRA SUPER STORE VIJAYANAGAR 1st STAGE,MYSORE
FACILITIES AVAILABLE
ADIABATIC A/C, LIFT, CCTV, GENERATOR,USP BACKUP, AMPLE PARKING
CONTACT:9606030930

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9606838940

ಉದ್ಯೋಗ ಅವಕಾಶ
ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ, 15200 - 86000.
Mob: 7892046990

REQUIRE
Cook and Assistant cook Waiters for full time & Part Time For reputed Restaurant
9148709148

ತಕ್ಷಣ ಬೇಕಾಗಿದ್ದಾರೆ
ನಮ್ಮ ಹೆಲ್ತ್‌ಕೇರ್ ಸಂಸ್ಥೆಗೆ ಮಹಿಳೆಯರು ಹಾಗೂ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ: 15000/- to 26000/- ಮೊದಲು ಬಂದವರಿಗೆ ಆದ್ಯತೆ (ಸರ್ಕಾರಿ ನೋಂದಾಯಿತ ಸಂಸ್ಥೆ)
9739595555
9513203333

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

RAMDOOT HOLIDAYS
HYDERABAD & SRIRANGAM
Ramanujas Spcl - 108 Divya Disam
TANJORE – KUMBHAKONAM
CHIDAMBARAM – 4 Days Package
Luxury Bus, Train & Flight

Well Planned Weekend Tour Pkg		
1) Dandeli	26th June	3 Days
2) Pancharanga - Sri rangam - Mukti Ranga -	19th June	3 Days

Call - 8618766635

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ತಕ್ಷಣ ಬೇಕಾಗಿದ್ದಾರೆ
ಮೈಸೂರು ಸ್ಥಳೀಯ ಮತ್ತು ಬೆಂಗಳೂರಿಗೆ ಕಂಟೇನರ್ ವಾಹನಗಳಿಗೆ ಟ್ರಕ್ ಚಾಲಕರು ತಕ್ಷಣ ಬೇಕಾಗಿದ್ದಾರೆ. ಪಿಎಫ್ ಮತ್ತು ಇಎಸ್ಐ ಸೌಲಭ್ಯ ಲಭ್ಯವಿದೆ.
Mob: 9341623350

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಬೇಕಾಗಿದ್ದಾರೆ
Room Boys
ಮಧ್ಯಾಹ್ನ 3 ರಿಂದ 6 ಗಂಟೆ
Ganesh Prasad Lodge Shivarampet, Mysore-1
9986756866

ಮುಡಾ ನೋಂದಾಯಿತ ಸೈಟ್ ಮಾರಾಟಕ್ಕಿದೆ
30x43 E/F
ಹಿಂಭಾಗದಲ್ಲಿ ಪಾರ್ಕ್
BVL ರೆಡ್ಡಿ ಲೇಔಟ್
4ನೇ ಹಂತ ಸಂಪರ್ಕಿಸಿ
7353498918

Water Proofing
Specialists in Dr. Fixit Authorised Terrace Slooped Roof, Toilet, Bathroom, Exterior cracks, any leakage controlling, old building repair. 5 years guarantee.
Mob: 9900848393

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7996497954

ಅನುಬಂಧ ಮ್ಯಾರೇಜಸ್
ವಧುವರರನ್ನು ಹುಡುಕಲು ಸಹಾಯ ಬೇಕೆ ?
ನಮಗೆ ಕರೆ ಮಾಡಿ
6361740552, 9449408551

Wanted Teachers
B.A. / MA, B.Ed. - 2 Posts English ; Hindi, B.Ed. - 2 posts B.Sc., B.Ed. - 2 Posts ; Any Degree (English medium): 2 posts. SDET School, Post Office road, near Water Tank, Siddalingapura, Mysore.
9845924194, 9535587045

We need 2BHK house (ground / 1st floor) for rent preferably in Vijayanagar 1st, 2nd, 3rd and 4th stage hebbal or brindavan extension Mysore Budget 10-12k.
9591944080

ಬೇಕಾಗಿದ್ದಾರೆ
3rd Standerd Studentಗೆ Tuition ಮಾಡಲು School Teacher ಬೇಕಾಗಿದ್ದಾರೆ
8073300783

WANTED
Teaching staff for reputed institution (Experience preferred) for Hindi, English, Science & Maths. Transport facilities available. Drop your resume through WhatsApp
Contact no:
8971577685, 9980631121

LENIN CONVENT
Srirangapatna
WANTED TEACHERS
For all subjects. Freshers can apply. Sub: English - 1 ; Mathematics & Science - 1 ; Hindi - 1 ; Social Science: 1 ; Kannada - 1.
9844854461, 6362000950
Immediately appointment

A1 NILAMBUR TEAK FOR SALE
Above 4 ft., 5 Ft Girth total 1450 CFT golden colour, seasonal wood.
9481653627, 8792212982

TEACHERS WANTED
S.G.C.M. Education Trust (R)
T.Narasipura, Mysore Dist.
English Medium
PUC, D.Ed. - 2 Posts
B.A., B.Ed. - Kannada - 1 Post
B.A., B.Ed. - Hindi - 1 Post
B.Sc., B.Ed. - PCM - 1 Post
B.Sc., B.Ed. CBZ - 1 Post
9880361180, 9742496113

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್
8197383645, 9008711654

ಜಮೀನು ಬೇಕಾಗಿದೆ
ಮೈಸೂರು ನಗರದಿಂದ 15 ಕಿ.ಮೀ ವ್ಯಾಪ್ತಿಯೊಳಗೆ ಬಡಾವಣೆ ನಿರ್ಮಿಸಲು ಯೋಗ್ಯವಾದ ಜಮೀನುಳ್ಳ ಮಾಲೀಕರು ಮಾತ್ರ ಸಂಪರ್ಕಿಸಿ
8073300783
7411356023

ಅಡುಗೆ ಮತ್ತು ಮನೆ ಕೆಲಸ ಮಾಡಲು ಬೇಕಾಗಿದ್ದಾರೆ. ಸಂಬಳ: 8000/– (ಮಹಿಳೆಯರಿಗೆ ಆದ್ಯತೆ) 4ನೇ ಕ್ರಾಸ್ ವಿಜಯನಗರ, ಮೈಸೂರು
7975269652

Wanted Immediately
Interview on 19-5-2025 at 11 am
* Wardens (Male & Female)
* SWO Male
Any Degree holders can apply.
Address: VIBRANT PU COLLEGE, Mysuru Branch
Mail: info@vibrantpucollege.com
9036373627, 9741016600

ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ
(C.S.C) ಕಾಮನ್ ಸರ್ವೀಸ್ ಸೆಂಟರ್‌ನಲ್ಲಿ ಕುವೆಂಪುನಗರ ಕಾಂಪ್ಲೆಕ್ಸ್ ಹತ್ತಿರ, ಮೈಸೂರು
9060400123, 9945303918

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಫೀಲ್ಡ್ ಸೂಪರ್ ವೈಸರ್‌ಗಳು
2) ಸೆಕ್ಯೂರಿಟಿ ಗಾರ್ಡುಗಳು (ನೈಟ್ ಶಿಫ್ಟ್)
3) ಹೌಸ್‌ಕೀಪಿರ್‌ಗಳು (ಮಹಿಳೆಯರು / ಪುರುಷ)
9242406261, 9686422400

ಹೊಸ ಮನೆ ಮತ್ತು ಸೈಟ್ ಮಾರಾಟಕ್ಕಿದೆ
40x60 E/F, 3 BHK ಪಾರ್ಕ್ ಫೇಸ್, 80 ಅಡಿ ರಸ್ತೆ ಮತ್ತು 20x30, 60x40 ಸೈಟ್ ಮಾರಾಟಕ್ಕಿದೆ
ಲಾಲ್ ಬಹದ್ದೂರ್ ಶಾಸ್ತ್ರಿನಗರ ಮೈಸೂರು
Mob: 9448601655

SITES FOR SALE
30x40
40x60
Sriprampura Ring Road, Mysuru
Mob: 9945321020

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಜೆ.ಪಿನಗರ ಶ್ರೀರಾಂಪುರ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC & ಮೇಲ್ಪಟ್ಟು ವಯೋಮಿತಿ: 50 ವರ್ಷದೊಳಗೆ ಸಂಬಳ: 16000/- ESI, PF ಸೌಲಭ್ಯವಿರುತ್ತದೆ.
9620667819
9620777819

ತಕ್ಷಣ ಬೇಕಾಗಿದ್ದಾರೆ
* ದೋಸೆ ಭಟ್ರು–3
* ರುಬ್ಬುವವರು/ಹೆಚ್ಚುವವರು–3
* ಕೌಂಟರ್ ಬಾಯ್ಸ್–4
* ಕ್ಯಾಪ್ಟನ್–3
* ಕ್ಯಾಷಿಯರ್–2
9449646645

ನಮ್ಮಲ್ಲಿ ಬಾದಾಮಿ, ಗೋಡಂಬಿ, ಪಿಸ್ತಾ, ಅಂಜೂರ, ಒಣದ್ರಾಕ್ಷಿ, ಖರ್ಜೂರ, ಮುಂತಾದ ಡ್ರೈಫ್ರೂಟ್ಸ್ ದೊರೆಯುತ್ತದೆ. (5 ಕಿ.ಮೀ ವರೆಗೂ ಉಚಿತ ಡೆಲಿವರಿ) ಸಂಪರ್ಕಿಸಿ:
ರಾಜ್ ಗುರು ಡ್ರೈಫ್ರೂಟ್, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು
7022293342
9845460211

PRAKRUTHI PROPERTIES
SITES FOR SALE
30x40 Commercial Site Ring Road Facing @Aditya Circle ,
MUDA Approved 30x40, 30x50 Sites Near KHB Kenchalgud
30x55 Old Hs @ Kuvempu Nagar
30x40 Dplx Hs @ Harividyala, Bgdi
20x30 Sites & House Near Kuvempu Nagar
30x50 Crnr Site @ MIT Bangalore Rd
Sites also available Near RT Nagar, Bogadi in & around Mysore
95386 90359, 90359 90359

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು.
Mob.: 9986926101

NSE Nypunya School of Excellence MYSURU
DATTAGALLI and R.T. NAGAR
ಬೇಕಾಗಿದ್ದಾರೆ
ಶಾಲಾ ಬಸ್ ಚಲಾಯಿಸಲು ಹೆವಿ ಲೈಸೆನ್ಸ್ ಉಳ್ಳ ಅನುಭವಿ ಚಾಲಕರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು.
Mob: 70228 49856

ಒಕ್ಕಲಿಗ ಗೌಡ ವಧು ಬೇಕಾಗಿದ್ದಾರೆ
ಮೈಸೂರಿನಲ್ಲಿ ಸ್ವಂತ ಮನೆ, ವಾಸ ಊರಿನಲ್ಲಿ ಸ್ವಂತ ಜಮೀನಿಗೆ. ವಯಸ್ಸು 35, ಮೊದಲನೇ ಮದುವೆ.
Mob: 9741755655

ಪ್ರಸಿದ್ಧ ಕಂಪನಿಯೊಂದಕ್ಕೆ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ.
SSLC, PUC, ITI
ಪುರುಷ ಅಭ್ಯರ್ಥಿಗಳು ಫ್ರೆಶರ್ಸ್ ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ ಮೈಸೂರು
8548880033

FOR RENT
900 sqft Commercial Space For Rent Ring Road facing Use for Any Office Purpose J P Nagara, Mysore
9448572367

ಬೇಕಾಗಿದ್ದಾರೆ
ಫುಡ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 45 ಸಂಬಳ: ESI PF ಕಳೆದು 17500 8 hrs Duty 3 Shiftಗಳು ಇರುತ್ತದೆ. ವಿದ್ಯಾರ್ಹತೆ ಬೇಕಿಲ್ಲ ಹೆಚ್ಚಿನ ಮಾಹಿತಿಗಾಗಿ ಸ್ಥಳಕ್ಕೆ ಭೇಟಿ ನೀಡಿ ಸ್ಥಳ: CIPET ಕಾಲೇಜ್ ಹತ್ತಿರ, ಮೇಟಗಳ್ಳಿ, ಮೈಸೂರು
9986874574

ವಿಜಯನಗರ 2ನೇ ಹಂತದಲ್ಲಿ 3 ಅಂತಸ್ತಿನ ಮನೆಯಲ್ಲಿ ಕೆಲಸ ಮಾಡಲು ಮನೆ ಕೆಲಸದವರು ಬೇಕಾಗಿದ್ದಾರೆ
ಮಹಿಳೆಯರು 45 ವರ್ಷ ಒಳಗಿನವರು ಸಂಪರ್ಕಿಸಿ: (ವಸತಿ ವ್ಯವಸ್ಥೆ ಇರುತ್ತದೆ.)
9448055467

ಮನೆ ಮಾರಾಟಕ್ಕಿದೆ
ನಂಜನಗೂಡು ಟೌನ್, ಚಾಮಲಾಪುರ ಬೀದಿಯಲ್ಲಿರುವ ಬಸ್‌ಸ್ಟಾಂಡ್, ರೈಲ್ವೆಸ್ಟೇಷನ್‌ಗೆ ಹತ್ತಿರವಿರುವ ಪೂರ್ವಾಭಿಮುಖಿ ಬಾಗಿಲು ಹಾಗೂ ಉತ್ತರದಲ್ಲಿ ರಸ್ತೆಯಿರುವ 3 ಚದರವುಳ್ಳ ಎಲ್ಲಾ ಸೌಕರ್ಯವುಳ್ಳ ನವೀಕರಣಗೊಂಡಿರುವ 1BHK ಕಲ್ಲಾರು ಶೀಟ ಮನೆ ಮಾರಾಟಕ್ಕಿದೆ. ಆಸಕ್ತಿಯುಳ್ಳವರು ಸಂಪರ್ಕಿಸಿ:
9880746143
9900350978

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ವಸತಿ ದೊರೆಯುತ್ತದೆ ಮೈಸೂರಿನ ಸುತ್ತಮುತ್ತಲಿನ ಕಂಪನಿಯಲ್ಲಿ ಕೆಲಸ ಮಾಡುವವರಿಗೆ ಮೊದಲ ಆದ್ಯತೆ
9535614565
6366513308

Looking for 40X60 and 30X40 east or north facing site in SBM bogadi Vijayanagara 1st / 2nd/ 3rd/ 4th dattagalli to buy immediately only owners can call
8073300783
8884616461

ಸೈಟು ಮಾರಾಟಕ್ಕಿದೆ
30x50 N/F
KBL SILICON CITY PHASE-2
BEML ಹತ್ತಿರ
KRS Road
9243536373

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ಮನೆ ಲೀಸ್‌ಗೆ ಬೇಕಾಗಿದೆ
ಹತ್ತು ಲಕ್ಷದ ಒಳಗೆ ಒಳ್ಳೆಯ ಗಾಳಿ, ಬೆಳಕು ಮತ್ತು ವಾಸ್ತು ಇರುವ ಶುದ್ಧ ಪರಿಸರ ಇರುವ ಮನೆ ಬೇಕಾಗಿದೆ.
ಸಂಪರ್ಕಿಸಿ:
8618853431
ಮಧ್ಯವರ್ತಿ ಹೊರತು

ವರನಿಗೆ ವಧು ಬೇಕಾಗಿದೆ
ಜಾತಿ: ಒಕ್ಕಲಿಗ ಗೌಡ, ಹಿಂದೂ ವಯಸ್ಸು: 36, ಅವರ ತಂದೆ ತಾಯಿಗೆ ಒಬ್ಬನೆ ಮಗ ಒಳ್ಳೆಯ ಅಸ್ತಿವಂತರು ವಿಧವೆಯರು, ವಿಚ್ಛೇದನ ಪಡೆದವರು ಹಾಗೂ ಅನಾಥ ಸುಂದರವಾದ ಹೆಣ್ಣು ಮಕ್ಕಳು ಕೂಡ ಯಾವ ಜಾತಿಯಾದರು ಸರಿ. (ಬಾಬು)
9845019678

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಮಧ್ಯಭಾಗದಲ್ಲಿರುವ ಲಾಡ್ಜ್‌ಗೆ ರೂಂ ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ. ಮೈಸೂರಿನ ಮಧ್ಯಭಾಗದಲ್ಲಿರುವ ಅಂಗಡಿಗೆ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
9663427888
9663747452

ROOM ಬಾಡಿಗೆಗೆ ಇದೆ
ಚಿಕ್ಕ ಅಡುಗೆ ಮನೆ ಹಾಗೂ ವಿತ್ ಫರ್ನಿಚರ್ ನ್ಯಾಯಾಂಗ ಬಡಾವಣೆ
9741967776

ಬಸವಮಾರ್ಗ ವ್ಯಸನಮುಕ್ತ ದೇವಸ್ಥಾನ
10 ದಿನಗಳ ಸಂಪೂರ್ಣ ಉಚಿತ ಕುಡಿತ ಬಿಡಿಸುವ ಶಿಬಿರ ಜೂ.1 ರಿಂದ 10ರ ವರೆಗೆ
88033-44999
97429-19191

ಚಾಲಕರು ಬೇಕಾಗಿದ್ದಾರೆ
ಮೈಸೂರಿನಲ್ಲಿ 24 ಅಡಿ ವಾಹನಗಳಿಗೆ ಚಾಲಕರು ಬೇಕಾಗಿದ್ದಾರೆ. ಇಎಸ್ಐ, ಪಿಎಫ್ ಮತ್ತು ಬಾಟಾ ಸಹಿತ ಉತ್ತಮ ಸಂಬಳ. ಸಂಪರ್ಕಿಸಿ:
8050549720
7019664461

HOUSE FOR SALE
50X80 East Facing Spacious House for Sale in Prime Location @ Ramakrishnanagar 'K' Block, Mysore
Contact Number
8904987087

ಶೇಖರ್ ಗೋಲ್ಡ್ ಕಂಪನಿ ನಂಬಿಕೆಗೆ ಮತ್ತೊಂದು ಹೆಸರು
ನೀವು ಗಿರವಿ ಇಟ್ಟಿರುವ ಚಿನ್ನವನ್ನು ಇಂದಿನ ಆನ್ಲೈನ್ ದರಕ್ಕೆ ನಿಮ್ಮ ಸ್ಥಳದಲ್ಲಿ ಮಾರಾಟ ಮಾಡಬೇಕೇ?
ಸಂಪರ್ಕಿಸಿ:
9964068899

ಪಾರ್ಟ್ ಟೈಂ ಕೆಲಸ
ರೆಡಿಮೇಡ್ ಯುನಿಫಾರಂ ಶಾಪ್‌ಗೆ ಹೆಲ್ಪರ್ 35 ವರ್ಷ ಒಳಗಿನ ಮಹಿಳೆಯರು ಮಾತ್ರ ಬೆಳಿಗ್ಗೆ 10 am to 3-30 pm -1 Post ಮಧ್ಯಾಹ್ನ 3 pm to 8-30 pm -1 Post ಅನುಭವ ಬೇಕಿಲ್ಲಾ ಅಗ್ರಹಾರ ಬಸವೇಶ್ವರ ರಸ್ತೆ, ಮೈಸೂರು. ಬರುವ ಇಚ್ಛೆ ಇರುವವರು ಮಾತ್ರ ಆಧಾರ್ ಕಾರ್ಡ್ ವಾಟ್ಸ್ ಆಪ್ ಮಾಡಿ
9591327746

ಬೇಕಾಗಿದ್ದಾರೆ
ಪ್ರಸಿದ್ಧ ಕಂಪನಿಯೊಂದಕ್ಕೆ ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ. ಟೆಲಿಕಾಲಿಂಗ್ (Telecallers) ಮಹಿಳಾ ಅಭ್ಯರ್ಥಿಗಳು ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ ಮೈಸೂರು
8548880033

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಸೋಸಲೆಗೆ ಸರ್ಕಾರಿ ಪದವಿಪೂರ್ವ ಕಾಲೇಜು ಮಂಜೂರು

ಬಾಕಿ ಕಾಮಗಾರಿ ಪಟ್ಟಿ ಕೊಟ್ಟರೆ ಅನುದಾನಕ್ಕೆ ಕ್ರಮ: ಸಚಿವ ಹೆಚ್‌ಸಿಎಂ ಭರವಸೆ

ತಿ.ನರಸೀಪುರ, ಮೇ 14(ಕುಮಾರ್)– ಹೋಬಳಿ ಕೇಂದ್ರ ಸೋಸಲೆ ಗ್ರಾಮಕ್ಕೆ ಸರ್ಕಾರದಿಂದ ಸರ್ಕಾರಿ ಪದವಿ ಪೂರ್ವ ಕಾಲೇಜು ಮಂಜೂರು ಮಾಡಲಾಗಿದೆ. ಗ್ರಾಮದಲ್ಲಿ ಬಾಕಿ ಉಳಿದಿರುವ ಅಭಿವೃದ್ಧಿ ಕಾಮಗಾರಿಗಳ ಪಟ್ಟಿ ಕೊಟ್ಟರೆ ಯೋಜನೆ ರೂಪಿಸಿ ಅನುದಾನ ಮಂಜೂರು ಮಾಡಲಾಗುವುದು ಎಂದು ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭರವಸೆ ನೀಡಿದರು.

ತಾಲೂಕಿನ ಸೋಸಲೆ ಗ್ರಾಮದಲ್ಲಿ ಬುಧವಾರ 32 ಲಕ್ಷ ರೂ. ವೆಚ್ಚದಲ್ಲಿ ಶ್ರೀಹೊನ್ನಾದೇವಿ ಅಮ್ಮನವರ ಚಾವಡಿ ಕಟ್ಟೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ, ಗ್ರಾಮಸ್ಥರ ಅಹವಾಲು ಆಲಿಸಿ ಮಾತನಾಡಿದ ಅವರು, ಗ್ರಾಮದ ಕ್ರೀಡಾಪಟುಗಳ ತಯಾರಿಗೆ ಸುತ್ತಮುತ್ತ ಆಸುಪಾಸಿನಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು 2 ಕೋಟಿ ಹಾಗೂ ತಾಲೂಕು ಕ್ರೀಡಾಂಗಣಕ್ಕೆ 6 ಕೋಟಿ ರೂ. ಅನುದಾನವನ್ನು ನಮ್ಮ ಸರ್ಕಾರದಿಂದ ಮಂಜೂರು ಮಾಡಿದ್ದೇವೆ ಎಂದರು.

ಸಾರ್ವತ್ರಿಕ ಚುನಾವಣೆಯಲ್ಲಿ ಹಗಲಿರುಳು ನೀವೆಲ್ಲರೂ ಹೋರಾಟ ನಡೆಸಿ, ಗೆಲ್ಲಿಸಿದ್ದರಿಂದ ಸಚಿವ ನಾಗಿ ರಾಜ್ಯಾದ್ಯಂತ ಗುರುತಿಸಿಕೊಳ್ಳಲು ಸಾಧ್ಯವಾಯಿತು. ಸೋಸಲೆ ಗ್ರಾಮದಲ್ಲಿ ಬಾಕಿ ಉಳಿದಿರುವ ಮತ್ತು ಆಗಬೇಕಿರುವ ಅಭಿವೃದ್ಧಿ ಕಾಮಗಾರಿಗಳಿಗೆ ಐದಲ್ಲ, ಹತ್ತು ಕೋಟಿಯಾಗಲಿ ಅನುದಾನ ಕಲ್ಪಿಸುವುದು ನಮ್ಮ ಜವಾಬ್ದಾರಿಯಾಗಿದೆ. ಗ್ರಾಮಸ್ಥರು ಹಾಗೂ ಮುಖಂಡರು ಪ್ರಸ್ತಾಪಿಸುವ ಯೋಜನೆಗಳಿಗೆ ತಾಂತ್ರಿಕ ಉಪ ವಿಭಾಗದ ಅಧಿಕಾರಿಗಳಿಂದ ಯೋಜನಾ ವೆಚ್ಚ ಸಿದ್ಧಪಡಿಸಿ ಅಭಿವೃದ್ಧಿಪಡಿಸಲಾಗುವುದು. ಸಂಸದ ಸುನೀಲ್ ಬೋಸ್ ಬರಬೇಕಿದ್ದ ಕಾರ್ಯಕ್ರಮಕ್ಕೆ ಅನಿವಾರ್ಯ ಕಾರಣಗಳಿಂದಾಗಿ ನಾನೇ ಬರಬೇಕಾಯಿತು ಎಂದರು.

ಅಂಬೇಡ್ಕರ್ ಅಭಿವೃದ್ಧಿ ಸಂಘದ ಉಪಾಧ್ಯಕ್ಷ ಸೋಸಲೆ ಮಹದೇವಸ್ವಾಮಿ ಮಾತನಾಡಿ, ಗ್ರಾಮದ ಹೊರವಲಯದಲ್ಲಿರುವ ಶ್ರೀ ಹೂ ಬಾಲೇಶ್ವರಿ ದೇವಾಲಯ ನಿರ್ಮಾಣ ಹಾಗೂ ಪುರಾತನ ಪ್ರಸಿದ್ಧ ಶ್ರೀವೀರಭದ್ರೇಶ್ವರ ಜೀರ್ಣೋದ್ಧಾರ ಸೇರಿದಂತೆ ಗ್ರಾಮದಲ್ಲಿ ಬಾಕಿ ಉಳಿದಿರುವ ಅಭಿವೃದ್ಧಿ ಕಾಮಗಾರಿಗಳಿಗೆ 6 ಕೋಟಿ ರೂ. ಅನುದಾನವನ್ನು ವಿಶೇಷ ಕಾಳಜಿ ವಹಿಸಿ ಮಂಜೂರು ಮಾಡಬೇಕು. ಯೋಜನಾ ವೆಚ್ಚ ಸಿದ್ಧಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಬೇಕೆಂದು ಮನವಿ ಸಲ್ಲಿಸಿದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಶೈಲಜಾ ಮಹೇಶ್, ಪಿಎಸಿಎಸ್ ಮಾಜಿ ಅಧ್ಯಕ್ಷ ಎಂ.ಪರಶಿವಮೂರ್ತಿ, ನಿರ್ದೇಶಕ ಎಸ್.ನಂಜುಂಡಯ್ಯ, ಜಿಪಂ ಮಾಜಿ ಸದಸ್ಯ ಹೊನ್ನನಾಯಕ, ತಾಪಂ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ತ್ರೈಮಾಸಿಕ ಕೆಡಿಪಿ ಸದಸ್ಯರಾದ ವೀಣಾ ಶಿವಕುಮಾರ್, ಮುಯಿನ್ ಅಹಮದ್ ಖಾನ್, ಗ್ರಾಪಂ ಸದಸ್ಯ ಎಸ್.ವಿ.ಮಹೇಶ್ ಕುಮಾರ್, ಮಾಜಿ ಅಧ್ಯಕ್ಷರಾದ ಪುಟ್ಟಸ್ವಾಮಿ, ಎಂ.ಮಹೇಶ, ಬಿ.ಎಸ್. ಮಹೇಶ, ಎಸ್.ರಾಜೇಶ್, ನಿವೃತ್ತ ಶಿಕ್ಷಕರಾದ ವೆಂಕಟರಮಣಸ್ವಾಮಿ, ಎಸ್.ಮಹದೇವಶೆಟ್ಟಿ, ಲೋಕೋಪಯೋಗಿ ಎಇಇ ಸತೀಶ್ ಚಂದ್ರನ್, ಜಿಪಂ ಎಇಇಗಳಾದ ಪಿ.ಎನ್.ಚರಿತ, ಕೆ.ಶಿವರಾಜು, ಪೊಲೀಸ್ ಇನ್ಸ್‌ಪೆಕ್ಟರ್ ಮನೋಜ್ ಕುಮಾರ್, ಸಿಡಿಪಿಓ ಗೋವಿಂದರಾಜು, ಮೀನುಗಾರಿಕೆ ಸಹಾಯಕ ನಿರ್ದೇಶಕಿ ಶ್ವೇತಾ, ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿ ಎಂ.ರಾಜಣ್ಣ, ಮುಖಂಡರಾದ ಎನ್.ನಿಂಗಯ್ಯ, ಕುಮಾರ್ ರಾಮೇಗೌಡ, ದೇವರಾಜು, ಬೆಳ್ಳಿ ರಾಜು, ಸಿದ್ದರಾಜು ಇದ್ದರು.



ಚಾವಡಿಕಟ್ಟೆ ನಿರ್ಮಾಣ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು.

> ರಾಜ್ಯದ ಪ.ಜಾತಿಗೆ ಒಳಮೀಸಲು ಜಾರಿಗೊಳಿಸಲು ದತ್ತಾಂಶಕ್ಕೆ ಜಾತಿ ಜನಗಣತಿ ಸಮೀಕ್ಷೆಯನ್ನು ಕರಾರುವಕ್ಕಾಗಿ ಮಾಡಿಸುತ್ತಿದ್ದೇವೆ. ಈ ಹಿಂದೆ ಸರಿಯಾಗಿ ಸರ್ವೇ ಮಾಡಿಸಿರಲಿಲ್ಲ. ಯಾರ್ಯಾರು ಎಷ್ಟೆಷ್ಟು ಇದ್ದಾರೆ ಅಷ್ಟಷ್ಟೇ. ಅದರಲ್ಲಿ ಹೆಚ್ಚು ಕಡಿಮೆ ಆಗಲ್ಲ. ಒಳಮೀಸಲು ವೇಳೆ ಪ.ಜಾತಿಯ ಎಲ್ಲರೂ ಜೊತೆಯಾಗಿಯೇ ಇರಬೇಕು. ಜಾತಿ ಜನಗಣತಿ ವರದಿ ಸರ್ಕಾರದ ಕೈ ಸೇರಿದ ಬಳಿಕ ಮುಂದಿನ ನಿರ್ಧಾರ ಪ್ರಕಟಿಸುತ್ತೇವೆ. –ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಹಾಗೂ ಸಮಾಜ ಕಲ್ಯಾಣ ಸಚಿವ.

ಬಿ.ಆರ್.ಅತೀಶ್ ತಾಲೂಕಿಗೆ ಪ್ರಥಮ



ನಂಜನಗೂಡು, ಮೇ 14– ನಗರದ ಸಿಟಿಜನ್ ಶಾಲೆ ಸಿಬಿಎಸ್‌ಸಿ 10ನೇ ತರಗತಿ ವಿದ್ಯಾರ್ಥಿ ಬಿ.ಆರ್.ಅತೀಶ್ 477 (ಶೇ.95.4) ಅಂಕ ಗಳಿಸಿ ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದ್ದಾನೆ ಎಂದು ಶಾಲೆ ಪ್ರಕಟಣೆ ತಿಳಿಸಿದೆ.

ಕನ್ನಡ 97, ಇಂಗ್ಲಿಷ್ 92, ಗಣಿತ 94, ವಿಜ್ಞಾನ 98, ಸಮಾಜ ವಿಜ್ಞಾನ 96 ಅಂಕ ಗಳಿಸುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾನೆ. ಶಾಲೆಯ 40 ವಿದ್ಯಾರ್ಥಿಗಳು ಅತ್ಯುತ್ತಮ, 78 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಶಾಲಾ ಆಡಳಿತ ಮಂಡಳಿ, ಪ್ರಾಂಶುಪಾಲರು ಹಾಗೂ ಅಧ್ಯಾಪಕ ವೃಂದ ಅಭಿನಂದಿಸಿದೆ.

ಸಮಾಜ ಸೇವಕರಿಗೆ ಸನ್ಮಾನ



ಮೈಸೂರು ತಾಲೂಕು ಕೆಲ್ಲಹಳ್ಳಿ ಗ್ರಾಮದ ಚಾಮುಂಡೇಶ್ವರಿ ದೇವಾಲಯ ಜೀರ್ಣೋದ್ಧಾರ ಕಾಮಗಾರಿಗೆ 1 ಲಕ್ಷ ರೂ. ದೇಣಿಗೆ ನೀಡಿದ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು. ಈ ವೇಳೆ ಜಯಪುರ ಗ್ರಾಪಂ ಸದಸ್ಯರಾದ ಬಸವಣ್ಣ, ಭೈರೇಶ್, ಮುಖಂಡರಾದ ಟಿ.ಪಿ.ನಾಗರಾಜು, ಮಂಜುನಾಥ್, ವೆಂಕಟೇಶ್, ಕಾಲೋನಿ ನಂಜುಂಡ ಮತ್ತು ಕೆಲ್ಲಹಳ್ಳಿ ಗ್ರಾಮಸ್ಥರು ಉಪಸ್ಥಿತರಿದ್ದರು.

ಶಾಸಕರಿಂದ ತಾಲೂಕು ಕ್ರೀಡಾಂಗಣ ಪರಿಶೀಲನೆ



ಪಟ್ಟಣದ ತಾಲೂಕು ಕ್ರೀಡಾಂಗಣಕ್ಕೆ ಶಾಸಕ ಅನಿಲ್ ಭೇಟಿ ನೀಡಿ ಪರಿಶೀಲಿಸಿದರು.

ಹೆಚ್.ಡಿ.ಕೋಟೆ, ಮೇ 14(ಮಂಜು)– ಪಟ್ಟಣದ ತಾಲೂಕು ಕ್ರೀಡಾಂಗಣಕ್ಕೆ ಅಧಿಕಾರಿ ಗಳೊಂದಿಗೆ ಶಾಸಕ ಅನಿಲ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪಟ್ಟಣದ ಕ್ರೀಡಾಂಗಣದಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಸೌಲಭ್ಯಗಳ ಕೊರತೆ ಇದ್ದು, ಮಳೆಗಾಲದಲ್ಲಿ ಮಳೆ ನೀರು ನಿಂತು ಕ್ರೀಡಾ ಚಟುವಟಿಕೆಗಳಿಗೆ ತೊಂದರೆಯಾಗುತ್ತಿತ್ತು. ಇದರಿಂದ ಕ್ರೀಡಾಪಟುಗಳು ಹಾಗೂ ಸಾರ್ವಜನಿಕರು ಕ್ರೀಡಾಂಗಣ ಅಭಿವೃದ್ಧಿ ಪಡಿಸುವಂತೆ ಶಾಸಕ ಅನಿಲ್ ಅವರಿಗೆ ಮನವಿ ಮಾಡಿದ್ದರು.

ಈ ಹಿನ್ನೆಲೆಯಲ್ಲಿ ಕ್ರೀಡಾಂಗಣಕ್ಕೆ ಭೇಟಿ ನೀಡಿ ಪರಿಶೀಲಿಸಿ ಮಾತನಾಡಿದ ಶಾಸಕ ಅನಿಲ್, ತಾಲೂಕು ಕ್ರೀಡಾಂಗಣದಲ್ಲಿ ಈಗಾಗಲೇ 40 ಲಕ್ಷ ವೆಚ್ಚದಲ್ಲಿ ಬಯಲು ರಂಗಮಂದಿರ ನಿರ್ಮಿಸಲಾಗಿದೆ. ಕ್ರೀಡಾಂಗಣದಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಸಾಕಷ್ಟು ತೊಂದರೆಯಾಗುತ್ತಿರುವ ಬಗ್ಗೆ ದೂರುಗಳು ಬಂದಿವೆ. ಈ ಬಗ್ಗೆ ಕ್ರೀಡಾ ಸಚಿವರಿಗೆ ತಿಳಿಸಿದ್ದರಿಂದ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ 5 ಕೋಟಿ ಮಂಜೂರು ಮಾಡಿದ್ದಾರೆ. ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಎಇಇ ಜಯರಾಮ್ ಅವರಿಗೆ ಅಗತ್ಯ ಕಾಮಗಾರಿ ಕೈಗೊಳ್ಳುವಂತೆ ಸೂಚಿಸಿದ್ದೇನೆ ಎಂದರು. ಈ ವೇಳೆ ಪುರಸಭಾ ಮುಖ್ಯಾಧಿಕಾರಿ ಸುರೇಶ್, ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಮಧುಕುಮಾರ್, ಯೂತ್ ಕಾಂಗ್ರೆಸ್ ಅಧ್ಯಕ್ಷ ಅಜರುದ್ದೀನ್, ಮುಖಂಡರಾದ ಪರಶಿವಮೂರ್ತಿ, ಮಂಜುಶೆಟ್ಟಿ, ಸುದರ್ಶನ್, ಗುರುಸ್ವಾಮಿ, ಚಿಕ್ಕಣ್ಣ ತಿರುಪತಿ ಇನ್ನಿತರರಿದ್ದರು.

ನಗರದಲ್ಲಿ ರೈಲ್ವೆ ಮೇಲ್ಸೇತುವೆಯನ್ನು ನೇರವಾಗಿ ನಿರ್ಮಿಸಿ

ಸರಸ್ವತಿ ಕಾಲೋನಿ ನಿವಾಸಿಗಳಿಂದ ಮನವಿ ಸಲ್ಲಿಕೆ



ರೈಲ್ವೆ ಮೇಲ್ಸೇತುವೆ ನಿರ್ಮಿಸಬೇಕೆಂದು ಸರಸ್ವತಿ ಕಾಲೋನಿ ನಿವಾಸಿಗಳು ಮನವಿ ಸಲ್ಲಿಸಿದರು.

ನಂಜನಗೂಡು, ಮೇ 14(ರಂಗಸ್ವಾಮಿ)– ನಗರದ ಆರ್.ಪಿ.ರಸ್ತೆಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ರೈಲ್ವೆ ಮೇಲ್ಸೇತುವೆಯನ್ನು ಮಾರ್ಗ ಬದಲಾವಣೆ ಮಾಡದೆ ನೇರವಾಗಿ ನಿರ್ಮಿಸಬೇಕು ಎಂದು ಒತ್ತಾಯಿಸಿ ಸರಸ್ವತಿ ಕಾಲೋನಿ ನಿವಾಸಿಗಳು ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ನಗರದ ಆರ್.ಪಿ.ರಸ್ತೆಯ 4ನೇ ಕ್ರಾಸ್‌ನಿಂದ ರಾಕ್ಷಸ ಮಂಟಪ ವೃತ್ತದವರೆಗೆ ರೈಲ್ವೆ ಮೇಲ್ಸೇತುವೆ ನಿರ್ಮಾಣ ಮಾಡಲು ರೈಲ್ವೆ ಇಲಾಖೆ ಈಗಾಗಲೇ ಯೋಜನೆ ತಯಾರಿಸಿ ಅನುದಾನ ಬಿಡುಗಡೆಗೊಳಿಸಿದೆ. ಆದರೆ ಆರ್.ಪಿ.ರಸ್ತೆಯ ಅಂಗಡಿ ಮಾಲೀಕರು ರೈಲ್ವೆ ಮೇಲ್ಸೇತುವೆಯನ್ನು ನೇರವಾಗಿ ನಿರ್ಮಾಣ ಮಾಡಿದ್ದಲ್ಲಿ ಅಂಗಡಿ ಮಾಲೀಕರ ಆಸ್ತಿ ನಷ್ಟವಾಗುವ ಜೊತೆಗೆ ಶ್ರೀಕಂಠೇಶ್ವರ ದೇವಾಲಯದ ಗೋಪುರ ದರ್ಶನಕ್ಕೆ ಅವಕಾಶವಾಗುವುದಿಲ್ಲ. ಅಲ್ಲದೆ ರಥಬೀದಿಯವರೆಗೆ ಕಾಮಗಾರಿ ನಡೆಯುವುದರಿಂದ ರಥ ಸಂಚಾರಕ್ಕೂ ಅಡ್ಡಿಯಾಗಲಿದೆ ಎಂದು ಆಕ್ಷೇಪಿಸಿ, ರೈಲ್ವೆ ಮಾರ್ಗವನ್ನು ನಾಗಮ್ಮ ಶಾಲೆಯಿಂದ ಸರಸ್ವತಿ ಕಾಲೋನಿವರೆಗೆ ಅಲ್ಲಿಂದ ಪೊಲೀಸ್ ಪೆರೇಡ್ ಮೈದಾನಕ್ಕೆ ತೆರಳಿ, ಅಲ್ಲಿಂದ ಸರ್ಕಾರಿ ಶಾಲೆ ಮೂಲಕ ಆರ್.ಪಿ.ರಸ್ತೆಗೆ ಜೋಡಿಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುವ ಸರಸ್ವತಿ ಕಾಲೋನಿ ನಿವಾಸಿಗಳು ರೈಲ್ವೆ ಮೇಲ್ಸೇತುವೆಯನ್ನು ಇಂದಿನ ಅಂದಾಜು ಪಟ್ಟಿ ನಕ್ಷೆಯ ಅನುಮೋದನೆ ಪ್ರಕಾರವೇ ನೇರವಾಗಿಯೇ ನಿರ್ಮಿಸಬೇಕು. ಇಲ್ಲವಾದಲ್ಲಿ ಸರಸ್ವತಿ ಕಾಲೋನಿ ಮೂಲಕ ಅಡ್ಡದಿಡ್ಡಿಯಾಗಿ ಮೇಲ್ಸೇತುವೆ ನಿರ್ಮಾಣ ಮಾಡಿದ್ದಲ್ಲಿ, 40 ವರ್ಷಗಳಿಂದ ಸರ್ಕಾರದಿಂದ ಹಕ್ಕುಪತ್ರ ಪಡೆದು ವಾಸ ಮಾಡುತ್ತಿರುವ ಕಡು ಬಡವರ ಮನೆಗಳು ನಾಶವಾಗಲಿವೆ. ಈ ನಿರ್ಧಾರದಿಂದ ಸಾಕಷ್ಟು ಬಡವರ ಕುಟುಂಬಗಳು ಆಶ್ರಯವಿಲ್ಲದೆ ಬೀದಿಗೆ ಬೀಳಲಿವೆ. ಜೊತೆಗೆ ಹೆಚ್ಚಿನ ಒತ್ತುವರಿ ಅವಶ್ಯಕತೆಯಿಂದ ಸರ್ಕಾರಕ್ಕೂ ಆರ್ಥಿಕ ನಷ್ಟ ಉಂಟಾಗಲಿದೆ. ಅಲ್ಲದೆ ವಾಹನ ಸಂಚಾರಕ್ಕೂ ಅಡ್ಡಿಯಾಗಲಿದೆ. ಆದ್ದರಿಂದ ಈ ಇಂದಿನ ನಕ್ಷೆ ಅನುಮೋದನೆ ಪ್ರಕಾರವೇ ಮೇಲ್ಸೇತುವೆಯನ್ನು ನೇರವಾಗಿ ನಿರ್ಮಿಸಬೇಕು ಎಂದು ಆಗ್ರಹಿಸಿ ನಗರಸಭಾ ಅಧ್ಯಕ್ಷ ಶ್ರೀಕಂಠಸ್ವಾಮಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

11ನೇ ವಾರ್ಡ್ ನಗರಸಭಾ ಸದಸ್ಯ ಗಂಗಾಧರ್ ಮಾತನಾಡಿ, ರೈಲ್ವೆ ಮೇಲ್ಸೇತುವೆಯನ್ನು ಈ ಹಿಂದಿನ ನಕ್ಷೆ ಅನುಮೋದನೆ ಪ್ರಕಾರವೇ ನೇರವಾಗಿ ನಿರ್ಮಿಸಬೇಕು. ಸರಸ್ವತಿ ಕಾಲೋನಿ ಮೂಲಕ ಕಾಮಗಾರಿ ನಡೆದರೆ ಕಡು ಬಡವರು ಆಶ್ರಯವಿಲ್ಲದೆ ಬೀದಿಗೆ ಬೀಳಲಿದ್ದಾರೆ. ಈ ಬಗ್ಗೆ ಮಂಗಳವಾರ ನಡೆದ ನಗರಸಭೆ ಸಾಮಾನ್ಯ ಸಭೆಯಲ್ಲೂ ಪ್ರಸ್ತಾಪ ಮಾಡಲಾಗಿದೆ. ಹೆಚ್ಚಿನ ಸದಸ್ಯರು ಮೇಲ್ಸೇತುವೆಯನ್ನು ನೇರವಾಗಿ ನಿರ್ಮಿಸುವಂತೆ ಒತ್ತಾಯಿಸಿರುವುದರಿಂದ ನೇರವಾಗಿ ನಿರ್ಮಿಸಲು ನಿರ್ಧಾರ ಕೈಗೊಳ್ಳಲಾಗಿದೆ. ಈ ಬಗ್ಗೆ ನಗರಸಭೆಯ ಸಾಮಾನ್ಯ ಸಭೆ ನಡಾವಳಿ ಪುಸ್ತಕದಲ್ಲಿ ಅಂಗೀಕಾರ ದಾಖಲಿಸಲಾಗಿದೆ. ಜೊತೆಗೆ ನಗರಸಭೆ ಅಧ್ಯಕ್ಷ ಹಾಗೂ ಸ್ಥಳೀಯ ಶಾಸಕ ದರ್ಶನ್ ಸಹ ಈ ಹಿಂದಿನ ನಕ್ಷೆ ಪ್ರಕಾರವೇ ಕಾಮಗಾರಿ ನಡೆಸುವ ಬಗ್ಗೆ ಭರವಸೆ ನೀಡಿದ್ದಾರೆ ಎಂದರು.

ಜಿ.ಕೆ.ಈಶ್ವರ್ ನಿಧನ



ಸರಗೂರು, ಮೇ 14– ಪಟ್ಟಣದ ನಿವಾಸಿ, ಸೈಕಲ್ ಶಾಪ್ ಮೆಕ್ಯಾನಿಕ್ ಜಿ.ಕೆ.ಈಶ್ವರ್ (68) ಬುಧವಾರ ಸಂಜೆ ನಿಧನರಾದರು.ಮೃತರು ಪತ್ನಿ, ಮೂವರು ಪುತ್ರರು ಸೇರಿ ದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ಸಾರ್ವಜನಿಕ ರುದ್ರಭೂಮಿಯಲ್ಲಿ ಗುರುವಾರ ಬೆಳಗ್ಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗಾಂಧೀಜಿ ಕನಸು ಯಾಚೇನಹಳ್ಳಿಯಲ್ಲಿ ನನಸು



ಬುದ್ಧ, ಬಸವ, ಡಾ.ಅಂಬೇಡ್ಕರ್ ಹಾಗೂ ಮಹಾವೀರ ಜಯಂತಿ ನಡೆಯಿತು.

ಬನ್ನೂರು, ಮೇ 14(ಪ್ರಭು)– ನಗರಗಳಲ್ಲಿ ಸಿಗುವ ಸೌಲಭ್ಯಗಳು ಹಳ್ಳಿಗಳಲ್ಲೂ ಸಿಗುವಂತಾಗ ಬೇಕು. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಯಾಗಬೇಕು. ಗ್ರಾಮದ ಜನರಿಗೆ ಮೂಲ ಸೌಕರ್ಯ ದೊರಕಬೇಕೆನ್ನುವ ಗಾಂಧೀಜಿಯವರ ಕನಸು ಯಾಚೇನಹಳ್ಳಿ ಗ್ರಾಮದಲ್ಲಿ ಸಾಕಾರವಾಗಿದೆ ಎಂದು ಮೈಸೂರು ತೋಟಗಾರಿಕಾ ಮಹಾ ವಿದ್ಯಾಲಯದ ಡೀನ್ ಡಾ.ಜಿ. ಜನಾರ್ಧನ್ ತಿಳಿಸಿದರು.

ಯಾಚೇನಹಳ್ಳಿ ಪಿಎಸಿಎಸ್, ಹಾಲಿನ ಡೇರಿ, ತೋಟಗಾರಿಕಾ ಮಹಾವಿದ್ಯಾಲಯ ಮೈಸೂರು ವತಿಯಿಂದ ಆಯೋಜಿಸಿದ್ದ ಅಂಬೇಡ್ಕರ್, ಬುದ್ಧ, ಬಸವ, ಮಹಾವೀರ ಜಯಂತಿಯಲ್ಲಿ ಅವರು ಮಾತನಾಡಿದರು.

ಗ್ರಾಮದ ಅಭಿವೃದ್ಧಿ ಹೇಗಿದೆ ಎಂಬುದು ಇಲ್ಲಿಗೆ ಬಂದರೆ ತಿಳಿಯುತ್ತದೆ ಇಲ್ಲಿ ಯಾವುದೇ ಜಾತಿ, ಮತ, ಲಿಂಗ ತಾರತಮ್ಯ ಮಾಡದೇ ಅತಿಥಿಗಳನ್ನು ಸತ್ಕರಿಸುವ ರೀತಿ ವಿದ್ಯಾರ್ಥಿಗಳಿಗೂ ಆನಂದವನ್ನುಂಟು ಮಾಡಿದೆ. ಸಹಕಾರಿಗಳ ಸಹಕಾರವಿದ್ದರೆ ಏನಾದರೂ ಸಾಧಿಸಬಹುದು ಎಂಬುದಕ್ಕೆ ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವೇ ಸಾಕ್ಷಿಯಾಗಿದೆ ಎಂದರು.

ಯಾಚೇನಹಳ್ಳಿ ಪಿಎಸಿಎಸ್ ಅಧ್ಯಕ್ಷ ವೈ.ಎನ್.ಶಂಕರೇಗೌಡ ಮಾತನಾಡಿ, ಜನಸಾಮಾನ್ಯರಲ್ಲಿ ಡಾ.ಅಂಬೇಡ್ಕರ್ ಒಂದು ವರ್ಗಕ್ಕೆ ಮಾತ್ರ ಸೀಮಿತ ಎನ್ನುವ ತಪ್ಪು ಕಲ್ಪನೆ ಇದೆ. ಅವರು ರೂಪಿಸಿದ ಸಂವಿಧಾನ ಇಲ್ಲದೇ ಹೋದಲ್ಲಿ ಇಂದು ಯಾವುದೇ ಕಾನೂನಾತ್ಮಕ ಅವಕಾಶಗಳು ಎಲ್ಲಾ ವರ್ಗಕ್ಕೂ ಸಿಗುತ್ತಿರಲಿಲ್ಲ. ಎಲ್ಲಾ ವರ್ಗದವರಿಗೂ ಸಮಾನ ಅವಕಾಶ ಕಲ್ಪಿಸಿದ ಮಹಾನ್ ಪುರುಷ ಡಾ.ಅಂಬೇಡ್ಕರ್ ಎಂದರು.

ಅಂದಿನ ಕಾಲದಲ್ಲಿಯೇ ಜಾತಿ ವ್ಯವಸ್ಥೆಯನ್ನು ಪ್ರಬಲವಾಗಿ ವಿರೋಧಿಸಿದ ಬಸವಣ್ಣ ಎಲ್ಲಾ ಕಾಲದಲ್ಲಿಯೂ ಸ್ಮರಣೀಯರಾಗಿದ್ದಾರೆ. ಜಗತ್ತಿಗೆ ಶಾಂತಿ ಮಂತ್ರ ಭೋದಿಸಿದ್ದು ಬುದ್ಧ ಹಾಗೂ ಮಹಾವೀರರಾಗಿದ್ದು, ಬದುಕಲ್ಲಿ ಅವರ ತತ್ವಗಳನ್ನು ಪಾಲಿಸಬೇಕಾಗಿದೆ ಎಂದರು.

ರಾಮಕೃಷ್ಣ ಸೇವಾ ಕೇಂದ್ರದ ನಾದಾನಂದನಾಥ ಸ್ವಾಮೀಜಿ ಮಾತನಾಡಿದರು. ಯಾಚೇನಹಳ್ಳಿ ಗ್ರಾಪಂ ಅಧ್ಯಕ್ಷ ವೈ.ಸಿ.ಶಿವಕುಮಾರ್, ಪಿಎಸಿಎಸ್ ಉಪಾಧ್ಯಕ್ಷ ವೈ.ಎಂ.ಚಂದ್ರು, ಡೈರಿ ಅಧ್ಯಕ್ಷ ವೈ.ಕೆ. ಉಮೇಶ್, ನಾಡ ಯಜಮಾನರಾದ ವೈ.ಕೆ.ಹನುಮಂತೇಗೌಡ, ವೈಎಂ.ನಾಗರಾಜು, ಡಾ.ಎನ್.ಮಮತಾಲಕ್ಷ್ಮಿ, ಡಾ.ಸೌಮ್ಯಶೆಟ್ಟಿ, ಸಿಇಓ ವೈ.ಕೆ. ಕ್ಯಾತೇಗೌಡ ಸೇರಿದಂತೆ ಇತರರಿದ್ದರು.

ಕೋಟೆಯಲ್ಲಿ ಭಗವಾನ್ ಬುದ್ಧ ಜಯಂತಿ



ಕೋಟೆಯಲ್ಲಿ ಭಗವಾನ್ ಬುದ್ಧ ಜಯಂತಿ ಆಚರಿಸಲಾಯಿತು.

ಹೆಚ್.ಡಿ.ಕೋಟೆ, ಮೇ 14(ಮಂಜು)– ಪಟ್ಟಣದಲ್ಲಿ ತಾಲೂಕು ಆಡಳಿತದಿಂದ ಇದೇ ಮೊದಲ ಬಾರಿಗೆ ಭಗವಾನ್ ಬುದ್ಧ ಜಯಂತಿ ಆಚರಿಸಲಾಯಿತು.

ಆಡಳಿತಸೌಧದ ಆವರಣದಲ್ಲಿರುವ ಬುದ್ಧನ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ತಹಸೀಲ್ದಾರ್ ಶ್ರೀನಿವಾಸ್, ಜಗತ್ತಿಗೆ, ಮಾನವ ಧರ್ಮಕ್ಕೆ ಮುನ್ನುಡಿ ಬರೆದವರು ಭಗವಾನ್ ಬುದ್ಧ. ಭೂಮಿ ಮೇಲಿರುವ ಸಕಲ ಜೀವರಾಶಿಗಳು ಸಾಮರಸ್ಯದಿಂದ ಬದುಕಲು ಪ್ರಮುಖವಾಗಿ ಕರುಣೆ, ಪ್ರೀತಿ, ಅಹಿಂಸೆ ಸೇರಿದಂತೆ ಬುದ್ಧನ ಮಾರ್ಗ ಅನುಸಬೇಕು ಎಂದರು.

ಇದಕ್ಕೂ ಮುನ್ನಾ ಸಾರನಾಥ ಬುದ್ಧ ವಿಹಾರದ ದಮ್ಮಚಾರಿ ಮಂಚಯ್ಯ, ಉಪನ್ಯಾಸಕರಾದ ನಾಗರಾಜು, ಪುಟ್ಟರಾಜು, ಸ್ವಪ್ನ ಮಲ್ಲೇಶ್ ಅವರು ಬುದ್ಧ ವಂದನೆ ಮತ್ತು ತಿಸರಣ, ಪಂಚಾಶೀಲವನ್ನು ಹೇಳಿಕೊಟ್ಟರು. ಹೈರಿಗೆ ಶಿವರಾಜ್, ಜೀವಿಕ ಬಸವರಾಜ್, ಚೌಡಳ್ಳಿ ಜವರಯ್ಯ, ಮಂಚಯ್ಯ ಮಾತನಾಡಿದರು.

ವೇದಿಕೆಯಲ್ಲಿ ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ, ಜೀವಿಕ ರಾಜ್ಯ ಸಂಚಾಲಕ ಉಮೇಶ್, ಪ್ರಸನ್ನ, ಮುದ್ದುಮಲ್ಲಯ್ಯ, ಶಿವಣ್ಣ, ಶಿವರಾಜ್, ಮಹದೇವ, ವಸಂತ, ಮಲ್ಲೇಶ್, ನಾಗರಾಜ್, ಪುಟ್ಟರಾಜು, ಪುರುಷೋತ್ತಮ್, ಕೃಷ್ಣ, ಒಕ್ಕೂಟದ ಅಧ್ಯಕ್ಷ ಮಂಜು, ಕಾರ್ಯದರ್ಶಿ ಪ್ರಕಾಶ್, ಚಾ.ನಂಜುಂಡ ಇತರರಿದ್ದರು.

ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ

ತಿ.ನರಸೀಪುರ, ಮೇ 14(ಕುಮಾರ್)– ತಾಲೂಕಿನ ಪ.ಜಾತಿ ಮತ್ತು ಪಂಗಡ ಸಮುದಾಯದ ಗ್ರಾಮಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ವಿಶೇಷ ಘಟಕ ಯೋಜನೆ(ಎಸ್‌ಇಪಿ/ಟಿಎಸ್‌ಪಿ)ಯಡಿ 12 ಕೋಟಿ ಹಾಗೂ ವಿವಿಧ ಸಮುದಾಯ ಭವನವನ್ನು ನಿರ್ಮಾಣ ಮಾಡಲು ರಾಜ್ಯ ಸರ್ಕಾರದಿಂದ 30 ಕೋಟಿ ರೂ. ಅನುದಾನ ಮಂಜೂರು ಮಾಡಲಾಗಿದೆ ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ತಾಲೂಕಿನ ವ್ಯಾಸರಾಜಪುರದಲ್ಲಿ ಬುಧವಾರ ಸಂಜೆ ವಿಶೇಷ ಘಟಕ ಯೋಜನೆ(ಎಸ್‌ಇಪಿ) ಅನುದಾನ 20 ಲಕ್ಷ ರೂ. ವೆಚ್ಚದ ಸಿಮೆಂಟ್ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ, ಗ್ರಾಮಸ್ಥರ ಅಹವಾಲು ಆಲಿಸಿ ಮಾತನಾಡಿದ ಅವರು, ಪ.ಜಾತಿ, ಪಂಗಡ ಸಮುದಾಯಗಳು ವಾಸವಿರುವ ಕಾಲೋನಿಗಳಲ್ಲಿ ಬಾಕಿ ಉಳಿದ ರಸ್ತೆಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲು 12 ಕೋಟಿ ಅನುದಾನವನ್ನು ಆಯ್ಕೆ ಮಾಡಲಾದ ಗ್ರಾಮಗಳಿಗೆ ಹಂಚಿಕೆ ಮಾಡಲಾಗಿದೆ ಎಂದರು.

ಹಿಂದಿನ ಕಾಂಗ್ರೆಸ್ ಸರ್ಕಾರದಲ್ಲಿ ತಿ.ನರಸೀಪುರ ಕ್ಷೇತ್ರದ ಪ್ರತಿಯೊಂದು ಗ್ರಾಮದಲ್ಲೂ ಸಣ್ಣ ಪುಟ್ಟ ಸಮುದಾಯಗಳಿಗೂ ಆದ್ಯತೆ ನೀಡಿ ಸಮುದಾಯ ಭವನಗಳನ್ನು ನಿರ್ಮಾಣ ಮಾಡಲಾಗಿತ್ತು. ಆದಾಗ್ಯೂ ಕೆಲವು ಸಮುದಾಯಕ್ಕೆ ಭವನಗಳನ್ನು ನಿರ್ಮಾಣ ಮಾಡಲು ಸಾಧ್ಯವಾಗಿರಲಿಲ್ಲ. ಸಮುದಾಯ ಭವನ ಇಲ್ಲದ ಸಮುದಾಯಗಳಿಗೆ ಆದ್ಯತೆ ನೀಡಿ, ಸಮುದಾಯ ಭವನಗಳ ನಿರ್ಮಾಣಕ್ಕೆ ಅನುದಾನ ನೀಡಲು ಸಚಿವ ಮಹದೇವಪ್ಪ ಅವರು ರಾಜ್ಯ ಸರ್ಕಾರದಿಂದ 30 ಕೋಟಿ ಹಣ ಮಂಜೂರು ಮಾಡಿದ್ದಾರೆ. ಸ್ಥಳೀಯ ಮುಖಂಡರು, ಕಾರ್ಯಕರ್ತರು ಹಾಗೂ ಆಯಾಯ ಸಮುದಾಯಗಳ ಸಲಹೆ ಪಡೆದು ಹಂಚಿಕೆ ಮಾಡಲಾಗುವುದು ಎಂದರು.

ತಾಲೂಕಿನ ವ್ಯಾಸರಾಜಪುರದಿಂದ ಪ್ರವಾಸ ಆರಂಭಿಸಿದ ಸಂಸದರು ಸಿದ್ದನಹುಂಡಿ, ಜಗಜೀವನ ಗ್ರಾಮ, ಚಿಕ್ಕ ಲಕ್ಷ್ಮಿಪುರ, ಉಕ್ಕಲಗೆರೆ, ಎಂ.ಎಲ್. ಹುಂಡಿ ಹಾಗೂ ಕಳ್ಳಿಪುರ ಗ್ರಾಮಗಳಲ್ಲಿ ವಿಶೇಷ ಘಟಕ ಅನುದಾನದಲ್ಲಿ ಪರಿಶಿಷ್ಟರ ಕಾಲೋನಿಗಳಲ್ಲಿ ಸಿಮೆಂಟ್ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ ಭೂಮಿ ಪೂಜೆ ಸಲ್ಲಿಸಿದರು. ಸುನೀಲ್ ಬೋಸ್ ಅವರು ತಡವಾಗಿ ಆಗಮಿಸಿದರೂ ಕಾದು ಕುಳಿತಿದ್ದ ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಪಟಾಕಿ ಸಿಡಿಸಿ, ಭಾರೀ ಗಾತ್ರದ ಹಾರಗಳನ್ನು ಹಾಕಿ ಅದ್ಧೂರಿ ಸ್ವಾಗತ ಕೋರಿದರು. ಸ್ಥಳೀಯ ಸಮಸ್ಯೆಗಳನ್ನು ಆಲಿಸಿ, ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಪರಿಹರಿಸುವಂತೆ ಸೂಚಿಸಿದರು.

ಅಂಬೇಡ್ಕರ್ ಅಭಿವೃದ್ಧಿ ಸಂಘದ ಉಪಾಧ್ಯಕ್ಷ ಸೋಸಲೆ ಮಹದೇವಸ್ವಾಮಿ, ಪ್ರಥಮ ದರ್ಜೆ ಗುತ್ತಿಗೆದಾರ ಕಗ್ಗಲೀಪುರ ಕೆ.ಎಂ.ಮಧುಕುಮಾರ್, ಸೋಮನಾಥಪುರ ಗ್ರಾಪಂ ಮಾಜಿ ಅಧ್ಯಕ್ಷ ರಾಜೇಶ್, ಸೋಸಲೆ ಪಿಎಸಿಎಸ್ ಮಾಜಿ ಅಧ್ಯಕ್ಷ ಎಂ.ಪರಶಿವಮೂರ್ತಿ, ತಾಪಂ ಮಾಜಿ ಅಧ್ಯಕ್ಷರಾದ ಕೆಬ್ಬೆ ರಂಗಸ್ವಾಮಿ, ಶಿವಸ್ವಾಮಿ, ಯಜಮಾನ ಕೃಷ್ಣಪ್ಪ, ರಾಮಚಂದ್ರ, ಜೆ. ರಂಗಸ್ವಾಮಿ, ಚಿನ್ನಸ್ವಾಮಿ, ಮಲ್ಲಿಕಾರ್ಜುನಸ್ವಾಮಿ, ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಕುಕ್ಕೂರು ಗಣೇಶ್, ಸೋಮಣ್ಣ, ಸಿದ್ದರಾಜು, ಸುಂದರ್, ಮಹೇಶ್, ಮೆಕಾನಿಕ್ ಸೋಮಣ್ಣ, ಮಹದೇವ್ ಪ್ರಸಾದ್, ಎಪಿಎಂಸಿ ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ, ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ಮಾಜಿ ಸದಸ್ಯ ರಾಮಲಿಂಗಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಚನ್ನಕೇಶವ, ಸುನೀಲ್ ಬೋಸ್ ಯುವ ಬ್ರಿಗೇಡ್ ಸಂಚಾಲಕ ಕುಮಾರ್ ರಾಮೇಗೌಡ, ಆನಂದ, ಅರುಣ್, ಹರೀಶ್, ದೇವರಾಜು, ಗ್ರಾಪಂ ಅಧ್ಯಕ್ಷೆ ನಾಗಲಾಂಬಿಕ, ಸದಸ್ಯರಾದ ರವಿಶಂಕರ್, ಕೇಬಲ್ ಮಲ್ಲೇಶ, ಮಾಜಿ ಸದಸ್ಯ ರಾಜು, ಪಿಡಿಓ ಕೃಷ್ಣಪ್ಪ, ಸೋಮನಾಥಪುರ ಗ್ರಾಪಂ ಮಾಜಿ ಉಪಾಧ್ಯಕ್ಷ ಸಿದ್ದಪ್ಪ, ಆಪ್ತ ಸಹಾಯಕ ಬಿ.ಬಸವರಾಜು, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಾದ ಹೆಚ್.ಸಿ.ರತೀಶ್, ಪಿ.ಎನ್. ಚರಿತ, ಕೆ.ಶಿವರಾಜು, ಸತೀಶ್ ಚಂದ್ರನ್, ಸೆಸ್ಕ್ ವಿರೇಶ್, ಕೆಡಿಪಿ ಸದಸ್ಯೆ ವೀಣಾ ಶಿವಕುಮಾರ್, ಬನ್ನೂರು ಪುರಸಭೆ ಸದಸ್ಯ ಶಿವಣ್ಣ, ಶಿವಮೂರ್ತಿ, ಜೈ ಭೀಮ್ ಹೋರಾಟ ಸಮಿತಿ ಅಧ್ಯಕ್ಷ ರಾಘವೇಂದ್ರ, ಮಹದೇವ, ಮುಖಂಡರಾದ ಸೋಮಣ್ಣ, ಶ್ರೀಕಂಠಸ್ವಾಮಿ, ಜೆ.ಅನುಪ್‌ಗೌಡ, ನಾಗೇಂದ್ರ, ಸುಂದರ ನಾಯಕ, ಕೆ.ಅಶ್ವಿನ್ ಕುಮಾರ್ ಇತರರಿದ್ದರು.



ರಸ್ತೆ, ಚರಂಡಿ ಕಾಮಗಾರಿಗೆ ಸಂಸದ ಸುನೀಲ್ ಬೋಸ್ ಭೂಮಿ ಪೂಜೆ ನೆರವೇರಿಸಿದರು.

> ವ್ಯಾಸರಾಜಪುರ, ಸಿದ್ದನಹುಂಡಿ, ಜಗಜೀವನ ಗ್ರಾಮ, ಚಿಕ್ಕಲಕ್ಷ್ಮಿಪುರ, ಉಕ್ಕಲಗೆರೆ, ಕಳ್ಳಿಪುರ, ನರಗ್ಯಾತನಹಳ್ಳಿ ಗ್ರಾಮಗಳಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದ್ದು, ಕಾಮಗಾರಿ ಗುಣಮಟ್ಟದಿಂದ ಕೂಡಿರಬೇಕು ಮತ್ತು ಯಾರಿಗೂ ತೊಂದರೆಯಾಗದಂತೆ ಕೆಲಸ ಮಾಡಿ. ಮುಂದಿನ ದಿನಗಳಲ್ಲಿ ಜನರಲ್ ವಾರ್ಡ್‌ಗಳ ಅಭಿವೃದ್ಧಿಗೆ ಸರ್ಕಾರದಿಂದ ಹಣವನ್ನು ಬಿಡುಗಡೆಗೊಳಿಸುತ್ತೇವೆ. –ಸುನೀಲ್ ಬೋಸ್, ಸಂಸದ.

ಅರಮನೆ ಸುತ್ತಮುತ್ತ ಡ್ರೋನ್ ಹಾರಾಟ ನಿಷೇಧ: ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ

- ವಿವಾಹ ಪೂರ್ವ ಶೂಟಿಂಗ್ ವೇಳೆ ಡ್ರೋನ್ ಬಳಸದಂತೆ ಎಚ್ಚರಿಕೆ
- ಭದ್ರತಾ ಹಿತದೃಷ್ಟಿಯಲ್ಲಿ ಡ್ರೋನ್ ಹಾರಾಟಕ್ಕೆ ಕಡಿವಾಣ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಮೇ 14 – ದೇಶದಾದ್ಯಂತ ಭದ್ರತೆ ವಿಚಾರ ಚರ್ಚೆಯಾಗುತ್ತಿರುವ ಬೆನ್ನಲ್ಲೇ ಮೈಸೂರು ಅರಮನೆ ಸುತ್ತ ಡ್ರೋನ್ ಹಾರಾಟ ನಿಷೇಧಿಸಲಾಗಿದ್ದು, ನಿಯಮ ಉಲ್ಲಂಘಿಸಿ ಡ್ರೋನ್ ಹಾರಿಸಿದರೆ ತಕ್ಕ ಶಾಸ್ತಿ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಲಾಗಿದೆ.

ನಾಡಹಬ್ಬ ದಸರಾ ಸಂದರ್ಭದಲ್ಲಿ ಹಾಗೂ ಗಜಪಡೆ ತಾಲೀಮು ವೇಳೆ ಕೆಲವರು ಶೋಕಿಗಾಗಿ ಮನಸ್ಸೋ ಇಚ್ಛೆ ಡ್ರೋನ್ ಹಾರಿಸಿ ಉದ್ಧಟತನ ಪ್ರದರ್ಶಿಸಿದ್ದ ಬೆನ್ನಲ್ಲೇ, ಅರಮನೆ ಸೇರಿದಂತೆ ಸುತ್ತಲಿನ ಪ್ರದೇಶವನ್ನು ಹಳದಿ(ಯಲ್ಲೋ) ವಲಯ ವಾಗಿ ಜಿಲ್ಲಾಡಳಿತ ಘೋಷಿಸಿ, ಡ್ರೋನ್ ಹಾರಾಟ ನಿರ್ಬಂಧಿಸಿತ್ತು. ಇದೀಗ ಭಾರತ–ಪಾಕಿಸ್ತಾನದ ನಡುವಿನ ಸಂಘರ್ಷ ಹೆಚ್ಚಾದ ಹಿನ್ನೆಲೆಯಲ್ಲಿ ಗಡಿಭಾಗದಲ್ಲಿ ಪಾಕಿಸ್ತಾನ ಡ್ರೋನ್ ದಾಳಿ ನಡೆಸಿರುವುದರಿಂದ ಇದೀಗ ಡ್ರೋನ್ ಹಾರಾಟದ ಮೇಲೆ ನಿಗಾ ಇಡಲಾಗಿದೆ.

ಮೈಸೂರು ಅರಮನೆ, ಚಾಮುಂಡಿಬೆಟ್ಟದ ದೇವಾಲಯದ ಬಳಿ, ಕೆಆರ್‌ಎಸ್, ಕಬಿನಿ, ನುಗು ಜಲಾಶಯ ಸೇರಿದಂತೆ ವಿವಿಧ ಪ್ರಮುಖ ಸ್ಥಳದ ಮೇಲೆ ಡ್ರೋನ್ ಹಾರಾಟವನ್ನು ಈ ಹಿಂದೆಯೇ ನಿಷೇಧಿಸಲಾಗಿದೆಯಾದರೂ, ನಿಯಮ ಉಲ್ಲಂಘಿಸಿ ಹಾಗೂ ಉದ್ಧಟತನದಿಂದ ಡ್ರೋನ್ ಹಾರಿಸುವವರ ಮೇಲೆ ಇನ್ನಷ್ಟು ನಿಗಾ ಇಡಲಾಗಿದೆ. ಡ್ರೋನ್‌ನಿಂದ ತೆಗೆದ ಚಿತ್ರ ಹಾಗೂ ವಿಡಿಯೋ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಅಪ್ಲೋಡ್ ಮಾಡುವುದರಿಂದ ಗೌಪ್ಯತೆ ಹಾಗೂ ಭದ್ರತೆಗೆ ದಕ್ಕೆಯಾಗುತ್ತದೆ.

ಅನಧಿಕೃತವಾಗಿ ಹಾರಾಡುತ್ತಿದ್ದ ಐದಾರು ಡ್ರೋನ್ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದೇವೆ

ಅರಮನೆ ಸುತ್ತಮುತ್ತ ಹಳದಿ ವಲಯ ಎಂದು ಜಿಲ್ಲಾಡಳಿತ ಕೆಲ ವರ್ಷಗಳ ಹಿಂದೆಯೇ ಘೋಷಿಸಿದೆ. ಈ ಹಿನ್ನೆಲೆಯಲ್ಲಿ ಅರಮನೆ ಸುತ್ತ ಡ್ರೋನ್ ಹಾರಾಟ ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಕಳೆದ 3–4 ವರ್ಷದಿಂದಲೂ ಡ್ರೋನ್ ಹಾರಾಟ ನಿಷೇಧಿಸಲಾಗಿದೆಯದರೂ, ಕೆಲವರು ಡ್ರೋನ್ ಹಾರಿಸುತ್ತಿದ್ದದ್ದು ಅರಮನೆ ಆಡಳಿತ ಮಂಡಳಿ ಗಮನಕ್ಕೆ ಬಂದಿತ್ತು. ಇದುವರೆಗೂ 5–6 ಡ್ರೋನ್ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದೇವೆ. ಅರಮನೆ ಆವರಣದಲ್ಲಿ ನಡೆಯುವ ಕಾರ್ಯಕ್ರಮದ ಚಿತ್ರೀಕರಣಕ್ಕಾಗಿ ಅನುಮತಿ ಪಡೆದು, ಕೆಲ ನಿಬಂಧನೆಯೊಂದಿಗೆ ಡ್ರೋನ್ ಹಾರಿಸುವುದಕ್ಕೆ ವಿನಾಯಿತಿ ಇದೆ.

– ಟಿ.ಎಸ್.ಸುಬ್ರಹ್ಮಣ್ಯ,
ಉಪ ನಿರ್ದೇಶಕ, ಅರಮನೆ ಮಂಡಳಿ.



ಅರಮನೆಯ ಜಯರಾಮ, ಬಲರಾಮ ದ್ವಾರದಲ್ಲಿ ಡ್ರೋನ್ ಹಾರಾಟ ನಿಷೇಧದ ಎಚ್ಚರಿಕಾ ಸೂಚನ ಫಲಕ ಅಳವಡಿಸಿರುವುದು.

ಈ ಹಿನ್ನೆಲೆಯಲ್ಲಿ ಕಟ್ಟುನಿಟ್ಟಾಗಿ ಡ್ರೋನ್ ಹಾರಾಟದ ಮೇಲೆ ಹದ್ದಿನ ಕಣ್ಣಿಡಲಾಗಿದೆ.

ಅರಮನೆ ಪ್ರವೇಶ ದ್ವಾರಗಳಾದ ಜಯರಾಮ, ಬಲರಾಮ(ಕೋಟೆ ಆಂಜನೇಯಸ್ವಾಮಿ ದೇವಾಲಯ), ಜಯಮಾರ್ತಾಂಡ, ವರಹಾ ಗೇಟ್ ಬಳಿ ಭಾರತ ಏರ್‌ಕ್ರಾಫ್ಟ್ ಕಾಯ್ದೆ 1934 ಹಾಗೂ ಭಾರತ ಡ್ರೋನ್ ರೂಲ್ಸ್–2021 ಅನ್ವಯ ಡ್ರೋನ್ ಹಾರಾಟ ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ ಎಂದು ಸೂಚನಾ ಫಲಕ ಅಳವಡಿಸಲಾಗಿದೆ.

ಡ್ರೋನ್ ಹಾರಿಸಲು ಮುಂದಾದರೆ ತಕ್ಕ ಶಾಸ್ತಿಗೆ ಒಳಗಾಗಬೇಕಾಗುತ್ತದೆ. ಭದ್ರತಾ ಹಿತದೃಷ್ಟಿಯಿಂದ ಜಿಲ್ಲಾಡಳಿತ ಜಾರಿಗೊಳಿಸಿರುವ ನಿಯಮಕ್ಕೆ ಎಲ್ಲರೂ ಸಾಥ್ ನೀಡಬೇಕಾಗಿದೆ. ಒಂದು ವೇಳೆ ಡ್ರೋನ್ ಹಾರಿಸುವ ಬಂಡ ಧೈರ್ಯ ಪ್ರದರ್ಶಿಸಿದರೆ, ಪೊಲೀಸರು ಡ್ರೋನ್ ವಶಕ್ಕೆ ಪಡೆದು ದಂಡ ವಿಧಿಸಲಿದ್ದಾರೆ.

ವಿವಾಹ ಪೂರ್ವ ಚಿತ್ರೀಕರಣಕ್ಕೂ ಬಳಕೆ: ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯ, ದೊಡ್ಡಗಡಿಯಾರ, ಕೆಆರ್ ವೃತ್ತ, ಡಿ.ದೇವರಾಜ ಅರಸ್ ರಸ್ತೆ, ಚಿಕ್ಕಗಡಿಯಾರ ವೃತ್ತ, ಹಳೆ ಜಿಲ್ಲಾಧಿಕಾರಿ ಕಚೇರಿ ಸಮೀಪ ಪ್ರತಿದಿನ ವಿವಾಹ ಪೂರ್ವ ಫೋಟೋ ಶೂಟ್ ಮಾಡುವ ವೇಳೆ ಕೆಲವರು ಚಿಕ್ಕ ಗಾತ್ರದ ಡ್ರೋನ್ ಬಳಸುತ್ತಿದ್ದು, ಅದು ನಿಯಮ ಉಲ್ಲಂಘನೆಯಾಗಲಿದೆ. ಕಟ್ಟುನಿಟ್ಟಿನ ನಿಯಮ ಜಾರಿಗೊಳಿಸಿರುವುದರಿಂದ ಇನ್ನು ಮುಂದೆ ವಿವಾಹ ಪೂರ್ವ ಫೋಟೋ ಶೂಟ್‌ಗಾಗಿ ಡ್ರೋನ್ ಬಳಕೆಗೂ ಕಡಿವಾಣ ಬೀಳಲಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಯುದ್ಧಕಾಂಡ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಹಿಟ್ (ಕ) + ಹಿಟ್ (ತೆ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ದಿ ಭೂತ್‌ನಿ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರೆಟ್ರೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರೆಟ್ರೋ (ತ)	4 ಪ್ರದರ್ಶನಗಳು
ರಾಜಕಮಲ್	
ಟೂರಿಸ್ಟ್ ಫ್ಯಾಮಿಲಿ (ತ)	4 ಪ್ರದರ್ಶನಗಳು
ಸಂಗಂ	
ರೆಟ್ರೋ (ತ)	4 ಪ್ರದರ್ಶನಗಳು
ಲಿಡೋ	
ಯುದ್ಧಕಾಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಜೈಲು ಮುಖ್ಯ ವೀಕ್ಷಕಿ ಅಥ್ಲೀಟ್ ಉಮಾಗೆ 'ವರ್ಷದ ಕನ್ನಡಿಗ' ಪ್ರಶಸ್ತಿ





ವರ್ಷದ ಕನ್ನಡಿಗ ಪ್ರಶಸ್ತಿ ಸ್ವೀಕರಿಸುತ್ತಿರುವ ಅಥ್ಲೀಟ್ ಉಮಾ.

ಮೈಸೂರು, ಮೇ 14(ಆರ್‌ಕೆ)– ಮೈಸೂರು ಕೇಂದ್ರ ಕಾರಾಗೃಹದ ಮುಖ್ಯ ವೀಕ್ಷಕಿ (Head Warder)ಯಾದ ಅಥ್ಲೀಟ್ ಎಸ್.ಎಂ.ಉಮಾ ಅವರಿಗೆ ಬೆಂಗಳೂರಿನ ಚಿತ್ರಸಂತೆಯಿಂದ 'ವರ್ಷದ ಕನ್ನಡಿಗ ಶ್ರೇಷ್ಠ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಬೆಂಗಳೂರಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ನಟಿ ಹರ್ಷಿತಾ ಪೂಣಚ್ಚ ಅವರು ಉಮಾ ಅವರಿಗೆ ಚಿತ್ರಸಂತೆ 'ವರ್ಷದ ಕನ್ನಡಿಗ ಶ್ರೇಷ್ಠ' ಪ್ರಶಸ್ತಿ ಪ್ರದಾನ ಮಾಡಿದರು. ಚಿತ್ರಸಂತೆಯ ಗಿರೀಶ್ ಗೌಡ ಹಾಗೂ ದಿನೇಶ್ ಗುರೂಜಿ ಉಪಸ್ಥಿತರಿದ್ದರು.

ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲೂಕು, ಸುರಪುರ ಗ್ರಾಮದ ಕೃಷಿಕ ಸೋಮಣ್ಣ ಮತ್ತು ಮಂಜುಳಾ ಅವರ ಪುತ್ರಿಯಾದ ಉಮಾ ಅವರು, ಕಾರವಾರದ ಪ್ರಮೋದ್ ನಾಯಕರನ್ನು ವಿವಾಹವಾಗಿದ್ದು, ಅವರಿಗೆ ಇಬ್ಬರು ಮಕ್ಕಳಿದ್ದಾರೆ. ಬಿಎ ಪದವೀಧರರಾದ ಅವರು, 2008ರ ಜನವರಿ 1ರಂದು ಕಾರಾಗೃಹಗಳ ಸೇವೆ ಇಲಾಖೆಗೆ ವೀಕ್ಷಕಿಯಾಗಿ ಸೇರಿ, ಈಗ ಮೈಸೂರು ಕೇಂದ್ರ ಗ್ರಂಥಾಲಯದಲ್ಲಿ ಮುಖ್ಯ ವೀಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಅಥ್ಲೀಟ್ ಮತ್ತು ಕಬಡ್ಡಿಯಲ್ಲಿ ಆಸಕ್ತಿ ಹೊಂದಿದ್ದರೂ, ಮನೆಯ ವಾತಾವರಣ ಪ್ರೋತ್ಸಾಹ ನೀಡಿರಲಿಲ್ಲ. ಮದುವೆಯಾದ ಬಳಿಕ ಪತಿಯ ಬೆಂಬಲ, ನೆರವಿನಿಂದ ಕ್ರೀಡಾಭ್ಯಾಸ ಮುಂದುವರೆಸಿ ಉತ್ತಮ ಅಥ್ಲೀಟ್ ಆಗಿ ರೂಪುಗೊಂಡ ಉಮಾ, ರಾಜ್ಯ, ರಾಷ್ಟ್ರೀಯ, ಅಂತರ ರಾಷ್ಟ್ರೀಯ ಅಥ್ಲೀಟ್‌ನಲ್ಲಿ ಭಾಗವಹಿಸಿ ಹಲವು ಪದಕ ಗಳಿಸಿದರು.

ಶ್ರೀಲಂಕಾ, ಭೂತಾನ್ ಮತ್ತು ಥೈಲ್ಯಾಂಡ್ ಗಳಲ್ಲಿ ಚಿನ್ನ, ಬೆಳ್ಳಿ ಪದಕ ಗಳಿಸಿರುವ ಆಕೆ 5, 10, 21 ಕಿ.ಮೀ. ಮ್ಯಾರಥಾನ್‌ನಲ್ಲಿ ಪಾಲ್ಗೊಂಡಿದ್ದು, ಮುಂದೆ 42 ಕಿ.ಮೀ. ಫುಲ್ ಮ್ಯಾರಥಾನ್‌ನಲ್ಲಿ ಸ್ಪರ್ಧಿಸುವ ಉದ್ದೇಶ ಹೊಂದಿದ್ದಾರೆ. ಯಾವ ಕೋಚ್ ನೆರವಿಲ್ಲದೇ ಸ್ವತಃ ತಾನೇ ಅಭ್ಯಾಸ ಮಾಡಿ ಕ್ರೀಡೆಯಲ್ಲಿ ಮುಂದೆ ಬಂದು ಸಾಧನೆ ಮಾಡಿದ್ದಾರೆ.

ರಾಜ್ಯ ಒಕ್ಕಲಿಗರ ವೇದಿಕೆಯಿಂದ 'ಕರ್ನಾಟಕ ವಿಕಾಸ ರತ್ನ' , ತುಮಕೂರಿನ ಮಾತೃಭೂಮಿ ಸೇವಾ ಟ್ರಸ್ಟ್‌ನಿಂದ 'ಮಾತೃ ಭೂಮಿ ಸೇವಾ ರತ್ನ' ಜನನಿ ಸೇವಾ ಟ್ರಸ್ಟ್‌ನಿಂದ 'ದಿಟ್ಟ ಮಹಿಳೆ' ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿರುವ ಉಮಾ ಸಾಧನೆಗೆ ಮೈಸೂರು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ರಮೇಶ್ ಕುಮಾರ್, ಅಧಿಕಾರಿಗಳು ಹಾಗೂ ಸಿಬ್ಬಂದಿಯ ಸಹಕಾರ, ನೆರವು ಸಹ ಕಾರಣವಾಗಿದೆ.

ಸಿಬಿಎಸ್‌ಇಯಲ್ಲಿ ಜೆಎಸ್‌ಎಸ್ ಪಬ್ಲಿಕ್ ಶಾಲೆಗೆ ಶೇ. 100 ಫಲಿತಾಂಶ



ನವ್ಯಕೀರ್ತಿ ಬಿ. | ಎಂ. ಶರಣ್ಯ | ಜೆ. ಸಿಂಚನ | ಅನನ್ಯ ಗಿರೀಶ್



ಕೆ.ಬಿ. ನಿಹಾರಿಕ | ಸಿ. ಯಶಸ್ | ಶ್ರೀಗೌರಿ ಪಿ. | ಜಿ. ತರುಣ್



ಅವನೀಶ್ ಎಸ್. ಶೇಖರ್ | ಎನ್.ಆರ್. ಅಪೇಕ್ಷ | ಅನುಷ್ಕಾ ಸಿ. | ಚೈತನ್ಯ ನಿಮ್ಜೆ

ಮೈಸೂರು, ಮೇ 14– ಮೈಸೂರಿನ ಜೆ.ಪಿ ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಗೆ 2024–25ನೇ ಸಾಲಿನ ಸಿ.ಬಿ.ಎಸ್.ಇ 10ನೇ ತರಗತಿ ಪರೀಕ್ಷೆಯಲ್ಲಿ ಶೇಕಡ 100% ಫಲಿತಾಂಶ ಬಂದಿದೆ. ಪರೀಕ್ಷೆಗೆ ಹಾಜರಾದ 67 ವಿದ್ಯಾರ್ಥಿಗಳಲ್ಲಿ 30 ವಿದ್ಯಾರ್ಥಿಗಳು ಅತ್ಯುತ್ತಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದು 12 ವಿದ್ಯಾರ್ಥಿಗಳು ಪ್ರತಿಶತ 90ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ.

ವೈಷ್ಣವಿ ಜೆ. ರಾವ್‌ಗೆ ಶೇ. 97.5 ಅಂಕ



ಮೈಸೂರು, ಮೇ 14– ಈ ಬಾರಿಯ ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಮಾನಸಗಂಗೋತ್ರಿ ಜೆಎಸ್‌ಎಸ್ ಪಬ್ಲಿಕ್ ಶಾಲೆ ವಿದ್ಯಾರ್ಥಿನಿ ವೈಷ್ಣವಿ ಜೆ. ರಾವ್ ಶೇ. 97.5 ಅಂಕ ಪಡೆಯುವ ಮೂಲಕ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಎ. ಜಗನ್ನಾಥ್ ಮತ್ತು ಪೂಜಾ ಜೆ.ಎ. ರಾವ್ ದಂಪತಿ ಪುತ್ರಿ.

ಆಚಾರ್ಯತ್ರಯರ ಸಿದ್ಧಾಂತಗಳಲ್ಲಿ ಭಿನ್ನತೆ ಇದ್ದರೂ ಅಂತಿಮ ಗುರಿ ಜ್ಞಾನದ ಮೇರು ಶಿಖರಕ್ಕೇರುವುದೇ

- ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ
- ಸರ್ಕಾರದಿಂದ ರಾಮಾನುಜರು, ಮಧ್ವರ ಜಯಂತಿ ಆಚರಿಸಲು ಮನವಿ

ಮೈಸೂರು,ಮೇ 14(ಪಿಎಂ)– ಆಚಾರ್ಯತ್ರಯರಾದ ಶ್ರೀ ಶಂಕರರು, ಶ್ರೀ ಮಧ್ವರು ಹಾಗೂ ಶ್ರೀ ರಾಮಾನುಜರ ಸಿದ್ಧಾಂತಗಳಲ್ಲಿ ಕೆಲ ಭಿನ್ನತೆ ಇದ್ದರೂ ಅಂತಿಮವಾಗಿ ಮೂವರ ಸಿದ್ಧಾಂತಗಳ ಗುರಿಯು ಜ್ಞಾನದ ಮೇರು ಶಿಖರಕ್ಕೇರುವುದೇ ಆಗಿದೆ ಎಂದು ಹಿರಿಯ ಸಮಾಜ ಸೇವಕ ಡಾ.ಕೆ. ರಘುರಾಂ ವಾಜಪೇಯಿ ಹೇಳಿದರು.

ಮೈಸೂರಿನ ಜಯನಗರದ ಶ್ರೀರಾಮ ಮಂದಿರದಲ್ಲಿ ಡಾ.ಕೆ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನ ಹಾಗೂ ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್ ಜಂಟಿ ಆಶ್ರಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಆದಿಗುರು ಶ್ರೀ ಶಂಕರಾಚಾರ್ಯರು ಮತ್ತು ಶ್ರೀ ರಾಮಾನುಜಾಚಾರ್ಯರ ಜಯಂತ್ಯುತ್ಸವ ಸಮಾರಂಭವನ್ನು ಆಚಾರ್ಯತ್ರಯರ ಫೋಟೋಗಳಿಗೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ, ಮಾತನಾಡಿದರು.

ಮೂವರ ಸಂದೇಶ ಒಂದೇ. ಅದು ಆತ್ಮಜ್ಞಾನವಾಗಿದೆ. ಆದರೆ ನಾವು ಅವರ ಸಿದ್ಧಾಂತಗಳನ್ನು ಮುಂದಿಟ್ಟುಕೊಂಡು ಭಿನ್ನಾಭಿಪ್ರಾಯದಲ್ಲಿ ಬದುಕುತ್ತಿದ್ದೇವೆ. ಶಂಕರಾಚಾರ್ಯರು ಅದ್ವೈತ ಸಿದ್ಧಾಂತ ಕೊಟ್ಟರು. ಅದನ್ನು ಪರಿಷ್ಕರಿಸಿ ರಾಮಾನುಜಾಚಾರ್ಯರು ವಿಶಿಷ್ಟ ಅದ್ವೈತ ಸಿದ್ಧಾಂತ ಕೊಟ್ಟಿದ್ದಾರೆ. ನಂತರದಲ್ಲಿ ಮಧ್ವಾಚಾರ್ಯರು ದ್ವೈತ ಸಿದ್ಧಾಂತ ಕೊಟ್ಟಿದ್ದಾರೆ. ಆಸಕ್ತರು ತಮ್ಮ ಆಯ್ಕೆಯಂತೆ ಯಾರ ಸಿದ್ಧಾಂತದ ಬಗ್ಗೆಯಾದರೂ ಓದಿ ತಿಳಿದುಕೊಳ್ಳಬಹುದು. ಆ ಮೂಲಕ ಆನಂದ ಅನುಭವಿಸಬಹುದು. ಅದರ ಹೊರತಾಗಿ ಜಗಳ ಏಕೆ ಬೇಕು ಎಂದು ಪ್ರಶ್ನಿಸಿದರು.



ಮೈಸೂರಿನ ಜಯನಗರದ ಶ್ರೀರಾಮ ಮಂದಿರದಲ್ಲಿ ಬುಧವಾರ ಆಚಾರ್ಯತ್ರಯರ ಫೋಟೋಗಳಿಗೆ ಪುಷ್ಪ ನಮನ ಸಲ್ಲಿಸಲಾಯಿತು.

ಆಚಾರ್ಯತ್ರಯರು ಹೇಳಿರುವುದು ಒಂದೇ. ಭಿನ್ನ ದಾರಿಗಳನ್ನು ಸೂಚಿಸಿದ್ದಾರಷ್ಟೇ. ಹಾಗಾಗಿ ಆಚಾರ್ಯತ್ರಯರನ್ನು ದೂಷಿಸುವುದು ಸರಿಯಲ್ಲ. ಮೂವರು ದೈವಾಂಶ ಸಂಭೂತರು. ಮೂವರು ಆತ್ಮ ಮತ್ತು ಬ್ರಹ್ಮಜ್ಞಾನ ಪಡೆಯಬೇಕೆಂದೇ ಹೇಳಿದ್ದಾರೆ. ಶಂಕರಾಚಾರ್ಯರನ್ನು ಶಂಕರನ ಅವತಾರ ಎಂದೇ ಕರೆಯಲಾಗಿದೆ. ಹಾಗೆಯೇ ರಾಮಾನುಜಾಚಾರ್ಯರನ್ನು ಅಧಿಶೇಷನ ಅವತಾರ ಎನ್ನುತ್ತೇವೆ. ಅದೇ ರೀತಿ ಮಧ್ವಾಚಾರ್ಯರನ್ನು ಭೀಮ, ವಾಯು ಎಂದು ಕರೆಯುತ್ತೇವೆ. ವೇದವ್ಯಾಸರು ರಚಿಸಿದ ಬ್ರಹ್ಮಸೂತ್ರ ಕಬ್ಬಿಣದ ಕಡಲೆಯಂತೆ ಅರ್ಥೈಸಿಕೊಳ್ಳುವುದು ಕಷ್ಟಕರವಾಗಿತ್ತು. ಅದಕ್ಕೆ ಭಾಷ್ಯ ಬರೆದವರು ಶಂಕರಾಚಾರ್ಯರು. ಮೂವರು ಸಮಾಜದ ಉದ್ಧಾರಕ್ಕಾಗಿ ಮಾರ್ಗದರ್ಶ ನೀಡಿದ್ದಾರೆ ಎಂದರು.

ರಾಮಾನುಜರು, ಮಧ್ವರ ಜಯಂತಿ ಸರ್ಕಾರದಿಂದ ಆಚರಣೆಯಾಗಬೇಕು. ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದಾಗ ಶಂಕರಾಚಾರ್ಯರ ಜಯಂತಿಯನ್ನು 'ತತ್ವಜ್ಞಾನಿಗಳ ದಿನಾಚರಣೆ' ಎಂದು ಘೋಷಣೆ ಮಾಡಿದರು. ಜೊತೆಗೆ ಆರ್‌ಹೆಚ್ ವಿಧದ ರಜೆ ಸಹ ಘೋಷಣೆ ಮಾಡಿದರು. ಅಲ್ಲದೆ, ಸರ್ಕಾರದಿಂದ ಜಯಂತಿ ಆಚರಣೆಗೂ ಕ್ರಮ ವಹಿಸಿದರು. ಅದೇ ರೀತಿ ರಾಮಾನುಜಾಚಾರ್ಯರು ಮತ್ತು ಮಧ್ವಾಚಾರ್ಯರ ಜಯಂತಿಯನ್ನು ಸರ್ಕಾರದಿಂದ ಆಚರಣೆ ಮಾಡಬೇಕು. ಜೊತೆಗೆ ಆರ್‌ಹೆಚ್ ವಿಧದ ರಜೆ ಕೊಡಬೇಕೆಂದು ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಶ್ರೀ ಶಂಕರರು ಹಾಗೂ ರಾಮಾನುಜರ ಕುರಿತು ಡಾ.ಕೆ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನದ ನಿರ್ದೇಶಕಿ ಡಾ.ಕೆ.ಲೀಲಾಪ್ರಕಾಶ್ ಮಾತನಾಡಿದರು. ಇದೇ ವೇಳೆ ಜಯನಗರ ರಾಮಮಂದಿರದ ಧರ್ಮದರ್ಶಿ ಎನ್.ಅರುಣ್ ಅವರನ್ನು ಸನ್ಮಾನಿಸಲಾಯಿತು. ಕಾಂಗ್ರೆಸ್ ಮುಖಂಡ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಎನ್.ಎಂ.ನವೀನ್‌ಕುಮಾರ್, ಕಾಳಿದಾಸ ರಸ್ತೆಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನದ ಸಿಇಓ ಕೆಆರ್.ಯೋಗನರಸಿಂಹನ್, ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್ ಅಧ್ಯಕ್ಷ ಎಂ.ವಿ.ನಾಗೇಂದ್ರಬಾಬು, ಸಂಚಾಲಕ ಚಕ್ರಪಾಣಿ, ಡಾ.ಕೆ.ಕೃಷ್ಣಮೂರ್ತಿ ಸಂಶೋಧನಾ ಪ್ರತಿಷ್ಠಾನದ ಸಂಚಾಲಕ ಸಿ.ಎಂ. ಕೇಶವಪ್ರಕಾಶ್ ಮತ್ತಿತರರು ಹಾಜರಿದ್ದರು.

ಹರಿ ವಿದ್ಯಾಲಯಕ್ಕೆ ಶೇ. 100 ಫಲಿತಾಂಶ



ಕೆ.ಟಿ. ಯಶ್ವಂತ್ | ಲಕ್ಷ್ಮಿ ಧಾರೆ | ಹೆಚ್.ಎ. ರಶ್ಮಿ | ರೇವಂತ್ ಎಸ್.ಗೌಡ



ತನ್ಮಯ್ ದೀಪ್ | ಹೆಚ್. ರಿತಿಕಾ

ಮೈಸೂರು, ಮೇ 14– ಮೈಸೂರಿನ ಬೋಗಾದಿಯಲ್ಲಿರುವ ಹರಿ ವಿದ್ಯಾಲಯಕ್ಕೆ 2024–25ರ ಶೈಕ್ಷಣಿಕ ವರ್ಷದ 10ನೇ ತರಗತಿ CBSE ವಾರ್ಷಿಕ ಪರೀಕ್ಷೆಯಲ್ಲಿ ಶೇ.100% ರಷ್ಟು ಫಲಿತಾಂಶ ಬಂದಿದೆ. ಉನ್ನತ ಶ್ರೇಣಿಯಲ್ಲಿ 2 ವಿದ್ಯಾರ್ಥಿಗಳು ಮತ್ತು ಪ್ರಥಮ ದರ್ಜೆಯಲ್ಲಿ 16 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಬಿಬಿಎಂಪಿ ಯುಗಾಂತ್ಯ; ಇಂದಿನಿಂದ 'ಗ್ರೇಟರ್ ಬೆಂಗಳೂರು' ಆಡಳಿತ ಜಾರಿ

ಬೆಂಗಳೂರು, ಮೇ 14– ನಗರ ಪಾಲಿಕೆ, ಮಹಾನಗರ ಪಾಲಿಕೆ ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿದ್ದ ಸಿಲಿಕಾನ್ ಸಿಟಿ ಬೆಂಗಳೂರು ನಾಳೆ(ಮೇ.15)ಯಿಂದ ಗ್ರೇಟರ್ ಬೆಂಗಳೂರಾಗಿ ಬದಲಾಗುತ್ತಿದೆ. ಬಿಬಿಎಂಪಿಯಾಗಿದ್ದ ಬೆಂಗಳೂರನ್ನು ಗ್ರೇಟರ್ ಬೆಂಗಳೂರನ್ನಾಗಿ ಪರಿವರ್ತನೆ ಮಾಡಿರುವ ಆದೇಶ ಹೊರ ಬಿದ್ದಿದ್ದು, ನಾಳೆಯಿಂದಲೇ ಗ್ರೇಟರ್ ಬೆಂಗಳೂರು ಆಡಳಿತ ಜಾರಿಗೆ ಬರುತ್ತಿದೆ ಎಂದು ಆದೇಶದಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ.

ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ ಸಂಖ್ಯೆ 36) ರ ಒಂದನೇ ಪ್ರಕರಣದ (3) ನೇ ಉಪ ಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವೂ ಈ ಮೂಲಕ ಸದರಿ ಅಧಿನಿಯಮವನ್ನು ಎಲ್ಲಾ ಪ್ರಕರಣಗಳು ಹಾಗೂ ಉಪಬಂಧಗಳು ನಾಳೆಯಿಂದ (15.05.2025) ಜಾರಿಗೆ ಬರತಕ್ಕದೆಂದು ಗೊತ್ತುಪಡಿಸಿದೆ ಎಂದು ತಿಳಿಸಲಾಗಿದೆ.



ರಾಜ್ಯಪಾಲರು ಅನುಮೋದಿಸಿರುವ ಈ ಆದೇಶವನ್ನು ನಗರಾಭಿವೃದ್ಧಿ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿಗಳು ಅಧಿಸೂಚನೆ ಹೊರಡಿಸಿದ್ದಾರೆ. ನಾಳೆಯಿಂದ ಜಾರಿಗೆ ಬರಲಿರುವ ಜಿಬಿಎ ಆಡಳಿತ ಕುರಿತ ಮಾಹಿತಿಯನ್ನು ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಮುಖ್ಯಸ್ಥರಿಗೂ ರವಾನೆ ಮಾಡಲಾಗಿದೆ. ಬಿಬಿಎಂಪಿಯನ್ನು ಏಕಾಏಕಿ ಗ್ರೇಟರ್ ಬೆಂಗಳೂರನ್ನಾಗಿ ಮಾರ್ಪಾಡು ಮಾಡಿರುವ ಸರ್ಕಾರದ ಆದೇಶಕ್ಕೆ ಕೆಲ ಬಿಬಿಎಂಪಿ ಹಿರಿಯ ಅಧಿಕಾರಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಏಕಾಏಕಿ ಬಿಬಿಎಂಪಿಯನ್ನು ಜಿಬಿಎ ಮಾಡಿ ಮಾರ್ಪಾಡು ಮಾಡಿ ಹೊಸ ಬೆಂಗಳೂರು ಕಾಯ್ದೆ ಜಾರಿಗೆ ತಂದಿರುವುದರಿಂದ ನಾವೆಲ್ಲಾ ನಾಳೆಯಿಂದ ಯಾವ ಕಾಯ್ದೆ ಪ್ರಕಾರ ಕರ್ತವ್ಯ ನಿರ್ವಹಿಸಬೇಕು ಎಂದು ಗೊಂದಲದಲ್ಲಿದ್ದೇವೆ ಎಂದು ಅಲವತ್ತುಕೊಂಡಿದ್ದಾರೆ.

ಸಿಎಂ ಅಧ್ಯಕ್ಷರು: ನಾಳೆಯಿಂದ ಜಾರಿಗೆ ಬರಲಿರುವ ಜಿಬಿಎಗೆ ಮುಖ್ಯಮಂತ್ರಿಗಳೇ ಅಧ್ಯಕ್ಷರಾಗಿರುತ್ತಾರೆ. ಡಿಸಿಎಂ ಅವರು ಉಪಾಧ್ಯಕ್ಷರಾಗಲಿದ್ದು ಬಿಬಿಎಂಪಿ ಆಡಳಿತಾಧಿಕಾರಿಯಾಗಿರುವ ಹಿರಿಯ ಐಎಎಸ್ ಅಧಿಕಾರಿ ತುಷಾರ್ ಗಿರಿನಾಥ್ ಅವರು ಜಿಬಿಎ ಮುಖ್ಯ ಕಾರ್ಯನಿರ್ವಾಹಕರಾಗಿ ಕಾರ್ಯ ನಿರ್ವಹಿಸಲಿದ್ದಾರೆ.

ಬಿಬಿಎಂಪಿ ರಚನೆಯಾದ ಮೇಲೆ ಬಿಬಿಎಂಪಿ ಆಯುಕ್ತರನ್ನು ಮುಖ್ಯ ಆಯುಕ್ತರನ್ನಾಗಿ ಮೇಲ್ದರ್ಜೆಗೆ ಏರಿಸಲಾಗಿತ್ತು. ಇದೀಗ ಬಿಬಿಎಂಪಿ ಆಡಳಿತಾವಧಿ ಇಂದಿಗೆ ಕೊನೆಗೊಳ್ಳುತ್ತಿರುವುದರಿಂದ ಹೊಸದಾಗಿ ಮುಖ್ಯ ಆಯುಕ್ತರಾಗಿ ನಿಯೋಜನೆಗೊಂಡಿರುವ ಮಹೇಶ್ವರ್ ರಾವ್ ಅವರ ಕಥೆ ಏನಾಗಲಿದೆ ಎಂದು ಇನ್ನು ಗೊತ್ತಾಗಿಲ್ಲ.

ಇಂದಿನಿಂದ: ಸದ್ಯ ಬಿಬಿಎಂಪಿಯ 225 ವಾರ್ಡ್‌ಗಳು ಜಿಬಿಎ ವ್ಯಾಪ್ತಿಯಲ್ಲಿರಲಿದೆ. ನಂತರ ಬಿಬಿಎಂಪಿ ವ್ಯಾಪ್ತಿ ಮಾತ್ರ 'ಗ್ರೇಟರ್ ಬೆಂಗಳೂರು ಪ್ರದೇಶ' ಎಂದಾಗಲಿದ್ದರೂ ನಂತರದ ದಿನಗಳಲ್ಲಿ ವ್ಯಾಪ್ತಿ ಹಿಗ್ಗಲಿದೆ. ತಲಾ ಸುಮಾರು 125 ವಾರ್ಡ್‌ಗಳ ಮೂರು ನಗರ ಪಾಲಿಕೆಗಳನ್ನು ರಚಿಸುವ ಯೋಜನೆ ಇದ್ದು ಅದಕ್ಕೆ ತಕ್ಕಂತೆ 'ಗ್ರೇಟರ್ ಬೆಂಗಳೂರು ಪ್ರದೇಶ'ದ ಗಡಿಯನ್ನು ಗುರುತಿಸಲಾಗುತ್ತದೆ. ನಗರದ ಸುತ್ತಲಿರುವ ಕೈಗಾರಿಕಾ ಪ್ರದೇಶಗಳನ್ನೂ ಒಳಗೊಂಡಂತೆ ಎಲೆಕ್ಟ್ರಾನಿಕ್ ಸಿಟಿ, ಅತ್ತಿಬೆಲೆ, ಜಿಗಣಿ ಕೈಗಾರಿಕೆ ಪ್ರದೇಶ, ಬೊಮ್ಮಸಂದ್ರ, ಸರ್ಜಾಪುರ, ಬಾಗಲೂರು, ರಾಜಾನುಕುಂಟೆ, ಹೆಸರಘಟ್ಟ, ದಾಸನಪುರ, ಮಾಕಳಿ, ತಾವರೆಕೆರೆ, ಕುಂಬಳಗೋಡು, ಕಗ್ಗಲಿಪುರ, ಹಾರೋಹಳ್ಳಿಯನ್ನು ಗ್ರೇಟರ್ ಬೆಂಗಳೂರು ಪ್ರದೇಶಕ್ಕೆ ಸೇರಿಸಿಕೊಳ್ಳುವ ಸಾಧ್ಯತೆ ಇದೆ. ಕಾಯ್ದೆಯಲ್ಲೇ ಇರುವಂತೆ ಎಲ್ಲ ನಗರ ಪಾಲಿಕೆಗಳ ಹೆಸರು 'ಬೆಂಗಳೂರು' ಎಂದೇ ಆರಂಭವಾಗಬೇಕಿದೆ. 'ಬೆಂಗಳೂರು ಕೇಂದ್ರ ನಗರ ಪಾಲಿಕೆ', 'ಬೆಂಗಳೂರು ಉತ್ತರ ನಗರ ಪಾಲಿಕೆ', 'ಬೆಂಗಳೂರು ದಕ್ಷಿಣ ನಗರ ಪಾಲಿಕೆ' ಹೀಗೆ ಹೆಸರಿಸಲಾಗುತ್ತದೆ. ಗ್ರೇಟರ್ ಬೆಂಗಳೂರು ಪ್ರದೇಶ ವ್ಯಾಪ್ತಿಯನ್ನು ಹಿಗ್ಗಿಸಿದ ಮೇಲೆ ಅದರನ್ವಯ ಮೂರು ಅಥವಾ ಐದು ನಗರಪಾಲಿಕೆಗಳನ್ನು ರಚಿಸಲಾಗುತ್ತದೆ ಎಂದು ಸರ್ಕಾರಿ ಮೂಲಗಳು ಮಾಹಿತಿ ನೀಡಿವೆ.

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು